ಪ್ರಬುದ್ಧ ಕರ್ಣಾಟಕ

ಸಂಪುಟ ೯೧ ಸಂಚಿಕೆ ೩೫೧

೨೦೧೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ಣಾಟಕ

ಸಂಪುಟ ೯೧

ಸಂಚಿಕೆ ೩೫೧

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೨೦೧೮

ಈ ಸಂಚಿಕೆಯ ಲೇಖಕರು

೧. **ಶ್ರೀ ಕೆ.ಎಂ. ಚಿದಂಬರಮೂರ್ತಿ**
ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು
ಹುಣಸೂರು - ೯೯೬೪೨೬೪೨೯೧

೨. **ಶ್ರೀ ಹೊಂಬಯ್ಯ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

೩. **ಪ್ರೊ. ಕೆ.ಎನ್. ಗಂಗಾನಾಯಕ್**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

೪. **ಬಿ.ಕೆ. ಗಾಯತ್ರೀ**
ನಂ. ೩, ಶ್ರೀಕೃಷ್ಣ, ವೆಸ್ಟ್ ಪಾರ್ಕ್ ರೋಡ್
ಮಲ್ಲೇಶ್ವರಂ, ಬೆಂಗಳೂರು – ೫೬೦ ೦೦೩

೫. **ಕುಪ್ಪಳ್ಳಿ ಎಂ. ಬೈರಪ್ಪ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಸಂಪಾದಕರ ನುಡಿ

ಪ್ರಬುದ್ಧ ಕರ್ಣಾಟಕದ ೯೧ನೇ ಸಂಪುಟದ ೩೫೧ನೇ ಸಂಚಿಕೆಯನ್ನು ಓದುಗರ ಕೈಗೊಪ್ಪಿಸಲು ಸಂತೋಷವಾಗುತ್ತಿದೆ.

ಪ್ರಬುದ್ಧ ಕರ್ಣಾಟಕಕ್ಕೆ ಸ್ವತಂತ್ರವೂ ಸಂಶೋಧನಾತ್ಮಕವೂ ಆದ ಲೇಖನಗಳನ್ನು ಕಳುಹಿಸುವ ಲೇಖಕರು, ಲೇಖನದಲ್ಲಿನ ಉದ್ಧರಣಗಳಿಗೆ ಆಕರ ಸಂಖ್ಯೆಯನ್ನೂ ನೀಡಬೇಕೆಂದು ಕೋರುತ್ತೇನೆ. ಬೇರೆ ಕಡೆ ಪ್ರಕಟವಾದ ಲೇಖನಗಳನ್ನು ಪ್ರಕಟಿಸುವುದಿಲ್ಲ. ಲೇಖನಗಳು ಕನಿಷ್ಠ ಪಕ್ಷ ೪ ಫೂಲ್‌ಸ್ಕೇಪ್ ಪುಟಗಳಷ್ಟು ಇರಲಿ.

ಲೇಖನಗಳನ್ನು ಈ ಕೆಳಕಂಡ ವಿಳಾಸಗಳಿಗೆ ಕಳುಹಿಸಬೇಕಾಗಿ ಕೋರುತ್ತೇನೆ.

ಪ್ರೊ. ಕೆ.ಎನ್. ಗಂಗಾನಾಯಕ್
ಸಂಪಾದಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

ಸಂಪಾದಕ
ಪ್ರೊ. ಕೆ.ಎನ್. ಗಂಗಾನಾಯಕ್

೧. ಪತ್ತೇದಾರಿ ಕಾದಂಬರಿಕಾರನೊಬ್ಬನ ಆತ್ಮಕಥೆ 'ನನ್ನ ನೋವು ನಲಿವು – ಜೀವನ ಇತಿಹಾಸ'

– ಕೆ.ಎಂ. ಚಿದಂಬರಮೂರ್ತಿ

ಆಧುನಿಕ ಪತ್ತೇದಾರಿ ಸಾಹಿತ್ಯ ಲೋಕದಲ್ಲಿ ಎನ್. ನರಸಿಂಹಯ್ಯ ಅವರದ್ದು ಮಹತ್ವದ ಹೆಸರಾಗಿದೆ. ಇವರು ಸಹ ಇತರ ಆಧುನಿಕ ಸಾಹಿತ್ಯ ಪಂಥದವರಂತೆ ಆತ್ಮಕಥೆಯನ್ನು ಹೊರತಂದಿದ್ದು ಅದು 'ನನ್ನ ನೋವು ನಲಿವು – ಜೀವನ ಇತಿಹಾಸ' (೨೦೦೧ರಲ್ಲಿ) ಎಂದು ಎರಡು ಭಾಗಗಳಲ್ಲಿ ಪ್ರಕಟಗೊಂಡಿದೆ. ಕೃತಿ ರಚನೆಯ ಹಿನ್ನೆಲೆಯನ್ನು ಆತ್ಮಕಥೆಯ ಮುನ್ನುಡಿ 'ನನ್ನ ನಿವೇದನೆ . . . .'ಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ. "ನನ್ನ ಆತ್ಮಚರಿತ್ರೆಯನ್ನು ಬರೆಯಬೇಕೆಂಬ ಉದ್ದೇಶವೇ ನನಗಿರಲಿಲ್ಲ. ನನ್ನ ಅಭಿಮಾನಿ ಓದುಗರಲ್ಲೊಬ್ಬರಾಗಿ ಆನಂತರ ಗೆಳೆಯರಾಗಿ ಮಾರ್ಪಟ್ಟ ಶ್ರೀ ಬಿ. ಕಾಮತ್ ಅವರು ನನ್ನನ್ನು ಆಗಾಗ್ಗೆ ಸಂಧಿಸುತ್ತಿದ್ದು, ಕ್ಷೇಮ ಸಮಾಚಾರದ ವಿಷಯವಾಗಿ ಮಾತನಾಡುತ್ತಿದ್ದರು. ಒಂದು ದಿನ ನನ್ನೊಡನೆ ಮಾತನಾಡುತ್ತಾ ಮಾತಿನ ನಡುವೆ ನೀವೀಗ ಪತ್ತೇದಾರಿ ಕಾದಂಬರಿಗಳನ್ನು ಬರೆಯುವುದನ್ನು ನಿಲ್ಲಿಸಿ, ಇತರ ಕೃತಿಗಳನ್ನು ಬರೆಯುತ್ತೀರ?, ನೀವೇಕೆ ನಿಮ್ಮ ಆತ್ಮಚರಿತ್ರೆಯನ್ನು ಬರೆಯಬಾರದು, ಬರೆಯಿರಿ ಎಂದರು. ಅಲ್ಲದೆ ಉಳಿದ ಸ್ನೇಹಿತರೂ ಹುರಿದುಂಬಿಸಿದ್ದರಿಂದ ನನಗೂ ಬರೆಯಲು ಸ್ಫೂರ್ತಿ ಉಂಟಾಯಿತು. ಹೀಗೆ ಸೃಷ್ಟಿಯಾದದ್ದು ನನ್ನ ಈ ಆತ್ಮಕಥೆ." ಇಲ್ಲಿ ಯಾವುದೇ ವಿಷಯವನ್ನು ಮುಚ್ಚಿಡದೆ ಸಂಗತಿಗಳನ್ನು ದಾಖಲಿಸಿರುವುದಾಗಿ ಪ್ರಾಮಾಣಿಕತೆಯಿಂದ ಹೇಳಿಕೊಳ್ಳುತ್ತಾರೆ.

ಎನ್. ನರಸಿಂಹಯ್ಯ ಅವರು ಆತ್ಮಕಥೆಯ ಆರಂಭದಲ್ಲಿ ತಮ್ಮ ಪೂರ್ವಾಪರ ವೃತ್ತಾಂತಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ತಮ್ಮ ಮೂಲ ಕಲ್ಲಿನಕೋಟೆ ಚಿತ್ರದುರ್ಗ ಜಿಲ್ಲೆಯಾಗಿದ್ದು ಒಂದು ಬಡಕುಟುಂಬದಲ್ಲಿ ಜನ್ಮವೆತ್ತಿದ್ದಾಗಿ ಹೇಳುತ್ತಾರೆ.

ಶ್ರೀ ಸಿ. ನಂಜಪ್ಪ ಮತ್ತು ಶ್ರೀಮತಿ ಯಲ್ಲಮ್ಮ ದಂಪತಿಗಳಿಗೆ ಎರಡನೇ ಮಗನಾಗಿ ಬೆಂಗಳೂರಿನಲ್ಲಿ ಜನಿಸಿದ ತಾನು ಅಮಾವಾಸ್ಯೆ, ಮಧ್ಯರಾತ್ರಿ ಜನಿಸಿದ್ದರಿಂದ ಜ್ಯೋತಿಷಿಗಳು 'ಠ' ಎನ್ನುವ ಅಕ್ಷರದಿಂದ ಆರಂಭವಾಗುವ ಹೆಸರಿಡಬೇಕೆಂದು ಸೂಚಿಸಿದಾಗ 'ಠೀಕಣ್ಣ' ಎಂದು ಹೆಸರಿಡಲಾಯಿತು. ಮುಂದೊಂದು ದಿನ ನರಸಿಂಹಸ್ವಾಮಿ ಕೃಪೆಯಿಂದ ನನ್ನ ಹೆಸರು 'ಎನ್. ನರಸಿಂಹಯ್ಯ' ಎಂದಾಯಿತು.

ನಮ್ಮ ತಂದೆ – ತಾಯಿಗಳಿಗೆ ಅನೇಕ ಮಕ್ಕಳಾದವು. ಅವುಗಳಲ್ಲಿ ಕೆಲವು ಹುಟ್ಟುತ್ತಲೇ ಸತ್ತು ಹೋದರು. ಕೆಲವು ಮಕ್ಕಳು ಸ್ವಲ್ಪ ದಿನ ಬದುಕಿ, ಅನಂತರ ಇಹಲೋಕ ತ್ಯಜಿಸಿದವು. ಕೊನೆಯದಾಗಿ ನಾನು ಸೇರಿದಂತೆ ಆರು ಜನ ಗಂಡು ಮಕ್ಕಳು ಕೊನೆಯ ಮಗು ಹೆಣ್ಣಾಗಿ ಏಳು ಜನ ಮಾತ್ರ ಬದುಕುಳಿದೆವು. ತಂದೆ ಸಿ. ನಂಜಪ್ಪ ಅವರು ಲಾವಣಿ ಪದಗಳನ್ನು ಕಟ್ಟಿ ಹಾಡುತ್ತಿದ್ದು ಕವಿಗಾರರೆಂದು ಪ್ರಸಿದ್ಧಿಯನ್ನು ಹೊಂದಿದ್ದರು. ಅವರ ಅಕಾಲ ಮರಣದೊಂದಿಗೆ ಅವರು ರಚಿಸಿದ್ದ ಲಾವಣಿ ಪದಗಳು, ತತ್ವಪದಗಳು ಮತ್ತು ಹಾಡುಗಾರಿಕೆಯು ಮಣ್ಣಾಯಿತೆಂದು ನೋವಿನಿಂದಲೇ ಪ್ರಸ್ತಾಪಿಸುತ್ತಾರೆ. ತಮ್ಮ ಅಲೆಮಾರಿ ಜೀವನ, ಬಾಲ್ಯದಲ್ಲೇ ಕಂಡುಂಡ ನೋವು – ನಲಿವುಗಳನ್ನು, ನೆನಪಿನ ಪುಟಗಳನ್ನು ತಿರುವಿ ಹಾಕುವ ಕೆಲಸವನ್ನು ಮಾಡುತ್ತಾರೆ. "ಕಷ್ಟ ಕಾಲದಲ್ಲಿ ಸಹಾಯ ಮಾಡಿದವರನ್ನು ಯಾವ ಕಾಲಕ್ಕೂ ಮರೆಯಬಾರದು, ಮರೆಯುವುದು ಮಾನವ ಧರ್ಮವಲ್ಲ . . . ." ಎಂದು ಜೀವನದಲ್ಲಿ ಬಂದು ಹೋದ ಗುರುಗಳು, ಮಿತ್ರರು, ಸಹಾಯ ಮಾಡಿದ ಧಣಿಗಳನ್ನು ನೆನೆಯುತ್ತಾರೆ.

ಆತ್ಮಕಥೆಗಾರರು ತಮ್ಮ ಶಿಕ್ಷಣ ತಮ್ಮ ತಂದೆಯವರ ಅಕಾಲಿಕ ಮರಣದಿಂದಾಗಿ ನಾಲ್ಕನೇ ತರಗತಿಗೆ ಅಂತ್ಯವಾಯಿತು. "ಜೊತೆಗೆ ಆ ವಯಸ್ಸಿನಲ್ಲೇ ಕುಟುಂಬದ ಜವಾಬ್ದಾರಿಯನ್ನು ಅಣ್ಣನೊಡನೆ ಹೊರಬೇಕಾಯಿತು. ಕಡು ಬಡತನದಿಂದ ಕೂಡಿದ ತುಂಬು ಕುಟುಂಬದಲ್ಲಿ ಹಿಟ್ಟಿಗೂ ತೊಂದರೆಯಾಯಿತು. ಹಿಟ್ಟು ಮಾಡಿದರೆ ರಾಗಿ ಪುಡಿ ಹೆಚ್ಚಾಗಿ ಖರ್ಚಾಗುವುದೆಂದು, ಅಂಬಲಿಯನ್ನು ಮಾಡಿ ಕುಡಿಯಬೇಕಾಗಿ ಬಂತು. ಒಂದೊಂದು ದಿನ ಅದೂ ಕೂಡ ಇಲ್ಲ. ಇಂತಹ ಸ್ಥಿತಿಯಲ್ಲಿದ್ದಾಗ, ಹತ್ತು ವರ್ಷದವನಾಗಿದ್ದಾಗಲೇ ಟೈಲರ್ ಅಂಗಡಿಯೊಂದರಲ್ಲಿ ಕಾಜ – ಗುಂಡಿ ಮಾಡುವ ಕೆಲಸಕ್ಕೂ ಸೇರಿಕೊಂಡೆನು. ಅದರಿಂದ ಬರುವ ಎರಡಾಣೆ ಆದಾಯ ಸಾಲದಾಗಿ, ದೇಶಬಂಧು ಎಂಬ ಮುದ್ರಣಾಲಯಕ್ಕೆ ಸೇರಿಕೊಂಡೆ. ಅಲ್ಲಿಗೆ ಬರುತ್ತಿದ್ದ ವಾರಪತ್ರಿಕೆಯನ್ನು ಓದುತ್ತಾ, ಪ್ರಶ್ನೋತ್ತರಗಳಿಗೆ ಉತ್ತರ ಬರೆಯುತ್ತಾ, ಸಾಹಿತ್ಯದ ಅಭಿರುಚಿ ಬೆಳೆಸಿಕೊಂಡೆನು" ಎಂದು ನುಡಿಯುತ್ತಾರೆ.

ಆತ್ಮಕಥೆಗಾರರು, ಬಾಲ್ಯದಲ್ಲಿ ತಾಯಿಯೊಡನೆ, ತರೀಕೆರೆಯಿಂದ ಬೆಂಗಳೂರಿಗೆ ಓಡಾಡಿಕೊಂಡಿದ್ದರು. ಚಿಕ್ಕಮಗಳೂರು ಎಂದು ಹೆಸರು ಬರಲು ಕಾರಣವೇನೆಂದು ಹೀಗೆ ಹೇಳುತ್ತಾರೆ : "ರುಕ್ಮಾಂಗನೆಂಬ ರಾಜನು ಸಕರಾಯಪಟ್ಟಣವನ್ನು ಆಳಿಕೊಂಡಿದ್ದು ಆತನ ದೊಡ್ಡ ಮಗಳನ್ನು ಹಿರೇಮಗಳೂರಿಗೂ, ಕಿರೇಮಗಳನ್ನು ಚಿಕ್ಕಮಗಳೂರಿಗೂ ಕೊಟ್ಟು ಮದುವೆ ಮಾಡಿದ್ದು, ದೊಡ್ಡ ಮಗಳನ್ನು ಕೊಟ್ಟ ಊರಿಗೆ ಹಿರೇಮಗಳೂರು ಎಂದು, ಕಿರಿಯ ಮಗಳನ್ನು ಕೊಟ್ಟ ಊರಿಗೆ ಚಿಕ್ಕಮಗಳೂರೆಂದು ಹೆಸರಾಯಿತೆಂದು ಅದರ ಇತಿಹಾಸವನ್ನು ದಾಖಲಿಸುತ್ತಾರೆ. ಅಲ್ಲದೇ ಅಲ್ಲಲ್ಲಿ ಇದ್ದ ವಿಶಿಷ್ಟ ಸಾಮಾಜಿಕ ಸಂಪ್ರದಾಯಗಳನ್ನು ದಾಖಲಿಸುತ್ತಾರೆ. "ಹೆಣ್ಣು ಮಕ್ಕಳು ಋತುಮತಿಯಾಗುವ ಮೊದಲೇ ವಿವಾಹವಾದರೆ ಅವರಿಗೆ ಮುತ್ತೈದೆ ಸ್ಥಾನ ನೀಡುತ್ತಿದ್ದರು. ಅಂತಹವರು ಶುಭಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವಿರುತ್ತಿತ್ತು. ಋತುಮತಿಯಾದ ನಂತರ ಮದುವೆಯಾದರೆ ಮದುವೆ, ನಾಮಕರಣದಂತಹ ಬೇರೆ ಯಾವ ಶುಭಕಾರ್ಯಗಳಿಗೂ ಅವರಿಗೆ ಅವಕಾಶ ನೀಡುತ್ತಿರಲಿಲ್ಲ. ಮುತ್ತೈದೆ ಸ್ಥಾನಕ್ಕೂ ಅವಕಾಶವಿರುತ್ತಿರಲಿಲ್ಲ" ಎಂದು ಅಲ್ಲಿನ ಮೌಢ್ಯತೆಗಳನ್ನು ಅಲ್ಲಲ್ಲಿ ಪ್ರಸ್ತಾಪಿಸುತ್ತಾರೆ. ಗಂಡ ಸತ್ತ ಮೂರು ದಿನದ ನಂತರ ಹಾಲು ತುಪ್ಪದ ಕಾರ್ಯ ಮಾಡುವರು. ಅದು ಮುಗಿದ ನಂತರ ವಿಧವೆಯವರೇ ಸೇರಿ ಆತನ ಹೆಂಡತಿಯ ಕೈಬಳೆ ಒಡೆದು ಹಣೆಯ ಮೇಲಿನ ಕುಂಕುಮ ಅಳಿಸಿ, ಮಾಂಗಲ್ಯ ಕಿತ್ತು ಕಾಲುಂಗುರ ತೆಗೆಯುವ ನಿಯಮಗಳು, ಮದುವೆಯ ಸಂದರ್ಭದಲ್ಲಿ ಎಂಟು ದಿನಗಳವರೆಗೆ ನಡೆಯುವ ಸಾಂಪ್ರದಾಯಿಕ ಆಚರಣೆಗಳು, ನಾಮಕರಣ ಶಾಸ್ತ್ರದಂತಹ ಸರ್ವೇ ಸಾಮಾನ್ಯ ಸಾಮಾಜಿಕ ಆಚರಣೆಗಳು ಹೀಗೆ ಸುತ್ತಲ ಬದುಕಿನ ಆಗುಹೋಗುಗಳು ಇಲ್ಲಿ ಅನಾವರಣಗೊಳ್ಳುತ್ತವೆ. ಹುಟ್ಟಿನಿಂದ ಸಾವಿನವರೆಗಿನ ಈ ಆಚರಣೆಗಳನ್ನು ಒಂದು ಸಂಸ್ಕೃತಿಯ ಜೀವನ ಚಕ್ರ ಹಾಗೂ ಸಾವಿನ ನಂತರವೂ ಸಂಸ್ಕೃತಿಯ ಕೊಂಡಿ ಯಾವಾಗಲೂ ಕಳಚಿ ಮುನ್ನಡೆಯುತ್ತದೆ ಎಂಬುದನ್ನು ಈ ಆತ್ಮಕಥೆ ಧ್ವನಿಸುತ್ತದೆ.

ಬಾಲ್ಯದಿಂದ ಹರಯಕ್ಕೆ ಕಾಲಿಡುತ್ತಿದ್ದಂತೆ ಆತ್ಮಕಥೆಗಾರರ ಹುಡುಗಾಟಿಕೆಗಳು, ದುಷ್ಟತನದ ಗುಣಗಳು ಪ್ರದರ್ಶಿತವಾಗುತ್ತವೆ. ಗೆಳೆಯರೊಡನೆ ಬೀಡಿ, ಸಿಗರೇಟ್ ಸೇದುವ ಮೂಲಕ ದುಷ್ಟ ಚಟಗಳಿಗೆ ವಾಲಿದ್ದನ್ನು ನೆನಪಿಸುತ್ತಾರೆ. "ಸ್ನೇಹಿತರು ಬಲವಂತವಾಗಿ ನನ್ನ ತುಟಿಗಳಲ್ಲಿ ಬೀಡಿ ಇಟ್ಟು ಸೇದಿಸಿದುದು, ಆ ನಿಮಿಷದಲ್ಲಿ ಗಂಟಲಲ್ಲಿ ಉರಿಯಾಗಿ, ಕೆಮ್ಮಲು ತೊಡಗಿದೆ. ಹಾಗೆ ಸುಧಾರಿಸಿಕೊಳ್ಳಲು ತೊಡಗಿದರೂ ಕೆಮ್ಮು ನಿಲ್ಲದೇ ಮೂಗಿನ ಹೊಳ್ಳೆಗಳಿಂದ ನೀರು ಹರಿಯಿತು.

ಸ್ನೇಹಿತರೊಡನೆ ಸಂತೆಗೆ ಹೋಗಿ ಕಿತ್ತಲೆ ಹಣ್ಣುಗಳನ್ನು ಕದ್ದು ಅಂಗಡಿ ಮಾಲೀಕರಿಂದ ಮೈ ಹಣ್ಣಾಗುವಂತೆ ಹೊಡೆಸಿಕೊಂಡೆ. ತಾಯಿಯ ಬುದ್ಧಿವಾದ, ಹಿರಿಯರ ಬುದ್ಧಿವಾದದಿಂದ ಅವುಗಳಿಂದ ದೂರ ಸರಿದು ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡೆನು" ಎಂದು ಹೇಳಿಕೊಳ್ಳುತ್ತಾರೆ.

"ಅಣ್ಣ ತಮ್ಮರಿಬ್ಬರೂ ದುಡಿದರೂ ಕುಟುಂಬದ ನಿರ್ವಹಣೆ ತುಂಬಾ ಕಷ್ಟಕರವಾಗಿತ್ತು. ಆಗ ಅನುಭವಿಸಿದ ನೋವು ಶತ್ರುವಿಗೂ ಬರಬಾರದು. ಚಿಕ್ಕಮಗಳೂರು, ಶಿವಮೊಗ್ಗ, ಮೂಡಿಗೆರೆ, ಭದ್ರಾವತಿ, ತರೀಕೆರೆ ಈ ಊರುಗಳು ಮಲೆನಾಡಿಗೆ ಸೇರಿದ್ದು, ಭತ್ತವನ್ನು ಹೆಚ್ಚು ಬೆಳೆಯುತ್ತಿದ್ದರು. ಕೂಲಿಗಾಗಿ ಅಣ್ಣನೊಡನೆ ಹೋಗಿ ಅಷ್ಟೋ ಇಷ್ಟೋ ಭತ್ತ ಸಂಪಾದಿಸಿ ಒಪ್ಪೊತ್ತಿನ ಊಟಕ್ಕೆ ದಾರಿ ಮಾಡಿಕೊಂಡೆವು. ಫಸಲು ಮುಗಿದು ಕೂಲಿ ಇಲ್ಲದಿದ್ದಾಗ "ವಾರಕ್ಕೆರಡು ದಿನ ಅನ್ನ ಮಾಡಿದರೆ ಉಂಟು, ಇಲ್ಲವಾದರೆ ಅದೂ ಇಲ್ಲ. ತಾಯಿಯು ನಮ್ಮ ಕಷ್ಟ ನೋಡಲಾಗದೆ ಅವರು ಕೂಲಿಗೆ ಹೋಗಿ ಬಂದ ಹಣದಿಂದ ನುಚ್ಚಕ್ಕಿ ತಂದು ಅನ್ನ ಮಾಡಿ ತಮಗೆಲ್ಲಾ ಬಡಿಸುತ್ತಿದ್ದರು. ತಂದೆ ಕಳೆದುಕೊಂಡು ಅನಾಥರಾದ ನಮ್ಮ ಬಾಲ್ಯಜೀವನ ತುಂಬಾ ಸಂಕಷ್ಟದ ಹಾದಿಯಲ್ಲಿತ್ತು" ಎಂದು ನೊಂದ ಮನಸ್ಸಿನಲ್ಲಿ ಹೇಳಿಕೊಂಡಿದ್ದಾರೆ.

"ಅನಂತರದಲ್ಲಿ ಪ್ರಾಯಕ್ಕೆ ಕಾಲಿಡುತ್ತಿದ್ದಂತೆ ಇನ್ನಿತರ ಕೆಲಸಗಳಲ್ಲಿ ತೊಡಗಿದೆ. ದಲಿತರಿಗೆ ರಟ್ಟೆಯೇ ಬಂಡವಾಳ. ಭೌತಿಕ ಶ್ರಮವೇ ಉತ್ಪಾದನೆಯ ಮೂಲ. ರಟ್ಟೆ ಮತ್ತು ದುಡಿಮೆ ಕೈಕೊಟ್ಟರೆ ಅವರಿಗೆ ಭಿಕ್ಷೆಯೇ ಗತಿ. ಅದೂ ಸಿಗದಿದ್ದರೆ ಉಪವಾಸ. ಧೈರ್ಯವಿದ್ದರೆ ಕಳ್ಳತನ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು. ಇದು ದಲಿತರ ತುತ್ತಿನ ಚೀಲದ ಕಥೆ (ಲೇಖನ : ನೀಲಗಿರಿ ತಳವಾರ). ಮೊದ ಮೊದಲು ಫುಟ್‌ಬಾಲ್ ಹೊಲಿಯುವುದು ಮತ್ತು ಸೈಕಲ್ ತುಳಿದು ಅಂಗಡಿಗಳಿಗೆ ಮಾರಾಟ ಮಾಡುವುದು ಜೊತೆಯಲ್ಲಿ ವರ್ಕ್‌ಷಾಪ್ ಸೇರಿಕೊಂಡು ಬಸ್‌ಗಳಿಗೆ ಇಂಧನ ತುಂಬುವುದು, ಗ್ರೀಸ್, ಆಯಿಲ್, ಭರ್ತಿ ಮಾಡುವ ಕೆಲಸ ಮಾಡಿದೆ. ಮೆಕ್ಯಾನಿಕ್‌ಗಳಿಗೆ ಸಹಾಯಕರಾಗಿ ಸೇರಿಕೊಂಡೆನು. ಇದೇ ಸಂದರ್ಭದಲ್ಲಿ ತನ್ನ ಇಪ್ಪತ್ತೊಂರನೇ ವಯಸ್ಸಿನಲ್ಲಿ ನಾಗರತ್ನಮ್ಮ ಎಂಬಾಕೆಯೊಡನೆ ವೈವಾಹಿಕ ಜೀವನಕ್ಕೆ ಕಾಲಿಟ್ಟೆನು. ಮದುವೆಯಾದ ಏಳನೇ ವರ್ಷಕ್ಕೆ ತಂದೆಯಾದೆ. ಲಾರಿಯ ಕ್ಲೀನರ್ ಆಗಿ, ಡ್ರೈವರ್ ಆಗಿ, ಮತ್ತೆ ಬಸ್ ಕಂಡಕ್ಟರ್ ಆಗಿ ದುಡಿದೆನು. ಆಗ ಬರುತ್ತಿದ್ದ ಸಂಬಳದಲ್ಲಿ ರಾಮಾಯಣ, ಮಹಾಭಾರತದ ಪುಸ್ತಕಗಳನ್ನು ಕೊಂಡು ಬಿಡುವಿನ ವೇಳೆಯಲ್ಲಿ ಓದುವ ಹವ್ಯಾಸ ಮಾಡಿಕೊಂಡೆ. ಅದೇ ಸಮಯದಲ್ಲಿ ಲಾವಣಿ ಪದಗಳನ್ನು ರಚಿಸಿ ನಾನೇ ಗೊಣಗುತ್ತಿದ್ದೆನು. ನಂತರದಲ್ಲಿ ಸಾಹಿತ್ಯ ಕೃಷಿಕನಾಗಿ ರೂಪಿತವಾದೆನು.

ಕೇವಲ ಇಪ್ಪತ್ನಾಲ್ಕು ಪುಟಗಳ ಪತ್ತೇದಾರಿ ಪುಸ್ತಕಗಳನ್ನು ಕೊಂಡು ಆಗಾಗ ಓದುತ್ತಿದ್ದೆ. ಆಗ ಎನ್.ಎಸ್. ಗುರುರಾಜಾಚಾರ್ಯ, ಎನ್. ಗುಂಡಾಶಾಸ್ತ್ರಿ, ಎಚ್. ಕೃಷ್ಣಮೂರ್ತಿ ಅವರ ಪತ್ತೇದಾರಿ ಕಾದಂಬರಿಗಳು ಪ್ರಕಟವಾಗುತ್ತಿದ್ದವು. ಅವುಗಳನ್ನು ಓದುತ್ತಾ, ತಾನು ಅವರಂತೆ ಬರೆಯಬೇಕೆಂದು ಒಂದೆರೆಡು ಕಥೆಗಳನ್ನು ಬರೆದು ಕಥಾವಳಿ ಪತ್ರಿಕೆಗೆ ಕಳುಹಿಸಿದೆ. ಆದರೆ ಆ ಕಥೆ ಪ್ರಕಟವಾಗಲಿಲ್ಲ. ಬದಲಾಗಿ ಪತ್ರಿಕೆಯ ಲಗು – ಬಗು ಎಂಬ ಪ್ರಶ್ನೋತ್ತರಗಳಿಗೆ ಕಳುಹಿಸಿದ ನನ್ನ ಉತ್ತರಗಳು ಪ್ರಕಟವಾದಾಗ ಗೆಳೆಯರೊಡನೆ ಹಂಚಿಕೊಂಡೆ." ಆ ಪತ್ರಿಕೆಯ ಸಂಪಾದಕರನ್ನು ಭೇಟಿ ಮಾಡಿ ಮಾತನಾಡಿಸಿ ತಮ್ಮ ಸಾಹಿತ್ಯ ಕೃಷಿಗೆ ನಾಂದಿ ಹಾಡಿದ್ದನ್ನು ಮನಬಿಚ್ಚಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಪುಸ್ತಕಗಳನ್ನು ಓದುವುದು ಮತ್ತು ಕೊಳ್ಳುವುದು ಹೆಚ್ಚಾದಂತೆ ಒಂದು ವಾಚನಾಲಯ ಆರಂಭಿಸಬೇಕೆಂದು ಯೋಚಿಸಿ, ಹಳೆಯ ಪುಸ್ತಕಗಳನ್ನು ಶೇಖರಿಸುತ್ತಾ ಬಂದರಂತೆ. ಅದರಂತೆ ಬೆಂಗಳೂರಿನ ಹಳೆಯ ಪುಸ್ತಕದಂಗಡಿಯೊಂದರಲ್ಲಿ ಹೊಸ ಪತ್ತೇದಾರಿ ಕಾದಂಬರಿಯೊಂದನ್ನು ಕೊಳ್ಳಲು ಹೋದೆನು. ಅಂಗಡಿ ಮಾಲೀಕ ಪುಸ್ತಕವನ್ನು ಕೈಗಿಟ್ಟರಂತೆ. "ಒಂದೇ ಒಂದು ಪತ್ತೇದಾರಿ ಕಾದಂಬರಿಯು ಚೆನ್ನಾಗಿಲ್ಲ. ನನಗೆ ಹೇಳಿದರೆ ಇದಕ್ಕಿಂತ ನಾನೇ ಚೆನ್ನಾಗಿ ಒಂದು ಪತ್ತೇದಾರಿ ಕಾದಂಬರಿಯನ್ನು ಸುಮ್ಮನೆ ಬರೆದುಕೊಡುತ್ತೇನೆ" ಎಂದು ಹೇಳಿದರಂತೆ. ಅಂಗಡಿ ಮಾಲೀಕರು ಹಾಗಾದರೆ ಬರೆದುಕೊಡು ನಾನು ಅಚ್ಚು ಹಾಕಿಸುತ್ತೇನೆ ಎನ್ನಲು ಮಾಡುವ ಕೆಲಸಕಾರ್ಯಗಳನ್ನು ಬಿಟ್ಟು ನಾಲ್ಕು ದಿನದಲ್ಲಿ ಕಥೆಯನ್ನು ಸಿದ್ಧಪಡಿಸಿ ಕಾದಂಬರಿ ರಚಿಸಿದರಂತೆ. ಆ ಕಾದಂಬರಿಗೆ 'ಪತ್ತೇದಾರಿ ಪುರುಷೋತ್ತಮ' ಎಂಬ ಶೀರ್ಷಿಕೆಯನ್ನಿಟ್ಟು ಅವರಿಗೆ ಕೊಡಲು ಅದು ಪ್ರಕಟಗೊಂಡು ಸಾಕಷ್ಟು ಓದುಗರನ್ನು ಆಕರ್ಷಿಸಿತು. "ಕನ್ನಡ ಓದುಗರಿಗೆ ನನ್ನನ್ನು ಪ್ರಪ್ರಥಮವಾಗಿ ಪರಿಚಯ ಮಾಡಿಕೊಟ್ಟವರು ಶ್ರೀ ಟಿ. ನಾರಾಯಣ ಅಯ್ಯಂಗಾರ್ ಅವರು. ಅವರಿಂದ ಇತರ ಪ್ರಕಾಶಕರು ನನ್ನಲ್ಲಿಗೆ ಬರುವಂತಾಯಿತು. ಅಯ್ಯಂಗಾರ್ ಅವರ ಮಹದುಪಕಾರವನ್ನು ನಾನು ಯಾವ ಕಾಲಕ್ಕೂ ಮರೆಯುವ ಹಾಗಿಲ್ಲ. . ." ಎಂದು ತಮ್ಮ ಕೃತಜ್ಞತೆಯನ್ನು ಅವರಿಗೆ ಅರ್ಪಿಸುತ್ತಾರೆ.

ಕಥೆಗಾಗಿ ಬೇರೆ ಯಾವ ಭಾಷೆಯ ಕೃತಿಗಳನ್ನು ಓದುತ್ತಿರಲಿಲ್ಲ. ನನಗೆ ಬೇರೆ ಇತರ ಭಾಷೆ ತಿಳಿದಿದ್ದರಲ್ಲವೇ ಓದುವುದು. ಹಾಗಾಗಿ ಸ್ವತಃ ತನ್ನ ಆಲೋಚನೆಯ ಮೇರೆಗೆ, ಸುತ್ತಮುತ್ತಲ ಘಟನೆಗಳನ್ನು ಇಟ್ಟುಕೊಂಡು ಕಾದಂಬರಿಗಳ ರಚನೆಯಲ್ಲಿ ತೊಡಗಿದೆನು. ಕೋರ್ಟ್ ಪೋಲೀಸ್ ಕಛೇರಿಗಳಿಗೆ ಹೋಗಿ ಜ್ಞಾನವನ್ನು ಸಂಪಾದಿಸಿ, ಅಪರಾಧ ಹಿನ್ನೆಲೆಯನ್ನು ಗ್ರಹಿಸುತ್ತಾ ಬಂದೆನು. ಪುರುಷೋತ್ತಮನ ಸಾಹಸ,

ಮಧುಸೂಧನನ ಪರಿಶೋಧನಾ ಚತುರತೆ, ಅರಿಂಯಜನ ವಿಕ್ರಮ, ಗಾಳಿರಾಯನ ಮಹತ್ಸಾಧನೆ ಮೊದಲಾದ ನಾಯಕನ ಹೆಸರಿನಲ್ಲಿ ಆಕರ್ಷಕ ಶೀರ್ಷಿಕೆಗಳನ್ನಿಟ್ಟು ಸುಮಾರು ಮುನ್ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದನ್ನು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾರೆ. ಪತ್ತೇದಾರಿ ಕಾದಂಬರಿಗಳೊಂದಿಗೆ ಅಲ್ಲೊಂದು ಇಲ್ಲೊಂದು ಸಾಮಾಜಿಕ ಕಾದಂಬರಿಗಳನ್ನು ರಚಿಸಿದ್ದನ್ನು ಆತ್ಮಕಥೆಯಲ್ಲಿ ನಿರೂಪಿಸುತ್ತಾರೆ. ಅಷ್ಟೇ ಅಲ್ಲದೇ ಪತ್ತೇದಾರಿ ಕಾದಂಬರಿ ಬರೆಯುವುದಕ್ಕಿಂತ ಸಾಮಾಜಿಕ ಕಾದಂಬರಿ ಬರೆಯುವುದು ತುಂಬಾ ಸುಲಭ. ಸಾಮಗ್ರಿಗಳನ್ನು ಹುಡುಕಿಕೊಂಡು ಅಲೆಯಬೇಕಾಗಿಲ್ಲ, ಒಬ್ಬೊಬ್ಬರ ಮನೆ ಕಥೆ ಕೇಳಿ ಕಥೆಗೆ ಬೇರಾವ ಹೊಸ ಸನ್ನಿವೇಶಗಳನ್ನು ಸೇರಿಸಿ ಬರೆಯಬಹುದು ಎಂದು ತಮ್ಮ ಅಭಿಪ್ರಾಯ ತಿಳಿಸುವರು.

ಒಮ್ಮೆ, ಕಾಮಚೇಷ್ಟೆಯ ಸಾಮಾಜಿಕ ಕಾದಂಬರಿಗಳನ್ನು ನೀವು ಬರೆಯುತ್ತಿದ್ದೀರಿ : ಅದು ಅಶ್ಲೀಲವಲ್ಲವೇ? ಎಂದು ಇತರರು ಇವರನ್ನು ಪ್ರಶ್ನಿಸಿದಾಗ ಶೀಲ – ಅಶ್ಲೀಲ ಎಂದರೇನು? ಎಂಬುದಾಗಿ ಪ್ರಶ್ನಿಸಿ ತಮ್ಮ ದಿಟ್ಟತನದಲ್ಲಿ ಹೀಗೆ ಉತ್ತರವನ್ನು ನೀಡುತ್ತಾರೆ.

"ಉಚ್ಚೆಯಾ ಬಚ್ಚಲವು ತುಚ್ಛವೆಂದೆನಬೇಡ।
ಅಚ್ಯುತನು ಬಿದ್ದ ಅಜಬಿದ್ದ – ದೇವೇಂದ್ರ।
ಎಚ್ಚೆತ್ತು ಬಿದ್ದ ಸರ್ವಜ್ಞ"

ಎಂದು ಸರ್ವಜ್ಞ ಕವಿ ಹೇಳಿರುವನು. ಇದು ಶುದ್ಧವೋ? ಅಶುದ್ಧವೋ? ನೀವೇ ಹೇಳಿ ಎಂದು ಮರುಪ್ರಶ್ನೆ ಹಾಕಿ, ಹೋರಾಟದ ನಡುವೆ ಕಾದಂಬರಿ ರಚಿಸಿದ್ದನ್ನು ನೆನಪಿಸುತ್ತಾರೆ.

ಎನ್. ನರಸಿಂಹಯ್ಯ ಅವರು ತಮ್ಮ ಸಾಹಿತ್ಯ ಕೃಷಿ ಮೂರು ದಶಕಗಳವರೆಗೂ ನಡೆದು ಸುಮಾರು ೫೪೦ಕ್ಕೂ ಹೆಚ್ಚು ಕಾದಂಬರಿಗಳು ರಚನೆಯಾಗಿರುವುದನ್ನು ತಿಳಿಸುತ್ತಾ ಅವುಗಳ ಪಟ್ಟಿಯನ್ನು ತಮ್ಮ ಆತ್ಮಕಥೆಯ ಕೊನೆಯಲ್ಲಿ ನೀಡಿರುತ್ತಾರೆ. ಅಲ್ಲದೇ ಪತ್ತೇದಾರಿ ಕಾದಂಬರಿಗಳ ಪ್ರಕಟಣೆ, ಇತರ ಸಾಹಿತ್ಯ ಪ್ರಕಾರಗಳ ಮಧ್ಯೆ ಪ್ರಕಟಗೊಳ್ಳದೇ ಹಾಗೆಯೇ ಹಸ್ತಪ್ರತಿ ರೂಪದಲ್ಲಿ ಉಳಿದುಕೊಂಡವು ಎಂದು ನೋವಿನಲ್ಲಿಯೇ ಹೇಳುವರು.

ಒಟ್ಟಾರೆ ಪತ್ತೇದಾರಿ ಕಾದಂಬರಿಯ ಸಾರ್ವಭೌಮ ಎನ್. ನರಸಿಂಹಯ್ಯ ಅವರು ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ಜನನ, ಬಾಲ್ಯ ಜೀವನ, ಶಿಕ್ಷಣ, ವೈವಾಹಿಕ ಜೀವನ, ವೃತ್ತಿ ಮತ್ತು ಸಾಹಿತ್ಯ ಕೃಷಿ, ಜೀವನ ಸಾಧನೆ, ಅರಸಿ ಬಂದ ಪ್ರಶಸ್ತಿ, ಗೌರವಗಳು ಈ ಮೊದಲಾದ ತಮ್ಮ ಬದುಕಿನ ನೆನಪುಗಳನ್ನು ತಮ್ಮ ಆತ್ಮಕಥೆಯಲ್ಲಿ ದಾಖಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ನಿರೂಪಣೆ ಮತ್ತು ಭಾಷಾ

ಶೈಲಿ. ತಂತ್ರಗಳಲ್ಲಿ ಬಿಗಿಯಾದ ಬಂಧವಿರದ ಕಾರಣ ಇವರ ಆತ್ಮಕಥೆಯು ಸಾಮಾನ್ಯ ಮಟ್ಟದ ಕೃತಿ ಎನಿಸಿಕೊಳ್ಳುತ್ತದೆ. ಇದಕ್ಕೆ ಅವು ಗಳಿಸಿದ ಶಿಕ್ಷಣ, ಸಾಹಿತ್ಯ, ಚರಿತ್ರೆ ಯಾವುದರ ಅರಿವು ಇಲ್ಲದಿರುವುದು ಕಾರಣವಾಗಿರಬಹುದು. ಏನೇ ಆಗಲಿ ಇವರ ಸಾಧನೆ ಮೆಚ್ಚುವಂತಹದ್ದು. ಯಾವುದೇ ಒಂದು ಆಧುನಿಕ ಸಾಹಿತ್ಯ ಪಂಥಕ್ಕೂ ಸೇರದೇ ಅದರ ಅರಿವೂ ಇಲ್ಲದಂತೆ ಕೇವಲ ಪತ್ತೇದಾರಿ ಸಾಹಿತ್ಯದಲ್ಲಿ ತೊಡಗಿ, ಕನ್ನಡ ಪತ್ತೇದಾರಿ ಕಾದಂಬರಿಯ ಪಿತಾಮಹ ಎನ್ನಿಸಿಕೊಂಡವರಿವರು. ಇವರು ಒಂದು ನಿರ್ಲಕ್ಷಿತ ದಲಿತ ವರ್ಗಕ್ಕೆ ಸೇರಿದವರಾಗಿದ್ದು ದಲಿತ ಸಾಹಿತ್ಯ ಸ್ವರೂಪದ ವಾಸನೆಯು ಇವರ ಆತ್ಮಕೃತಿಯಲ್ಲಿ ಕಂಡುಬಂದಿಲ್ಲ. ಆತ್ಮಚರಿತ್ರೆ ಯಾರದೇ ಆಗಿರಲಿ ಅದರಲ್ಲಿ ಯಾವಾಗಲೂ ವೈಯಕ್ತಿಕ ವಿಚಾರಗಳ ಜೊತೆ ಜೊತೆಯಲ್ಲಿ ಒಂದು ಸಾಮುದಾಯಿಕ, ಸಾಂಸ್ಕೃತಿಕ ಅಂಶಗಳು ಬಿತ್ತರಗೊಳ್ಳಬೇಕು, ಆದರೆ ಇವರ ಕೃತಿಯಲ್ಲಿ ಈ ಅಂಶಗಳು ಅಲ್ಲಲ್ಲಿ ಕಂಡು ಬಂದರೂ ಅವರ ಜೀವನ ವ್ಯಕ್ತಿತ್ವ, ಸಾಧನೆಯೇ ಪ್ರಖರಗೊಳ್ಳುತ್ತದೆ. ಇವರ ಆತ್ಮಚರಿತ್ರೆಯಿಂದ ಅವರ ವ್ಯಕ್ತಿತ್ವದಲ್ಲಿನ ಸಿಹಿ – ಕಹಿ ನೆನಪುಗಳ ಬುತ್ತಿ ವರ್ಣನೆಗಳನ್ನಷ್ಟೆ ತಿಳಿಯಲು ಶಕ್ತವಾಗಿದೆ. ಒಟ್ಟಾರೆ ಎಲ್ಲ ವಿಚಾರಗಳನ್ನು ಮನಬಿಚ್ಚಿ ಹಂಚಿಕೊಂಡಿರುವುದರಿಂದ ಹಿರಿದಾದ ತೃಪ್ತಿ ಕೃತಿಕಾರರಿಗೆ ಉಂಟಾಗಿರಬಹುದು.

ಪರಾಮರ್ಶನ ಗ್ರಂಥಗಳು

೧. ಎನ್. ನರಸಿಂಹಯ್ಯ	ನನ್ನ ನೋವು ನಲಿವು, ಜೀವನ ಇತಿಹಾಸ, ಭಾಗ– ೧
೨. ಎನ್. ನರಸಿಂಹಯ್ಯ	ನನ್ನ ನೋವು ನಲಿವು, ಜೀವನ ಇತಿಹಾಸ, ಬಾಗ – ೨ ಅಖಿಲು ಸೇವಾ ಸಂಸ್ಥೆ, ಬಸವನಗುಡಿ, ಬೆಂಗಳೂರು.
೩. ಅಮೂರ ಜಿ.ಎಸ್	ಅ.ನ. ಕೃಷ್ಣರಾಯ ಸಾಹಿತ್ಯ ಅಕಾಡೆಮಿ, ನವದೆಹಲಿ.
೪. ಪಾಟೀಲ ಎಂ.ಎಸ್	ತ.ರಾ.ಸು, ಸಾಹಿತ್ಯ ಅಕಾಡೆಮಿ, ನವದೆಹಲಿ.
೫. ಡಾ. ಶೇಖರ್ ಎಂ.ಎಸ್ (ಸಂ.)	ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೬ ಡಾ. ಹು.ರಾ. ಕೋಮಲವಲ್ಲಿ	ತ.ರಾ.ಸು ಅವರ ಸಾಮಾಜಿಕ ಕಾದಂಬರಿಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೭. ಕೆ. ಮರುಳಸಿದ್ದಪ್ಪ	ಪಿ. ಲಂಕೇಶ್, ಸಾಹಿತ್ಯ ಅಕಾಡೆಮಿ, ನವದೆಹಲಿ.
೮. ಗಂಗಾಧರ್ ಮೊದಲಿಯಾರ್	ಜವರಾಯನ ಲೋಕಕ್ಕೆ ಪತ್ತೇದಾರನ ಪಯಣ, ಪ್ರಜಾವಾಣಿ ದಿನಪತ್ರಿಕೆ, ಡಿಸೆಂಬರ್ ೨೬, ೨೦೧೧.

□□□

೨. ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ನೆಲೆಗಳು

– ಹೊಂಬಯ್ಯ

ಸಮಾಜದ ಪ್ರತಿಬಿಂಬ ಸಾಹಿತ್ಯ. ಆಯಾಯ ಕಾಲಘಟ್ಟದ ಸಮಸ್ಯೆ ಮತ್ತು ಸವಾಲಿನಲ್ಲಿಯೇ ಪರಂಪರೆಯ ಪ್ರಜ್ಞೆಯ ಒಟ್ಟಿಗೆ ಅಸ್ತಿತ್ವದ ನೆಲೆಗಾಗಿ ತವಕಿಸುವುದು ಸಾಮಾಜಿಕ ಪ್ರಕ್ರಿಯೆಯಾಗಿರುತ್ತದೆ. ಈ ಚಲನೆಯ ಹಿನ್ನಲೆಯು ಆಯಾ ಕಾಲದ ಪರಿಸ್ಥಿತಿಯೊಂದಿಗೆ ಮನುಷ್ಯ ತನ್ನ ಸಾಮಾಜಿಕ ನೆಲೆಯನ್ನು ಸ್ಥಾಪಿಸುವ ಹುನ್ನಾರಕ್ಕೆ ಕೈಹಾಕಿ ಸಮಾಜದ ಪ್ರತಿಯೊಂದು ರಂಗವನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ತನ್ನ ಸಾರ್ವಭೌಮತ್ವದ ನೆಲೆಯನ್ನು ಕಂಡುಕೊಳ್ಳುವ ಮತ್ತು ಬದುಕನ್ನು ಕಟ್ಟಿಕೊಳ್ಳುವ ನೆಲೆಯಲ್ಲಿ ಚಿಂತಿಸುತ್ತಾನೆ. ಹಾಗಾಗಿ ಸಾಹಿತ್ಯ ಜೀವನದ ಪ್ರತಿಬಿಂಬ. ಕನ್ನಡದ ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯದ ಧೋರಣೆಗಳು ಈ ಸಮಾಜದ ಒಂದಲ್ಲ ಒಂದು ಸಾಮಾಜಿಕ ವಿಷಯಗಳ ತಲ್ಲಣಗಳನ್ನು ಕೇಂದ್ರವಾಗಿ ಇಟ್ಟುಕೊಂಡಿವೆ. ಈ ಪ್ರಕಾರದ ಸಾಹಿತಿಗಳು ತಾವುಗಳು ಕಂಡಂತಹ ಅನುಭವಗಳನ್ನು ಸಾಹಿತ್ಯದ ರೂಪಕ್ಕೆ ಇಳಿಸಿದ್ದಾರೆ. ಇವುಗಳು ಇವರುಗಳ ಅನುಭವಜನ್ಯದ ಅತ್ಮಕಥನಗಳೇ ಅಗಿರುತ್ತವೆ.

ಪಂಪನಿಂದ ಹಿಡಿದು ಆಧುನಿಕ ಕನ್ನಡ ಕವಿಗಳಂತಂಹ ಚಿಂತಕರ ಅಂತರಂಗದ ಅನುಭವಗಳ ಅತ್ಮಕಥನಗಳಾಗಿ ಬಂದಿವೆ. ಈ ಅತ್ಮಕಥನಗಳನ್ನು ಎಲ್ಲ ವರ್ಗದವರು ರಚನೆ ಮಾಡಿದ್ದಾರೆ. ಮನುಷ್ಯ–ಮನುಷ್ಯರಲ್ಲೆ ಪ್ರೀತಿ – ವಿಶ್ವಾಸ, ಸಾಮಾಜಿಕ ಸಮಾನತೆ ೧೨ನೇ ಶತಮಾನದ ವಚನಕಾರರ ಯುಗದಲ್ಲಿ ಕಂಡು ಬರುತ್ತದೆ. ಪೂರ್ವದ ಹಳಗನ್ನಡ ಹಾಗೂ ಹಳಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ರಚನೆ ಕೇವಲ ಮೇಲ್ಜಾತಿಯವರಲ್ಲಿ ಸೀಮಿತವಾಗಿತ್ತು. ಇದರಿಂದ ಕನ್ನಡ ಸಾಹಿತ್ಯದಲ್ಲಿ ಪ್ರತಿಯೊಂದು ವರ್ಗದ ಭಾವನೆಗಳು ಸಂಪೂರ್ಣವಾಗಿ

ದಾಖಲೆಗೊಳ್ಳಲು ಸಾಧ್ಯವಾಗಿರಲಿಲ್ಲ. ಇದು ಸಾಹಿತ್ಯವಲಯದ ಮಿತಿ. ಈ ಹಿನ್ನೆಲೆಯಲ್ಲಿ ಸಮ-ಸಮಾಜದ ಸ್ವರೂಪ ಪಡೆದುಕೊಂಡಿದ್ದು ವಚನ ಸಾಹಿತ್ಯ. ಜನಸಾಮಾನ್ಯರ, ಪಾಮರರ ನಡುವಿನ ಸಂಬಂಧದ ಸೇತುವೆಯಾಗಿ ಈ ಸಾಹಿತ್ಯ ರೂಪಗೊಂಡಿತು. ಎಲ್ಲ ವರ್ಗದ ಶರಣ ಶರಣೆಯರು ಅದರಲ್ಲೂ ದಲಿತ ವರ್ಗದ ಶರಣ ಶರಣೆಯರು ತಮ್ಮ ಜೀವನದ ಅನುಭವಗಳನ್ನು ನಿರ್ಭೀತಿಯಿಂದ ತಮ್ಮ ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಉರಿಲಿಂಗ ಪೆದ್ದಿ, ಕಾಳವ್ವೆ, ಆಯ್ದಕ್ಕಿ ಲಕ್ಕಮ್ಮ, ದುಗ್ಗಳೆಯಂತಹ ದಲಿತ ವಚನಕಾರರು ಆತ್ಮಕಥನಗಳ ರೂಪದಲ್ಲಿನ ವಚನಗಳಲ್ಲಿ ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ೭೦ರ ದಶಕದಲ್ಲಿನ ದಲಿತ ಸಾಹಿತಿಗಳು ಮತ್ತು ಹೋರಾಟಗಾರರು ಕಾವ್ಯದ ಮೂಲಕ ತಮ್ಮ ಅನುಭವಗಳನ್ನು ಅಕ್ಷರ ರೂಪದಲ್ಲಿ ದಾಖಲಿಸಿ ಅಭಿವ್ಯಕ್ತಪಡಿಸಿದ್ದರು. ಇದರೊಟ್ಟಿಗೆ ನೋವು, ಸಂಕಟ, ಅಪಮಾನ, ಹೋರಾಟ, ಸಿಟ್ಟುಗಳನ್ನು ವ್ಯಕ್ತಪಡಿಸುತ್ತಲೆ ದಲಿತ ಆತ್ಮಕಥನಗಳ ಮೂಲಕ ತಮ್ಮೆಲ್ಲರ ಅಸಲಿ ಅನುಭವಗಳನ್ನು ಹಾಗೂ ಮನದಾಳದ ಮಾತುಗಳನ್ನು ವ್ಯಕ್ತಪಡಿಸಲು ಆತ್ಮಕಥನ ಪ್ರಕಾರವನ್ನು ಬಳಸಿಕೊಂಡರು. "ಅಸಮಾನತೆಯ ಸಮಾಜವನ್ನು ಸಮಾನತೆಯೆಡೆಗೆ ಕರೆದ್ಯೊಯುವುದೇ ದಲಿತ ಆತ್ಮಕಥನಗಳ ಪ್ರಧಾನ ಆಶಯವಾಗಿದೆ". ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಪರಿವರ್ತನೆಯ ಜೊತೆಗೆ ಸಾಮಾಜಿಕ ಸಂಸ್ಕೃತಿಯ ದಾಖಲೀಕರಣದ ಸಂಬಂಧಗಳ ಶೋಧನವಾಗಿ ಇಂದು ಕನ್ನಡ ದಲಿತ ಆತ್ಮಕಥನಗಳು ಕೆಲಸವನ್ನು ನಿರ್ವಹಿಸುತ್ತಿವೆ. ಏಕೆಂದರೆ 'ದಲಿತ ಆತ್ಮಕಥೆಗಳು ಒಬ್ಬನ ಅನುಭವಕಥನವಾಗಿರುವುದಿಲ್ಲ ಅದು ದಲಿತ ಜಗತ್ತಿನ ಅನುಭದ ಕಥನವಾಗಿರುತ್ತದೆ'.

ಆಧುನಿಕ ಕನ್ನಡದ ವಿಶ್ವಮಾನವ ಮಹಾಕವಿ ಕುವೆಂಪು ಅವರಿಂದ ರಚನೆಗೊಂಡಂತೆ ದಲಿತ ಲೇಖಕರಾದ ಅರವಿಂದ ಮಾಲಗತ್ತಿ, ಸಿದ್ದಲಿಂಗಯ್ಯ, ತುಂಬಾಡಿ ರಾಮಯ್ಯ, ದು. ಸರಸ್ವತಿ, ಲಕ್ಷ್ಮಣ್, ಮೂಳ್ಳೂರು ನಾಗರಾಜು, ಹನುಮಂತರಾವ್, ಬಿ. ದೊಡ್ಡಮನಿ, ಕೆ. ಗೋವಿಂದರಾಜ್, ಎಂ.ಎಸ್. ಪರಶಿವಮೂರ್ತಿ, ಜೆ. ಸಂಜೀವರಾಯ ಹಾಗೂ ಶಾಂತನಾಯಕ ಶಿರಗಾನಹಳ್ಳಿಯವರವರೆಗೂ ದಲಿತ ಆತ್ಮಕಥೆಗಳು ಮತ್ತು ದಲಿತೇತರ ಆತ್ಮಕಥೆಗಳು ರಚನೆಗೊಂಡಿವೆ. ಇದರೊಂದಿಗೆ ದಲಿತ ಲೇಖಕರು ಈ ಸಮಾಜದ ಕಟ್ಟಕಡೆಯ ವ್ಯಕ್ತಿಗಳೆಂದು ಕರೆಯುವ ಸಾಹಿತ್ಯದ ಪ್ರತಿಬಿಂಬಗಳಂತೆ ತಾವುಗಳು ಕಂಡುಂಡ ಅನುಭವ, ನೋವು ನಲಿವುಗಳನ್ನು ಆತ್ಮಕಥನದ ಸಾಹಿತ್ಯ ರೂಪದಲ್ಲಿ ರಚಿಸಿ ದಾಖಲಿಸಿದ್ದಾರೆ.

ಕನ್ನಡ ದಲಿತ ಆತ್ಮಕಥೆಗಳು ಅಂತಿಮವಾಗಿ ಸಾಮಾಜಿಕ ವಿನ್ಯಾಸದ ಬಿಡಿ ಬಿಡಿ ಅನುಭವ ಗುಚ್ಛಗಳ ಸಂಕಥನವೇ ಆಗಿವೆ. ಡಾ. ಬಿ.ಆರ್ ಅಂಬೇಡ್ಕರ್ ಅವರ 'ವೀಸಾ ನಿರೀಕ್ಷಣೆಯಲ್ಲಿ' ಪ್ರಸಂಗವು ಸಾಮಾಜಿಕ ಸಮಸ್ಯೆಗಳಾದ ಜಾತೀಯತೆಯ ಕ್ರೂರ ಅವಮಾನವನ್ನು ಅನುಭವಿಸಿರುವ ವಿಚಾರವನ್ನು ದಾಖಲಿಸುತ್ತದೆ. ಅವರು ಓದುತ್ತಿದ್ದ ಶಾಲೆಯಲ್ಲಿನ ವಿದ್ಯಾರ್ಥಿಗಳೊಂದಿಗೆ ಕೂರಲು ಅವಕಾಶ ಸಿಗದೆ, ಒಂದು ಗೋಣಿಚೀಲ ತಂದು ಅದರ ಮೇಲೆ ಮೂಲೆಯಲ್ಲಿ ಪ್ರತ್ಯೇಕವಾಗಿ ಕೂರಬೇಕಾಗುತ್ತಿತ್ತು. ಸ್ಪೃಶ್ಯ ಮಕ್ಕಳೆಲ್ಲ ನೀರಡಿಕೆಯಾದಾಗ ಶಾಲೆಯಲ್ಲಿದ್ದ ನಲ್ಲಿ ನೀರನ್ನು ಕುಡಿಯುತ್ತಿದ್ದರು ಆದರೆ ಅಂಬೇಡ್ಕರ್ ಅವರು ಆ ನಲ್ಲಿಯ ನೀರನ್ನು ಮುಟ್ಟುವಂತಿರಲಿಲ್ಲ. ಬಟ್ಟೆ ಒಗೆಯುವವನು ಸಿಗುತ್ತಿರಲಿಲ್ಲ. ಕ್ಷೌರಿಕ ಇವರ ಕೂದಲನ್ನು ಕತ್ತರಿಸುತ್ತಿರಲಿಲ್ಲ. ಇಂತಹ ನೋವಿನ ಅನುಭವಗಳನ್ನು ಬಾಬಾ ಸಾಹೇಬರು ತಮ್ಮ ಆತ್ಮಕಥನದ ಮೊದಲ ಭಾಗದಲ್ಲಿ ದಾಖಲಿಸಿದ್ದಾರೆ.

ದಲಿತ ಆತ್ಮಕಥೆಗಳಲ್ಲಿ ಕಂಡು ಬರುವ ಹಸಿವು ಮತ್ತು ಬಡತನ, ಇವುಗಳನ್ನು ನೀಗಿಸಿಕೊಳ್ಳಲು ನಡೆಸುವ ಹೋರಾಟ ಬಹಳ ವ್ಯಾಪ್ತಿಯನ್ನು ಹೊಂದಿದೆ. ಈ ಹಸಿವಿನ ವ್ಯಾಪ್ತಿ ಒಂದು ರಾಜ್ಯ ಹಾಗೂ ದೇಶದ ವ್ಯಾಪ್ತಿಯನ್ನು ಮೀರಿ ಅಂತಿಮವಾಗಿ ಜಗತ್ತಿನ ಬಡಜನರ ಭೀಕರ ಹಸಿವಿನ ಚಿತ್ರಣದ ಪ್ರತೀಕವಾಗಿ ನಿಲ್ಲುತ್ತದೆ. ಈ ರೀತಿಯ ಸಾಮಾಜಿಕ ಸಮಸ್ಯೆಗಳ ಸೂಕ್ಷ್ಮ ನೆಲೆಗಳನ್ನು ದಲಿತ ಆತ್ಮಕಥೆಗಳು ನಿರೂಪಿಸುತ್ತವೆ.

ಅರವಿಂದ ಮಾಲಗತ್ತಿಯವರು ಗೌರ್ಮೆಂಟ್ ಬ್ರಾಹ್ಮಣದಲ್ಲಿ ಹಸಿವು, ಅನ್ನ ಮತ್ತು ನೀರಿಗೆ ಸಂಬಂಧಿಸಿದಂತೆ ದಲಿತರ ಸಾಮಾಜಿಕ ಸ್ಥಿತಿಯ ಚಿತ್ರಣವನ್ನು ಕಟ್ಟಿಕೊಡುತ್ತಾರೆ. 'ಹೆಣದ ಮೇಲಿನ ದುಡ್ಡು ಮತ್ತು ಮದುವೆಯ ಊಟ' ಪ್ರಸಂಗದಲ್ಲಿ ದಲಿತಸಮುದಾಯದ ಜನರು ಯಾವ ರೀತಿಯಲ್ಲಿ ತಮ್ಮ ಹಸಿವನ್ನು ತಣಿಸಿಕೊಳ್ಳುವ ಹೋರಾಟವನ್ನು ಮಾಡುತ್ತಾರೆ ಎಂಬುದನ್ನು ಬಿಚ್ಚಿಡುತ್ತಾರೆ. 'ಸತ್ತ ಮನುಷ್ಯನ ಹೆಣವನ್ನು ಸ್ಮಶಾನಕ್ಕೆ ಸಾಗಿಸುವಾಗ ಆಹೆಣದ ಮೇಲೆ ಹಣವನ್ನು ಎಸೆಯಲಾಗುತ್ತದೆ'. ವಯಸ್ಸಾದ ನಮ್ಮ ಜನರು ಕೆಳಕ್ಕೆ ಬಿದ್ದ ಹಣಕ್ಕಾಗಿ ಚಾತಕ ಪಕ್ಷಿಗಳಂತೆ ಸತ್ತವರ ಕಡೆಯವರು ದಾಟುವುದೇ ತಡ ಸ್ಪರ್ಧೆಗಿಳಿದು ಆ ಪುಡಿಗಾಸನ್ನು ಆಯ್ದುಕೊಳ್ಳುತ್ತಿದ್ದರು. ಚಿಕ್ಕವರಾದ ನಾವು ಅವರ ನಿಯಮಗಳನ್ನು ಮುರಿದು ನಮ್ಮ ಹಿರಿಯರಿಗಿಂತ ಮುಂದೆ ಹೋಗಿ ಎಸೆದ ಹಣ ನೆಲಕ್ಕೆ ಬೀಳುವುದಕ್ಕಿಂತ ಮುಂಚಿತವಾಗಿಯೇ ಹಿಡಿಯಲು ಪ್ರಯತ್ನಿಸಿ ಸೋಲುತ್ತಿದ್ದವು. ಇದಲ್ಲದೆ ಕಾಸು ನೆಲಕ್ಕೆ ಬಿದ್ದಾಗ ಅವರು ದಾಟುವ ಮುನ್ನವೆ ಅವರ ಕಾಲಲ್ಲಿ ಹೋಗಿ ಆ ನಾಣ್ಯಗಳನ್ನು ಎತ್ತಿಕೊಳ್ಳುತ್ತಿದ್ದೆವು.' ಎಂಬುವುದನ್ನು ಆತ್ಮಕಥನಕಾರರು ಬಿಚ್ಚಿಡುತ್ತಾರೆ.

ದಲಿತ ಸಮುದಾಯದ ಜನರು ತುಂಬಾ ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದು ಸರ್ವೆಸಾಮಾನ್ಯವಾಗಿರುತ್ತಿತ್ತು. ಊರುಗಳಲ್ಲಿ ಯಾವುದಾದರೂ ಮದುವೆ ಹಬ್ಬ ಜಾತ್ರೆಗಳು ನಡೆದರೆ ಊಟಕ್ಕೆ ಹಾಜರಾಗುವುದು ದಲಿತರ ರೂಢಿಯಾಗಿತ್ತು. ಇಂತಹ ಸಂದರ್ಭಗಳಲ್ಲಿ ಕೆಲವು ನಿಯಮಗಳನ್ನು ಊಟಕ್ಕೆ ಹಾಜರಾಗುವ ದಲಿತ ಸಮುದಾಯದ ಜನರು ಪಾಲಿಸಬೇಕಾಗಿತ್ತು. ಅದೇನೆಂದರೆ, ತಟ್ಟೆಗೆ ಹೆಚ್ಚು ಊಟ ಹಾಕಿಸಿಕೊಳ್ಳುವಂತಿಲ್ಲ, ತಿನ್ನಲು ಎಷ್ಟು ಸಾಧ್ಯವೂ ಅಷ್ಟನ್ನೇ ಮಾತ್ರ ಹಾಕಿಸಿಕೊಳ್ಳಬೇಕಾಗಿತ್ತು. ಮನೆಗೆ ತೆಗೆದುಕೊಂಡು ಹೋಗುವಂತಿಲ್ಲ. ಊಟ ಮಾಡಿಕೊಂಡು ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕಾಗುತ್ತಿತ್ತು. ಇದರಿಂದ ಮತ್ತೇ ಊಟಕ್ಕೆ ಬರುವಂತಹ ವ್ಯಕ್ತಿಯನ್ನು ಗುರುತಿಸುವುದಕ್ಕೆ ಸುಲಭವಾಗುತಿತ್ತು. ಅದರೆ ಈ ಒಂದು ನಿಯಮ ಮಾತ್ರ ದಲಿತರಿಗೆ ಮಾತ್ರ ಮೀಸಲಾಗಿತ್ತು ಎಂದು ಗೌರ್ಮೆಂಟ್ ಬ್ರಾಹ್ಮಣದಲ್ಲಿ ಕಂಡು ಬರುತ್ತದೆ. ಯಾವುದೇ ಚರಾಸ್ತಿಯನ್ನು ಹೊಂದಿರದ ದಲಿತರ ಜೀವನ ಉಳ್ಳವರ ಜಮೀನಿನಲ್ಲಿ ಕೂಲಿಯನ್ನು ಆಶ್ರಯಿಸಿಕೊಂಡಿತ್ತು. ಇದಲ್ಲದೆ ಅವಿಭಕ್ತ ಕುಟುಂಬವನ್ನು ಹೊಂದಿದ್ದ ದಲಿತರಿಗೆ ಆಹಾರವನ್ನು ಒದಗಿಸುವುದು ಕಷ್ಟಕರವಾಗಿತ್ತು. ಇಂತಹ ಸಂದರ್ಭದಲ್ಲಿ ಉಳ್ಳವರ ಮದುವೆ ಹಾಗೂ ಹಬ್ಬ, ಜಾತ್ರೆಗಳಲ್ಲಿ ಸರ್ವೆ ಸಾಮಾನ್ಯವಾಗಿ ದಲಿತರು ಭಾಗವಹಿಸುತ್ತಿದ್ದರು. ಇದಲ್ಲದೆ ದಲಿತರನ್ನು ಅಸ್ಪೃಶ್ಯರಾಗಿ ಈ ಸಮಾಜ ಇಂದಿಗೂ ಕಾಣುತ್ತಿರುವುದು ಖೇದಕರವಾದ ಸಂಗತಿಯಾಗಿದೆ. ಈ ಜಾತಿಯ ಸಮಸ್ಯೆಗಳು ಹೆಚ್ಚಾಗಿ ಊಟ(ಅನ್ನ)ದ ಸಂದರ್ಭದಲ್ಲಿ ಕಾಣಿಸಿಕೊಳ್ಳುವುದನ್ನು ತುಂಬಾಡಿ ರಾಮಯ್ಯನವರು ತಮ್ಮ ಆತ್ಮಕಥನವಾದ ಮಣೆಗಾರದಲ್ಲಿ ಹೇಳಿದ್ದಾರೆ. ಒಮ್ಮೆ ಮೇಲ್ಜಾತಿಯ ಗೆಳಯರ ಮನೆಗೆ ರಾಮಯ್ಯನವರನ್ನು ಊಟಕ್ಕೆ ಆಹ್ವಾನ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಲಿಂಗಾಯಿತ ಗೆಳಯನೊಬ್ಬ ರಾಮಯ್ಯನನ್ನು ಕುರಿತಂತೆ 'ತಾವು ಯಾವ ಜಾತಿ ಸಾರ್ ಎಂದು ಕೇಳಿದರೆ ಇವರ ಜೊತೆಯಲ್ಲಿದ್ದ ವಿಸ್ತರಣಾಧಿಕಾರಿಯೊಬ್ಬರು ನೀವು ನಾಯ್ಕರಲ್ಲವೆ?' ಎಂದು ಕೇಳುವುದು ಈ ಮೇಲ್ವರ್ಗ ಜನರ ಮನುವಾದಿಯ ಮನಸ್ಥಿತಿಯನ್ನು ತಿಳಿಸುತ್ತದೆ. ಒಂದೇ ಸರ್ಕಾರಿ ಕಛೇರಿಯಲ್ಲಿ ಕೆಲಸ ಮಾಡಿದ್ದರು ಸಹ ಊಟ ಮಾಡುವ ಸಮಯದಲ್ಲಿ ಈ ರೀತಿ ಜಾತಿಯ ಪ್ರಶ್ನೆಯನ್ನು ಎತ್ತಿ ಒಬ್ಬ ವ್ಯಕ್ತಿಯನ್ನು ಅವಮಾನಿಸುವುದು ಯಾವ ನ್ಯಾಯ?. ಇದಲ್ಲದೆ ಪ್ರಜಾಪ್ರಭತ್ವದ ವ್ಯವಸ್ಥೆಯ ಸಂವಿಧಾನದಲ್ಲಿ ಎಲ್ಲರೂ ಸಮಾನರು ಎಂದರೂ ಸಹ ಜಾತಿಯಲ್ಲಿ ಮೇಲು ಕೀಳು ಎಂಬ ಮನೊಧೋರಣೆಗಳು ಕೆಲವು ಕೆಟ್ಟ ಮನುಸ್ಸುಗಳಿಂದ ದೂರವಾಗದೆ ಭದ್ರವಾಗಿ ನೆಲೆ ನಿಂತಿರುವುದು ಅವಮಾನಕರ.

ಹೊಟ್ಟೆ ಪಾಡಿಗಾಗಿ ಎತ್ತಿನಂತೆ ನೊಗಹೊತ್ತು ಹೊಲ ಉಳುವ ದೃಶ್ಯ, ಮೈ ಮುಪ್ಪಾಗುವವರೆಗೂ ಸೌದೆ ಹೊಡೆಯುವುದು ಹಾಗೂ ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಪ್ರಯತ್ನ ಮಾಡುವ ಹಾಗೂ ಇಂತಹ ಹಲವಾರು ಸಾಮಾಜಿಕ ತಲ್ಲಣಗಳ ಅಹಿತಕರ ಘಟನೆಗಳೊಂದಿಗೆ ದಲಿತ ಕವಿ ಸಿದ್ದಲಿಂಗಯ್ಯನವರ ಊರುಕೇರಿ ಎಂಬ ದಲಿತ ಆತ್ಮಕಥನ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಕಥನಕಾರರು ಓದುವ ಸಂದರ್ಭದಲ್ಲಿ ಮೇಲ್ವರ್ಗದವರ ಹೊಲಗಳಲ್ಲಿ ಕೂಲಿ ಕೆಲಸಗಳಿಗೆ ಸೇರಿಕೊಳ್ಳುವ ಸಂದರ್ಭ ಕೇವಲ ಸಿದ್ದಲಿಂಗಯ್ಯನವರ ಓದಿನ ಬದುಕು ಮಾತ್ರವಾಗಿರದೆ ಇದು ಬಡ ದಲಿತ ಸಮುದಾಯದ ಓದು ಕಲಿಯುವ ಪ್ರತಿಯೊಬ್ಬ ದಲಿತ ವಿದ್ಯಾರ್ಥಿಯ ಬದುಕಿನ ಕತೆಯಾಗಿ ನಿಲ್ಲುತ್ತದೆ. ಇದರ ಹಿಂದೆ ಹಸಿವಿನ ಕರಾಳ ಚಿತ್ರಣವಿದೆ. ದಲಿತರಿಗೆ ತಂಗಳನ್ನವೇ ಮೃಷ್ಟಾನ್ನವಾಗಿದ್ದರೂ, ಬ್ರಾಹ್ಮಣರ ಮನೆಯ ತಂಗಳ ಅನ್ನಕ್ಕಾಗಿ ಕಾಯ್ದು ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಪ್ರಸಂಗವನ್ನು ಕಥನಕಾರರು ಬಿಚ್ಚಿಡುತ್ತಾರೆ. ಇದಿಷ್ಟೇ ಅಲ್ಲದೆ ಹಸಿವನ್ನು ನೀಗಿಸಿಕೊಳ್ಳಲು ಗೆಣಸು-ಕಡಲೆ, ಪುರಿ, ಜೋಳ, ನೀರುಗಳನ್ನು ಆಹಾರವಾಗಿ ಸ್ವೀಕರಿಸುತ್ತಿದ್ದರು. ಈ ರೀತಿಯ ಸ್ಥಿತಿಗೆ ಬಡತನ ಬಹಳ ಪ್ರಮುಖ ಕಾರಣ.ಇದಲ್ಲದೆ ಚೂರು ಹೊಲದಲ್ಲಿ ಬೆಳೆದದ್ದು ತನ್ನ ತಂದೆಯ ಮೇಲಿದ್ದ ಬಡ್ಡಿಗೆ ಹೋಗುತ್ತಿದ್ದುದು, ಕೂಲಿಯ ಹಣ ಕುಟುಂಬದ ನಿರ್ವಹಣೆಗೆ ಸಾಕಾಗದೇ ಹೋದುದು ಎಲ್ಲವನ್ನು ಮುಚ್ಚು ಮರೆಯಿಲ್ಲದೆ ಹೇಳುತ್ತಾರೆ. ರಾಮಯ್ಯನವರ ತಂದೆ ಸಹ ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದವರು. ಇವರು ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಹಾಕಲಿಕ್ಕೆ ಆಗದ ಸ್ಥಿತಿಯಲ್ಲಿದ್ದರು. ಇಂತಹ ಸಂದರ್ಭದಲ್ಲಿ ಸರ್ಕಾರದವರು ಗಂಡಸರು ಮಕ್ಕಳಾಗದಂತೆ ಅಪರೇಷನ್ ಮಾಡಿಸಿಕೊಂಡರೆ ಹಣ ಕೊಡುತ್ತೇವೆ ಎಂಬ ಮಾಹಿತಿ ಪಡೆದ ಇವರು ಹಣಕ್ಕಾಗಿ ಮಕ್ಕಳಾಗದಂತೆ ಅಪರೇಷನ್ ಮಾಡಿಸಿಕೊಂಡು, ಬಂದ ಹಣದಿಂದ ಮನೆಗೆ ಆಹಾರ ಪದಾರ್ಥಗಳನ್ನು ತಂದು ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಮಾಡಿಸಿದ ಸಂದರ್ಭದಂತಹ ತಂದೆಯ ತ್ಯಾಗವನ್ನು ರಾಮಯ್ಯನವರು ತಮ್ಮ ಆತ್ಮಕಥನದಲ್ಲಿ ತೆರದಿಡುತ್ತಾರೆ.

ಲಕ್ಷ್ಮಣ್ ಅವರ ಸಂಬೋಳಿ ಆತ್ಮಕಥನದಲ್ಲಿ ಬಡತನ ಹಾಗೂ ಹಸಿವಿನ ಚಿತ್ರಣವನ್ನು ಬಹಳ ನೈಜ ರೀತಿಯಲ್ಲಿ ಚಿತ್ರಿಸಿದ್ದಾರೆ. ಬಡತನದ ಬವಣೆಯನ್ನು ತಾಳಲಾರದೆ ತಮ್ಮ ಗ್ರಾಮದಲ್ಲಿ ನಡೆಯುತ್ತಿದ್ದ ಕ್ರಿಶ್ಚಿಯನ್‌ಗಳ ಉತ್ಸವದಲ್ಲಿ 'ಸ್ವಾಮಿ ಮೂರ್ಕಾಸು ಕೊಡ್ರಿ' ಎಂದು ಬೇಡಿತಿನ್ನುವ ಪ್ರವೃತ್ತಿ ಕಂಡು ಬರುತ್ತದೆ. ಇದಲ್ಲದೆ ಹಸಿವಿನ ತೀವ್ರತೆಯು ಅತಿಯಾಗಿ ಕಂಡು ಬರುತ್ತದೆ. 'ಎಳ್ಡು ದಿನ್ದಿಂದ ನಮ್ಮನೆ ಒಲೆ

ಬೆಂಕಿ ಕಂಡಿರಲಿಲ್ಲ. ಎಳ್ಡು ದಿನ್ದಿಂದ ಸೂರ್ಯ ಬಾಣದಾಗೆ ಕಳ್ದೋಗುಬಿಟ್ಟಿದ್ದ, ಸರೋತ್ನಾಗೆ ಹೊಟ್ಟೆ ಒಳ್ಗಡೆ ಸಂಕಟ ಸುರ್ವಾಗಿತ್ತು'. ಎಂದು ಉಲ್ಲೇಖ ಮಾಡುವುದರೊಂದಗಿನ ಹಸಿವು ಹಾಗೂ ಬಡತನದ ಕರಾಳ ಮುಖಗಳನ್ನು ಅಭಿವ್ಯಕ್ತ ಪಡಿಸುತ್ತಾರೆ. ಜೊತೆಗೆ 'ಗೋಡೆ ಇಲ್ಲದ ಅರ್ಮನೆಯಾಗ್ನ ಸುಖದ ನಿದ್ದೆ' ಎಂಬ ವ್ಯಂಗ್ಯದ ಧ್ವನಿ ಕಂಪಿಸುತ್ತದೆ. ಬೆವರ ಮನೆಗಳು ಎಂದಿಗೂ ಗುಡಿಸಲುಗಳೇ ಆಗಿರುವ ಕಾರಣ ಆರ್ಥಿಕ ಪರಿಸ್ಥಿತಿಯ ಶೋಚನೀಯ ಸಂಗತಿಗಳನ್ನು ಕಟ್ಟಿಕೊಡುತ್ತಾರೆ.

ಆತ್ಮಕಥನಕಾರರು ಅನುಭವಿಸುವ ಬಡತನದ ಛಾಯೆಯನ್ನು ಈ ರೀತಿಯಲ್ಲಿ ವ್ಯಕ್ತ ಪಡಿಸುತ್ತಾರೆ. ಶ್ರಾವಣ ಶನಿವಾರದ ಪ್ರಯುಕ್ತ ಆತ್ಮಕಥನಕಾರರು ಪ್ರತಿಯೊಂದು ಮನೆ ಮನೆಗೆ ಹೋಗಿ ಉಪಧಾನ(ಭೀಕ್ಷೆ)ಮಾಡಿಕೊಂಡು ಬರಲು ಹೋಗಬೇಕಾದ ಸನ್ನಿವೇಶದಲ್ಲಿ ಇದ್ದ ಒಂದೇ ಚಡ್ಡಿಯನ್ನು ಒಗೆದು ಹಾಕಿ ಅದು ಒಣಗಿದ ಮೇಲೆ ಅದೇ ಚಡ್ಡಿಯನ್ನು ಧರಿಸಿಕೊಂಡು ಉಪಧಾನಕ್ಕೆ ಹೋಗಿ ಆಹಾರ ಧಾನ್ಯಗಳನ್ನು ಪಡೆದುಕೊಂಡು ಬರುತ್ತಿದ್ದರು. ಇಲ್ಲಿ ಅನ್ನ ಆಹಾರಕ್ಕಿಂತ ಮತ್ತೇ ಯಾವುದೇ ಆಲೋಚನೆಗಳು ಮುಖ್ಯವಾಗಿ ಕಂಡು ಬರುವುದಿಲ್ಲ. ಮೊದಲನೇ ತಲೆಮಾರಿನ ದಲಿತರು ಅನ್ನ ಆಹಾರಕ್ಕೆ ಕಷ್ಟಪಡುತ್ತಿದ್ದರು. ಆದರೆ ಇವರು ಅಕ್ಷರ ವಂಚಿತರಾಗಿದ್ದರು. ಇಂದು ದಲಿತ ಸಮುದಾಯದ ಜನರು ಅಂಬೇಡ್ಕರ್ ಅವರ ಪ್ರೇರಣೆಯಿಂದ 'ಅನ್ನಕ್ಕಿಂತ ಅಕ್ಷರವೇ' ಮುಖ್ಯವಾಗಿ ಪರಿಣಮಿಸುತ್ತಿರುವಂತಹದ್ದು ಬಹಳ ಆರೋಗ್ಯಕರವಾದ ಬೆಳವಣಿಗೆಯಾಗಿದೆ. ಲಕ್ಷ್ಮಣ್ ಅವರು ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಬಳಿಕ ಹುಟ್ಟಿನಿಂದ ಅನುಭವಿಸಿದ ಹಸಿವನ್ನು ನೀಗಿಸಿಕೊಳ್ಳಬೇಕೆನ್ನುವ ಸಿಟ್ಟಿನಿಂದ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆಯುತ್ತಾರೆ. ಹೀಗಾಗಿ ಅಕ್ಷರ ಜ್ಞಾನದ ಸಂಪಾದನೆ ಹಾಗೂ ಹಸಿವಿನ ನಿವಾರಣೆ ಏಕ ಕಾಲದಲ್ಲಿ ನಡೆಯುತ್ತದೆ. ಇಲ್ಲಿ ಬಡತನ ಮತ್ತು ಹಸಿವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅಲ್ಲದೆ ಒಂದಕ್ಕೊಂದು ಪೂರಕವಾದ ಸಂಬಂಧದೊಂದಿಗೆ ರೂಪುಗೊಂಡಿರುತ್ತವೆ. ಬಡತನಕ್ಕೆ ಹಸಿವು ಕಾರಣವಾದರೆ, ಹಸಿವಿಗೆ ಬಡತನ ಕಾರಣವಾಗುತ್ತದೆ. ಇವುಗಳ ನಿವಾರಣೆಗೆ ಪರಿಹಾರ ಅಕ್ಷರಕ್ರಾಂತಿ ಎಂದು ಹೇಳಬಹುದೇ? ಏಕೆಂದರೆ ದಲಿತ ಆತ್ಮಕಥೆಗಳಲ್ಲಿ ಹಸಿವಿನ ಚಿತ್ರಣ ಒಂದು ನೆಲೆಯಿಂದ ದಲಿತರನ್ನು ಜಾಗೃತಗೊಳಿಸಲು ದುಡಿದರೆ ಮತ್ತೊಂದು ನೆಲೆಯಿಂದ ಅಸಮಾನತೆಯನ್ನು ತೋರಿಸುತ್ತಾ ಸಮಾಜವನ್ನು ಹಾಗೂ ಪ್ರಭುತ್ವವನ್ನು ಪ್ರಶ್ನಿಸುತ್ತದೆ.

ದಲಿತರ ಆತ್ಮಕಥೆಗಳಂತೆ ದಲಿತೇತರರ ಆತ್ಮಕಥೆಗಳಲ್ಲಿಯೂ ಸಹ ಬಡತನ ಹಸಿವಿನ ಚಿತ್ರಣಗಳು ಕಂಡುಬಂದರೂ ಸಹ ದಲಿತ ಆತ್ಮಕಥೆಗಳಷ್ಟು ತೀವ್ರತೆ ಕಂಡು ಬರುವುದಿಲ್ಲ ಎಂದು ಹೇಳಬಹುದು. ಆದರೂ ದೇಜಗೌ ಅವರ ಹೋರಾಟದ

ಬದುಕು ಎಂಬ ಆತ್ಮಕಥೆಯಲ್ಲಿನ ಕೆಲವು ಸನ್ನಿವೇಶಗಳು ಅವರು ಅನುಭವಿಸಿದ ತುಡಿತಗಳನ್ನು ಕಾಣಲಿಕ್ಕೆ ಸಾಧ್ಯವಿದೆ. 'ತಮ್ಮ ಬಾಳೇ ಒಂದು ಪವಾಡ' ಎನ್ನುವ ನಿಲುವಿನಲ್ಲಿ ತಾವು ಹುಟ್ಟಿದ ಪರಿಸರದ ಚಿತ್ರಣವನ್ನು ಸಂಕೋಚವಿಲ್ಲದೆ ಬಿಚ್ಚಿಡುತ್ತಾರೆ. 'ಹುಟ್ಟಿದ್ದು ಕುರಿಮಂದೆಯ ನಡುವೆ, ಬೆಳೆದದ್ದು ದನದ ಕೊಟ್ಟಿಗೆಯಲ್ಲಿ, ತಂದೆ-ತಾಯಿಗಳೋ ನಿರಕ್ಷರಕುಕ್ಷಿಗಳು, ಆದರೆ ಭಗವದ್ ಭಕ್ತರು, ಅವರ ಹಿಂದಿನ ತಲೆಮಾರಿನ ಹಿರಿಯ ಜನ ಅಂಥವರೇ ಅಗಿದ್ದಾರೆ. ಅವರೆಲ್ಲರೂ ಬಡತನದ ವಿರುದ್ಧ ಹೋರಾಡಿ ಸೋತು ಸತ್ತಿದ್ದರು....ಬಡತನಕ್ಕೆ ಇವರು ಹೇಸಲಿಲ್ಲ, ಸಿರಿಬಂದಾಗ ಹಿಗ್ಗಲಿಲ್ಲ ಅಲ್ಲದೆ ಸಾಧ್ಯವಾದಷ್ಟು ಬಡತನದ ನೋವುಗಳನ್ನು ಮರೆಯಲು ಹಾಗೂ ಇದರಿಂದ ಹೊರಬರುವ ಉದ್ದೇಶದಿಂದ ದುಡಿಮೆಯನ್ನು ಜೀವನದ ಆಧಾರಕ್ಕೆ ಬಳಸಿಕೊಂಡೆನು ಎಂದು ಹೇಳ ಬಯಸುತ್ತಾರೆ. ಇದಲ್ಲದೆ ವಿದ್ಯಾರ್ಥಿ ಹಾಗೂ ನೌಕರಿಯ ಪ್ರಾರಂಭಾವಸ್ಥೆಯಲ್ಲಿ ಜಾತಿ ಭೂತವನ್ನೆದುರಿಸಬೇಕಾಯಿತು. ಪ್ರಾಧ್ಯಾಪಕ ವೃತ್ತಿಗೆ ಬಂದ ಮೇಲೆ ಸಹೋದ್ಯೋಗಿಗಳಲ್ಲಿ ಬಹಳಷ್ಟು ಜನರು ಇವರೊಂದಿಗೆ ಸಹಕರಿಸಲಿಲ್ಲ. ಕೀಳು ದೃಷ್ಟಿಯಿಂದ ಕಂಡ ಪ್ರಸಂಗಗಳೇ ಹೆಚ್ಚು ಕಂಡುಬರುತ್ತವೆ. ಜಾತಿ ಎಂಬ ಸೊಂಕು ಪ್ರತಿಯೊಬ್ಬ ಮನುಷ್ಯನನ್ನು ಕುಬ್ಜನನ್ನಾಗಿ ಮಾಡುತ್ತದೆ. ಇದರ ನಿವಾರಣೆ ಕಾಂಗ್ರೇಸ್ ಸತ್ತೆಯಂತೆ ಎಂದು ಹೇಳಿದರೆ ತಪ್ಪಾಗಲಾರದು.

ಬಸವರಾಜ ಕಟ್ಟೀಮನಿಯವರು ತಮ್ಮ ಆತ್ಮಕಥೆಯಾದ 'ಕಾದಂಬರಿಕಾರನ ಕಥೆ'ಯಲ್ಲಿ ಬಡತನದ ಬವಣೆಯನ್ನು ಅನುಭವದ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. 'ನಾನು ಹೈಸ್ಕೂಲಿಗೆ ಬರುವವರೆಗೂ ಅವ್ವ ತನ್ನ ಕೈಯಿಂದಲೇ ಹೊಲಿದ ಅಂಗಿ, ಚಲ್ಲಣ, ಟೋಪಿ ಧರಿಸುತ್ತಿದ್ದುದು ಮಾತ್ರ ನಿಜ' ಎನ್ನುತ್ತಿದ್ದರು. 'ವಾರದಲ್ಲಿ ಒಂದರೆಡು ದಿನ ನಮ್ಮ ಮನೆಯಲ್ಲಿ ಒಲೆಯೂ ಉರಿಯುತ್ತಿರಲಿಲ್ಲ. ತಂಗಳು ರೊಟ್ಟಿ, ಖಾರ ತಿಂದು ಮಲಗಿದ ದಿನಗಳು ಎಷ್ಟೋ! ಅಕ್ಕಿಯ ಅನ್ನವನ್ನಂತೂ ನಾವು ತಿಂಗಳಿಗೊಮ್ಮೆ ಕಾಣುತ್ತಿದ್ದವೋ ಏನೋ! ಮನೆಯಲ್ಲೊಂದು ಎಮ್ಮೆಯಿದ್ದುದರಿಂದ ಮೊಸರು ಮಜ್ಜಿಗೆಗೆ ತಾಪತ್ರಯವಿರಲಿಲ್ಲ. ಅವ್ವನಿಗೂ ನೀಲವಜ್ಜಿಗೋ ಇದ್ದುದು ಎರಡೆರಡೇ ಸೀರೆಗಳು. ಅವುಗಳಿಗೂ ಹಲವಾರು ತೇಪೆಗಳಿರುತ್ತಿದ್ದವು. ಅವು ಹರಿದ ಹಾಗೆಲ್ಲ ಹೊಸ ತೇಪೆ ಹಚ್ಚಿ ಹೊಲಿದುಕೊಡುತ್ತಿದ್ದಳು ಅವ್ವ' ಎಂದು ತಮಗೆ ಇದ್ದ ಬಡತನವನ್ನು ಮನಬಿಚ್ಚಿ ಹಂಚಿಕೊಳ್ಳುತ್ತಾರೆ ಬಸವರಾಜ ಕಟ್ಟೀಮನಿಯವರು. ಲಕ್ಷ್ಮಣ್ ಹಾಗೂ ಸಂಜೀವರಾವ್ ಅವರ ಆತ್ಮಕಥೆಗಳಲ್ಲೂ ಈ ಬಗೆಯ ಅನುಭಗಳು ಕಂಡುಬರುತ್ತವೆ.

ಸಮಾಜವೊಂದರಲ್ಲಿ ತಲಾತಲಾಂತರದಿಂದ ಬೇರುಬಿಟ್ಟಿರುವ ಜ್ವಲಂತ ಸಮಸ್ಯೆಗಳಲ್ಲಿ ಜಾತಿಯತೆ ಮತ್ತು ಅಸ್ಪೃಶ್ಯತೆ ಈ ಸಮಾಜವನ್ನು ಅಸಮಾನತೆಯ

ನೆಲೆಯಲ್ಲಿ ನಿಲ್ಲಿಸುತ್ತದೆ. ಪಂಪ ಮಹಾಕವಿ ಹೇಳಿರುವ ಮಾತು ಒಂದು ಕಡೆಯಾದರೆ ಇಂದಿನ ಸಮಾಜದಲ್ಲಿ ಪ್ರಜ್ಞಾವಂತ ಜನ ಸಮುದಾಯವು ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವ ಬಗೆ ಒಂದು ನಿಲುವಿನಿಂದ ಕೂಡಿದೆ. ಇಂತಹ ಹಲವು ಅಹಿತಕರ ಘಟನೆಗಳ ಮೂಟೆಯನ್ನು ಕನ್ನಡದ ದಲಿತ ಆತ್ಮಕಥೆಗಳು ಹೊತ್ತು ನಿಂತಿವೆ.

ಪ್ರಗತಿಪರರೆನಿಸಿಕೊಂಡವರ ಮನೆಯಲ್ಲಿ ನಡೆದ ಒಂದು ಘಟನೆಯನ್ನು ಗೌರ್ಮೆಂಟ್ ಬ್ರಾಹ್ಮಣದಲ್ಲಿ ಗಮನಿಸಬಹುದು. 'ಮಾರ್ಕ್ಸವಾದ ಮತ್ತು ಎಂಜಲು ತಟ್ಟೆ' ಎಂಬ ಭಾಗದಲ್ಲಿ ಮಾರ್ಕ್ಸವಾದಿ ಎನಿಸಿಕೊಂಡವರು ಆತ್ಮಕಥನಕಾರರನ್ನು ಮನೆಗೆ ಊಟಕ್ಕೆ ಕರೆಯುತ್ತಾರೆ. ಊಟಕ್ಕೆ ಬಂದ ಈ ಅತಿಥಿಗೆ ತಾವು ಊಟಮಾಡಬೇಕಾಗಿದ್ದ ತಟ್ಟೆಯನ್ನು ಅವರೇ ತೊಳೆಯಬೇಕಾದ ಸನ್ನಿವೇಶ ಬಂದೊದಗುತ್ತದೆ. ಇದಲ್ಲದೆ ಊಟ ಮಾಡಿದ ತಟ್ಟೆಯನ್ನು ಅವರಿಂದಲೇ ಶುಚಿಗೊಳಿಸಿ ಮನೆಯ ಹೊರಗಿಡುವ ಪ್ರಸಂಗ ನಡೆಯುತ್ತದೆ. ಈ ಘಟನೆಯಿಂದ ಮನುಷ್ಯ ಪ್ರೀತಿಯನ್ನು ತಾಳದ ಮಾರ್ಕ್ಸವಾದಿಯ ಮುಖವಾಡವು ಬಯಲಾಗುತ್ತದೆ. ಮೇಲ್ನೋಟಕ್ಕೆ ಜಾತ್ಯತೀತ ವ್ಯಕ್ತಿಯಾಗಿ ಕಾಣಿಸಿಕೊಂಡರೂ ಆಂತರಿಕವಾದ ಜಾತಿಯತೆಯನ್ನು ಬೆಳಸಿಕೊಂಡು ಬಂದಿರುವ ದ್ವಿಮುಖ ಬೆಳವಣಿಗೆಯ ರೂಪಗಳು ನಮ್ಮ ಕಣ್ಣ ಮುಂದೆ ನಡೆಯುತ್ತವೆ. ಇವು ಇಂದಿಗೂ ವಿದ್ಯಾವಂತ ಸಮುದಾಯದವರಲ್ಲಿ ಅತಿಯಾಗಿ ನಡೆಯುತ್ತಿರುವುದು ಬುದ್ಧ ಬಸವ ಅಂಬೇಡ್ಕರ್ ಅವರ ಆಶಯಗಳಿಗೆ ಬೆಲೆ ಇಲ್ಲದಂತಾಗಿದೆ. ಒಬ್ಬ ಅಸ್ಪೃಶ್ಯನ ಸ್ಪರ್ಶಕ್ಕಿಂತ ಆಕಳ ಹಾಗೂ ಹಸುವಿನ ಉಚ್ಚೆ, ಸಗಣಿ ಶ್ರೇಷ್ಠವೆನ್ನುವ ಮನುವಾದಿಯ ನಿಲುವುಗಳನ್ನು ಗಮನಿಸಬಹುದು.

ದಲಿತ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವ ಸಂದರ್ಭದಲ್ಲಿಯು ಅಸ್ಪೃಶ್ಯ ಹಾಗೂ ಜಾತಿಯ ಸೊಂಕುಗಳ ಅಹಿತಕರ ಘಟನೆಗಳನ್ನು ಅನುಭವಿಸುವುದನ್ನು ದಲಿತ ಆತ್ಮಕಥನಕಾರರು ಮನಬಿಚ್ಚಿ ಹೇಳಿಕೊಂಡಿದ್ದಾರೆ. ಶಾಲೆಗೆ ದಲಿತ ವಿದ್ಯಾರ್ಥಿಗಳು ಮುಂಚಿತವಾಗಿ ಬಂದು ಶಾಲೆಯ ಕೊಠಡಿಗಳು ಶುಚಿಗೊಳಿಸಬೇಕಾಗಿತ್ತು. ಈ ಶಾಲೆಯ ಕೊಠಡಿಗಳನ್ನು ಮೇಲ್ವರ್ಗದ ವಿದ್ಯಾರ್ಥಿಗಳು ಶುಚಿಗೊಳಿಸುತ್ತಿರಲಿಲ್ಲ. ಶುಚಿಗೊಳಿಸಿದ ದಲಿತ ವಿದ್ಯಾರ್ಥಿಗಳು ತರಗತಿಯ ಕೊನೆಯ ಸಾಲಿನ ನೆಲದಲ್ಲಿ ಕುಳಿತುಕೊಳ್ಳಬೇಕಾಗಿತ್ತು. ನೀರು ಕುಡಿಯಬೇಕಾದರೆ ಮೇಲ್ವರ್ಗದ ವಿದ್ಯಾರ್ಥಿಗಳಿಂದ ನೇರವಾಗಿ ಬಾಯಿಗೆ ನೀರನ್ನು ಮುಟ್ಟದೇ ಹಾಕಿಸಿಕೊಳ್ಳಬೇಕಾಗಿತ್ತು. ಇಂತಹ ಘಟನೆಗಳು ಅಂಬೇಡ್ಕರ್ ಅವರ ಬಾಲ್ಯದ ವಿದ್ಯಾಭ್ಯಾಸದ ದಿನಗಳನ್ನು

ನೆನಪಿಗೆ ತರುತ್ತವೆ. ಈ ಬಗೆಯ ಅಹಿತಕರ ಘಟನೆಗಳು ಇಂದಿನ ೨೧ ಶತಮಾನದ ವರೆವಿಗೂ ಮುಂದುವರಿಸಿಕೊಂಡು ಬರುತ್ತಿರುವುದು ಖಂಡನೀಯವಾಗಿದೆ.

ಅಕ್ಷರ ಕಲಿಯುವ ದಲಿತ ಹುಡುಗ ತಪ್ಪುಗಳನ್ನು ತಿದ್ದುವಂತೆಯು ಇಲ್ಲದ ಸ್ಥಿತಿ ನಿರ್ಮಾಣವಾಗುತ್ತದೆ. 'ನಾಳಿನ ಕಸದ ಪಾಳಿ ಮಾಲಕತ್ತಿ' ಎಂದು ಬರೆದಿದ್ದನ್ನು ಕಥನಕಾರರು 'ಮಾಲಗತ್ತಿ' ಎಂದು ತಿದ್ದಿದಕ್ಕೆ ಜಾತಿವಾದಿ ಶಿಕ್ಷಕ ಮಾಲಗತ್ತಿಯವರನ್ನು ಕುರಿತು.... 'ಕತ್ತಿ ಅಂತ ಬರದ್ರೆ ಏನಾಯ್ತು? ಗತ್ತಿ ಅಂತ ಮಾಡಾಕ ಹೋಗಿದ್ಯಾ? ಮಗ ಬರ್‍ಯಾಕ ಬಂತು ಅಂತ ತಿದ್ದಾಕ ಹೊಗ್ಯಾನ ....ಕತ್ತಿ ಕತ್ತಿನೇ....ಕತ್ತೇಲ್ಲರ ಕುದುರ್‍ಯಾಕ್ಕದೇನಾ?' ಎಂದು ಅವಮಾನ ಪಡಿಸಿದ ಪ್ರಸಂಗವನ್ನು ನೆನೆಯುತ್ತಾರೆ. ಈ ಅವಮಾನ ಅಕ್ಷರ ಕಲಿಯುವ ಎಲ್ಲಾ ದಲಿತ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ. ಅಲ್ಲದೆ ದಲಿತರನ್ನು ಅಕ್ಷರವಂಚಿತರಾಗಿ ಮಾಡುವಂತಹ ಹುನ್ನಾರ ಎಂದು ಹೇಳಬಹುದು. ಮಣೆಗಾರ ಎಂಬ ಕೃತಿಯಲ್ಲಿ ಆತ್ಮಕಥನಕಾರರಾದ ತುಂಬಾಡಿರಾಮಯ್ಯನವರು ದಾಖಲಿಸುವಂತೆ 'ಅಣ್ಣನ ಬುದ್ಧಿವಂತಿಕೆಗೆ ಅಸೂಯೆಪಟ್ಟ ಶಿಕ್ಷಕರು ಆತನನ್ನು ಅನುತ್ತೀರ್ಣಗೊಳಿಸುತ್ತಾರೆ. ಜಾತಿವಾದಿ ಶಿಕ್ಷಕನ ವರ್ತನೆಯಿಂದ ಅವಮಾನಗೊಂಡ ಆ ಬಾಲಕ ಕೆರೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾನೆ. ಎರಡಕ್ಷರ ಕಲಿಸಿದಾತಂಗುರು ಎಂಬಂತೆ ವಿದ್ಯಾರ್ಥಿಯ ಯಶಸ್ವಿಗೆ ನಂದಾದೀಪವಾಗಬೇಕಿದ್ದ ಈ ತರಹದ ಗುರುಪರಂಪರೆ ವಿದ್ಯಾರ್ಥಿಗಳ ಬಾಳಿಗೆ ನಂದಿದದೀಪವಾಗಿ ಪರಿಣಾಮ ಬೀರುತ್ತಿರುವುದರಿಂದ ಈ ಸಮಾಜ ಮತ್ತಷ್ಟು ಅಸಮಾನತೆ, ಅಹಿತಕರ ಘಟನೆಗಳು ನಡೆಯಲಿಕ್ಕೆ ಕಾರಣೀಭೋತಾರಾಗುತ್ತಿರುವುದು ಖೇದಕರ ಸಂಗತಿಯಾಗಿದೆ.'

ಈ ಕಾಲದ ಸಮಾಜದಲ್ಲಿದ್ದ ಜಾತಿ ವ್ಯವಸ್ಥೆಯ ವಿವಿಧ ಮುಖಗಳನ್ನು ಮೂರ್ತಿ ಅವರು ತಮ್ಮ ಅನುಭವದ ಮೂಸೆಯಲ್ಲಿ ನಿರೂಪಣೆಗೆ ತಂದಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಅಸ್ಪೃಶ್ಯತೆಯನ್ನು ಗಮನಿಸಿದ್ದಾರೆ ಮತ್ತು ಅನುಭವಿಸಿದ್ದಾರೆ. ಮಳವಳ್ಳಿಯಲ್ಲಿ ಅವರಿಗೆ ಬಾಡಿಗೆ ಮನೆಯನ್ನು ನೀಡುವುದಿಲ್ಲ, ನೀರಿಗಾಗಿ ಕೆರೆಗೆ ಹೋದರೆ ಮೇಲ್ಜಾತಿಯವರು ಎತ್ತಿಕೊಟ್ಟ ನೀರನ್ನೇ ತರಬೇಕಿತ್ತು. ಈ ರೀತಿಯ ಇನ್ನೂ ಅನೇಕ ಸನ್ನಿವೇಶಗಳು ಕೃತಿಯಲ್ಲಿ ಕಂಡರೂ ಅವರ ಗ್ರಹಿಕೆಗೆ ಬಾರದೇ ಇರುವ, ಇನ್ನೂ ಭೀಕರವಾದ ಅನೇಕ ಜಾತಿಸಂಕರಗಳು ಇದ್ದಿರಬಹುದು. ಸಮಾಜದ ಅನೇಕ ಸ್ಥಾಪಿತ ಗ್ರಹಿಕೆಗಳು ಅಥವಾ ನಂಬಿಕೆಗಳು ನಮಗೆ ಅರಿವಿಲ್ಲದಂತೆ ಕೆಲಸ ಮಾಡುತ್ತಿರುತ್ತವೆ. ಮೂರ್ತಿ ಅವರೇ ಒಂದು ಕಡೆ ಹೀಗೆ ನಿರೂಪಿಸಿದ್ದಾರೆ : "ಸ್ಕೂಲಿನ ಬ್ರಾಹ್ಮಣ ಗೆಳೆಯರ ಜೊತೆ ಸೇರಿ ಒಂದು ಕಡೆ ಒಳ್ಳೆಯ ಸಂಸ್ಕಾರವನ್ನು ಕಲಿಯುತ್ತಿದ್ದರೆ

ಇನ್ನೊಂದು ಕಡೆ ನಮ್ಮ ಕೇರಿಯ ಗೆಳೆಯರ ಜೊತೆ ಸೇರಿ ನಮ್ಮತನವನ್ನೂ ಉಳಿಸಿಕೊಂಡಿದ್ದೆ." ಹೀಗೆ ಹೇಳುವಾಗ ಬ್ರಾಹ್ಮಣ ಗೆಳೆಯರಿಂದ ಕಲಿತದ್ದನ್ನು 'ಒಳ್ಳೆಯ ಸಂಸ್ಕಾರ' ಎಂತಲೂ ತಮ್ಮ ಕೇರಿಯ ಗೆಳೆಯರಿಂದ ಕಲಿತಿದ್ದನ್ನು 'ನಮ್ಮತನ' ಎಂತಲೂ ಕರೆದಿದ್ದಾರೆ. ಇಲ್ಲಿ 'ನಮ್ಮತನ' ಎಂಬುದು ನೆಗೆಟಿವ್ ಆದ ಪರಿಕಲ್ಪನೆಯಾಗಿ ಕಾಣುತ್ತದೆ. ಇದು ಲೇಖಕರ ಅರಿವಿಲ್ಲದೆಯೂ, ಅವರ ಗ್ರಹಿಕೆಯ ಒಂದು ಭಾಗವಾಗಿಯೂ ಬಂದಿರುವ ಸಾಧ್ಯತೆ ಇದೆ.

ಜಾತಿ ಎಂಬುದು ಎಂತಹ ಕ್ರೂರವಾದ ಸಮಸ್ಯೆಯಾಗಿದೆ ಎಂಬುದಕ್ಕೆ ಮೂರ್ತಿ ಅವರು ಉಲ್ಲೇಖಿಸಿರುವ ಅವರ ಹದಿನಾಲ್ಕನೇ ವಯಸ್ಸಿನಲ್ಲಿ ನಡೆದ ಒಂದು ಘಟನೆ ನಿದರ್ಶನವಾಗಿದೆ. ತಲೆಯ ಮೇಲೆ ಕುಕ್ಕೆಯನ್ನು ಹೊತ್ತಿದ್ದ ದೊಡ್ಡದಾದ ವಿಭೂತಿಯನ್ನು ಬಳಿದಿದ್ದ ಹೆಂಗಸೊಬ್ಬಳು ಆ ಬುಟ್ಟಿಯನ್ನು ಕೆಳಗಿಳಿಸುವಂತೆ ಮೂರ್ತಿ ಅವರನ್ನು ಕೇಳಿ, ನಂತರ ಅವರು ಹೊಲೆಯ ಜಾತಿಯವರು ಎಂದು ತಿಳಿದ ಕೂಡಲೆ ತಾನೇ ಬೇಡ ಎಂದು ನಿರಾಕರಿಸುತ್ತಾಳೆ. ಆ ಹೆಂಗಸು ತನ್ನ ತಲೆಯ ಮೇಲಿನ ಭಾರವನ್ನಾದರೂ ಸಹಿಸಿಯಾಳು. ಆದರೆ ಹೊಲೆಯನಾದವನು ಮಾತ್ರ ಆ ಬುಟ್ಟಿಯನ್ನು ಮುಟ್ಟುವಂತಿಲ್ಲ. ಇದರ ಹಿಂದೆ ಅನೇಕ ನಂಬಿಕೆಗಳು ಅಡಗಿರುವ ಸಾಧ್ಯತೆ ಇರುತ್ತದೆ. ಇಲ್ಲಿ ಈ ಹೆಂಗಸಿಗೆ ಒಂದು ವೇಳೆ ಹೊಲೆಯನೇನಾದರೂ ಬುಟ್ಟಿಯನ್ನು ಮುಟ್ಟಿದ್ದೇ ಆದರೆ ತನ್ನ ವ್ಯಾಪಾರ ಸರಿಯಾಗಿ ಆಗುವುದಿಲ್ಲ ಎಂಬ ಕ್ರೂರವಾದ ನಂಬಿಕೆ ಇರುವುದನ್ನು ಗಮನಿಸಬಹುದು. ಹೀಗೆ ಅಸ್ಪೃಶ್ಯತೆಯನ್ನು ನಂಬಿಕೆ ಎಂಬ ಹೆಸರಿನಲ್ಲಿ ಶತಮಾನಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ತಲೆಮಾರಿನಿಂದ ತಲೆಮಾರಿಗೆ ಶೋಷಕ ಮತ್ತು ಶೋಷಿತ ಎಂಬ ಎರಡೂ ನೆಲೆಯಿಂದಲೂ ವರ್ಗಾವಣೆಯಾಗುತ್ತಾ ಬಂದಿದೆ. ಅಂದರೆ ಎಲ್ಲಿಯವರೆಗೆ ಶೋಷಣೆಗೆ ಒಳಗಾಗುವವರು ಇರುತ್ತಾರೋ ಅಲ್ಲಿಯವರೆಗೆ ಶೋಷಣೆ ಮಾಡುವವರೂ ಇದ್ದೇ ಇರುತ್ತಾರೆ. ಶೋಷಣೆ ಎಂಬುದು ಬದಲಾಗಿದೆ ಎಂಬುದಕ್ಕಿಂತ ಶೋಷಣೆಯ ಸ್ವರೂಪ ಬದಲಾಗಿದೆ ಎನ್ನಬಹುದು. ಶೋಷಣೆ ಮಾತ್ರ ಹಾಗೆಯೇ ಮುಂದುವರೆದಿದೆ ಅಥವಾ ಅದಕ್ಕಿಂತಲೂ ಕ್ರೂರವಾಗಿ ನಡೆಯುತ್ತಿದೆ ಎನ್ನಬಹುದು. ಇಂದು ಶೋಷಣೆಯ ವಿವಿಧ ಮುಖಗಳು ಸೃಷ್ಟಿಯಾಗಿವೆ. ಶಿಕ್ಷಣದಲ್ಲಿ ದಲಿತರಿಗೆ, ಹಿಂದುಳಿದವರಿಗೆ ಮೀಸಲಾತಿಯನ್ನು ನೀಡಲಾಗಿದೆ ಎಂಬ ವಿಷಯವನ್ನು ಮುಂದಿಟ್ಟುಕೊಂಡು ಆ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅನೇಕ ಬಗೆಯ ಅನ್ಯಾಯ, ಶೋಷಣೆಗಳನ್ನು ಮುಚ್ಚಿಡುವ ಹುನ್ನಾರ 'ಉನ್ನತ ವರ್ಗ' ಎಂದು ಕರೆಸಿಕೊಳ್ಳುವವರಿಂದ ಮತ್ತು ಬಹುಪಾಲು ಅವರ ಹಿಡಿತದಲ್ಲಿಯೇ

ಇರುವ ವ್ಯವಸ್ಥೆಯಿಂದ ನಡೆಯುತ್ತಿದೆ. ಪ್ರಸ್ತುತ ಮೂರ್ತಿ ಅವರ ಮಗಳು ಮೇಲ್ಜಾತಿಗೆ ಸೇರಿದ ಉಪನ್ಯಾಸಕರು ತರಗತಿಯಲ್ಲಿ ತನ್ನ ಜಾತಿಯನ್ನು ಹಿಡಿದು ಹೀಯಾಳಿಸಿ ಅವಮಾನಿಸಿದರು ಎಂಬ ಕಾರಣದಿಂದಲೇ ಎಂಜಿನಿಯರಿಂಗ್ ಕಾಲೇಜು ತೊರೆದಿದ್ದಲ್ಲದೆ ತಮ್ಮ ಶಿಕ್ಷಣದ ದಿಕ್ಕನ್ನೇ ಬದಲಿಸಿಕೊಂಡರು. ದಲಿತರು, ಅಸ್ಪೃಶ್ಯರು ಶಿಕ್ಷಣದಿಂದ ವಂಚಿತರಾಗಿರುವುದಕ್ಕೆ ಈ ಕ್ರೂರ ಜಾತಿಯು ಕೂಡ ಬಲವಾದ ಕಾರಣವಾಗಿದೆ.

'ಊರುಕೇರಿ'ಯೆಂಬ ಈ ಆತ್ಮಕಥೆಯು ನೋವು,ಅಪಮಾನಗಳನ್ನು ಹಾಗೂ ಅಸ್ಪೃಶ್ಯತೆಯ ಕಹಿಘಟನೆಗಳನ್ನು ಬಿಚ್ಚಿಡುತ್ತದೆ. ಸಿದ್ದಲಿಂಗಯ್ಯನವರು ಬಾಲ್ಯದ ಬದುಕಿನ ಬಡತನ ಹಸಿವು ದಾರಿದ್ರ್ಯಗಳ ನಡುವೆ ನರಳಿದರೂ ಬತ್ತದ ಚೇತನವನ್ನು ಕಾಣಬಹುದು. 'ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೊಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ, ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡು ಬಂದರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು". ಈ ಪ್ರಸಂಗವು ದಲಿತ ಸಾಮಾಜಿಕ ಬದುಕಿನ ನೋವಿನ ಚಿತ್ರಣವನ್ನು ಇಂದಿಗೂ ಕೆಲವು ಹಳ್ಳಿ ಹಳ್ಳಿಗಳಲ್ಲಿ ಕಾಣಲಿಕ್ಕೆ ಸಾಧ್ಯವಿದೆ. ಅಂದರೆ ದಲಿತ ಸಮುದಾಯದವರಲ್ಲಿ ಜೀತಗಾರಿಕೆಯು ಜೀವಂತವಾಗಿರುವ ಸನ್ನಿವೇಶಗಳನ್ನು ಕರ್ನಾಟಕದ (ಗುಲ್ಬರ್ಗ, ಗದಗ, ಹಾವೇರಿ. ರಾಯಚೂರು, ಮಂಡ್ಯ, ಕೋಲಾರ, ಬಿಜಾಪುರ..... ಇತ್ಯಾದಿ) ಕೆಲವು ಜಿಲ್ಲೆಗಳಲ್ಲಿ ಇಂದಿಗೂ ಕಾಣಬಹುದು. ಇದು ಸಿದ್ದಲಿಂಗಯ್ಯನವರ ತಂದೆ ತಾಯಿಗಳ ನೋವಿನ ಸಂಕಥನವಲ್ಲ, ಇಡೀ ದಲಿತ ಸಮುದಾಯದವರ ನೋವಿನ ಸಂಕಥನವಾಗಿದೆ. ಅಂತಯೇ ಎನ್.ಕೆ. ಹನುಮಂತಯ್ಯನವರು ತಮ್ಮ 'ಹೊಂಗೇರಿ ಹಾದಿಯಲ್ಲಿ ಸೋಬಾನೆ ದೀಪಗಳು' ಎಂಬ ಆತ್ಮಕಥನದಲ್ಲಿ ತಂದೆ ಜೀತಗಾರಿಕೆಯಲ್ಲಿ ಅನುಭವಿಸಿದ ನೋವಿನ ಮನದಾಳದ ಮಾತುಗಳನ್ನು ಬಿಚ್ಚಿಡುತ್ತಾರೆ. 'ದಲಿತ ಜನರಿಗೆ ಜೀತವೇ ಸರ್ಕಾರಿ ನೌಕರಿಯಾಗಿತ್ತು. ಯಜಮಾನರುಗಳ ಮನೆಯಲ್ಲಿ ಎಂಟಾಣೆ, ನಾಲ್ಕಾಣೆಗೆ ವರ್ಷಗಟ್ಟಲೆ ಸಂಬಳ ಗೇಯುತ್ತಿದ್ದೆವು. ಬಾಲಕರಾಗಿದ್ದಾಗ ಜೀತಕ್ಕೆ ಸೇರಿದರ ಮದುವೆಯಾಗುವವರೆಗೂ ಮುಕ್ತರಾಗುತ್ತಿರಲಿಲ್ಲ. ಕೆಲವರು ಸಾಯುವವರೆವಿಗೂ ಸಾಲ ತೀರಿಸಲಾಗದೆ ಜೀತದಲ್ಲೇ ಕೊನೆಯಾಗುತ್ತಿದ್ದರು. ಸಾಲ ತೀರಿಸಲು ತಮಗಿದ್ದ ಅಲ್ಪಸ್ವಲ್ಪ ಆಸ್ತಿಯನ್ನು ಯಜಮಾನರಿಗೆ ಮಾರಿ ಜೀತ ಮುಕ್ತರಾದವರ ಸಂಖ್ಯೆ

ಅಪಾರವಾಗಿದೆ.' ಸಾಲ ಪಡೆದ ದಲಿತ ಸಮುದಾಯದವರು ತಮಗೆ ನಷ್ಟವಾದರೂ ಸಹ ಪ್ರಾಮಾಣಿಕವಾದ ಜೀವನ ನಡೆಸಲು ಸಹಾಯ ಮಾಡಿದವರಿಗೆ ನಂಬಿಕೆಯಿಂದ ನಡೆದುಕೊಳ್ಳುವಂತಹ ಸ್ವಭಾವವನ್ನು ಬೆಳಸಿಕೊಂಡಿದ್ದಾರೆ.

ದು. ಸರಸ್ವತಿಯವರು ಸೂಕ್ಷ್ಮ ಸಂವೇದನೆಯ ದಲಿತ ಆತ್ಮಕಥನಗಾರ್ತಿ. ಅಲ್ಲದೆ ಕವಿಯತ್ರಿ, ಕಥೆಗಾರ್ತಿ ಹಾಗೂ ಪ್ರಗತಿಪರ ಸಂಘಟನೆ, ಚಳುವಳಿಯಲ್ಲಿ ಗುರುತಿಸಿಕೊಂಡವರು. ಪ್ರಗತಿಪರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡರೂ ಸಹ ಅಸಹಾಯಕರಾಗುವ ಸನ್ನಿವೇಶವನ್ನು ಇವರ ಆತ್ಮಕಥನವಾದ 'ಈಗೇನ್ ಮಾಡೀರಿ' ಕೃತಿಯಲ್ಲಿ ಕಾಣಬಹುದು. ಅಸಮಾನತೆಯ ಈ ಸಮಾಜದಲ್ಲಿ ಕ್ರೌರ್ಯದ ಅರಿವೇ ಇಲ್ಲದೆ ದು. ಸರಸ್ವತಿಯವರು ಬ್ಯಾಂಕೊಂದರಲ್ಲಿ ಉದ್ಯೋಗಿಯಾಗುತ್ತಾರೆ. ಭ್ರಷ್ಟಾಚಾರದ ಗೋಮುಖ ವ್ಯಾಘ್ರರಿಂದ ಲೆಕ್ಕಾಚಾರದಲ್ಲಿ ಮೋಸಕ್ಕೆ ಒಳಗಾಗಿ ಅಮಾನತಿಗೆ ಒಳಪಡುತ್ತಾರೆ. ಇದಲ್ಲದೆ ಅರೆಸ್ಟ್ ಆಗಿ ಜೈಲಿನಲ್ಲಿ ಒಂದು ದಿನ ಕಳೆಯುತ್ತಾರೆ. ಈ ಜೈಲಿನಲ್ಲಿಯ ಅನುಭವಗಳನ್ನು, ಮಹಿಳಾ ಖೈದಿಗಳ ವರ್ತನೆಗಳು ಹಾಗೂ ಅಧಿಕಾರಿ ಶಾಹಿಗಳ ದರ್ಪದ ವರ್ತನೆಗಳನ್ನು ಮುಕ್ತವಾಗಿ ಚಿತ್ರಿಸುತ್ತಾರೆ. ಕೋರ್ಟು, ಜೈಲು, ಪೊಲೀಸ್ ವ್ಯವಸ್ಥೆ ನ್ಯಾಯವನ್ನು ಕಾಪಾಡುವ ವ್ಯವಸ್ಥೆಗಳಾದರೂ ವ್ಯಕ್ತಿಯೊಬ್ಬ ಆರೋಪಿಯ ಸ್ಥಾನದಲ್ಲಿ ನಿಂತರೆ ನೋಡುವ ನೋಟ ಹಾಗೂ ನಡೆದುಕೊಳ್ಳುವ ರೀತಿಯಂತಹ ಚಿತ್ರಹಿಂಸೆಯನ್ನು ಕಟ್ಟಿಕೊಡುತ್ತಾರೆ. ಸ್ಟೇಷನ್‌ನಲ್ಲಿ ಆರೋಪಿಯೆನಿಸಿಕೊಂಡ ದು. ಸರಸ್ವತಿಯವರನ್ನು ವಿಚಾರಣೆ ನಡೆಸುವ ರೀತಿಯನ್ನು ಈ ಪ್ರಭುತ್ವ ಸಮಾಜ ಹೇಗೆ ಒಂದು ಹೆಣ್ಣು ಮಗಳನ್ನು ನಡೆಸಿಕೊಳ್ಳುತ್ತದೆ ಎಂಬುವುದನ್ನು ಕಾಣಬಹುದು.

'ನಿನಗೂ ಅವನಿಗೂ ಏನ್ ಸಂಬಂಧ?
ನಿನಗೂ ಅವನು ದುಡ್ಡು ಕೊಟ್ಟಿದ್ದಾನಂತೆ?
ಅವನ ಜೊತೆಯಲ್ಲಿ ಸುತ್ತುತ್ತಾ ಇದ್ಯಂತೆ?
ರಾತ್ರಿ ಹನ್ನೊಂದು ಗಂಟೆಲೆಲ್ಲ ಮನೆಗೆ ಕರ್‍ಕೊಂಡುಬಂದು ಬಿಡ್ತಾ ಇದ್ದನಂತೆ?
ನಿನ್ನ ಅಕ್ಕನ ಹೆರಿಗೆಗೆ ನೀನ್ ಯಾಕೆ ಹೋದೆ?
ನಿಮ್ಮ ಅತ್ತಿಗೆಯರು ಯಾಕೆ ಹೋಗಲಿಲ್ಲ?
ನೀನ್ ಯಾಕೆ ಇನ್ನು ಮದ್ವೆ ಮಾಡ್ಕೊಂಡಿಲ್ಲ?

ಬೇರೆ ಮನೆ ಯಾಕೆ ಮಾಡ್ಕೊಂಡಿದಿಯಾ? ಎಂಬ ಹತ್ತು ಹಲವಾರು ವಿಚಿತ್ರ ಪಶ್ನೆಗಳನ್ನು ಕೇಳಿ ಅವರನ್ನು ಅಸಹಾಯಕ ಸ್ಥಿತಿಗೆ ತಂದು ಅವಮಾನ

ಮಾಡುವುದನ್ನು ಕಾಣಬಹುದು. ಕೊನೆಗೆ ಹೀಗೆಲ್ಲ ಕಾಡಿದ ಪ್ರಭುತ್ವ ಸಮುದಾಯವನ್ನು ಲೇಖಕಿ ಈ ರೀತಿ ಸವಾಲಿನ ಪ್ರಶ್ನೆಯನ್ನು ಹಾಕುತ್ತಾರೆ. "ಯಪ್ಪ, ಸಿಕ್ದೆ ಅಂತ ಎಷ್ಟ್ ಕಾಡ್ಬುಟ್ರಿ ನನ್ನ. ಈಗೇನ್ ಮಾಡೀರಿ? ಎಂದು ಪ್ರತಿಕ್ರಿಯೆ ನೀಡುತ್ತಾಳೆ. ಇದೆಲ್ಲ ಹುನ್ನಾರಗಳು ನಡೆಯುವುದು ಕೇವಲ ದಲಿತರು ಎನ್ನುವ ಕಾರಣಕ್ಕೆ ಎಂಬುವುದನ್ನು ಆತ್ಮಕಥೆಯಲ್ಲಿ ಉಲ್ಲೇಖಿಸುತ್ತಾರೆ. ದೇವನೂರು ಮಹಾದೇವ ಅವರು ಹೇಳುವಂತೆ. "ನನ್ನ ಜಾತಿಯ ಬಗ್ಗೆ ಮೇಲರಿಮೆ ಇದೆ. ನನ್ನ ಜಾತಿ ಯಾರನ್ನೂ ಕೊಂದಿಲ್ಲ. ಅವಮಾನಿಸಿಲ್ಲ, ಸುಲಿದಿಲ್ಲ, ತಿಂದಿಲ್ಲ" ಎಂದಿದ್ದಾರೆ. ಹೀಗಿರುವಾಗ ಈ ಮೇಲ್ವರ್ಗದ ಸಮುದಾಯದ ಜನರು ಈ ದಲಿತ ಸಮುದಾಯವನ್ನು ಕಂಡರೇ ಹಾವುಕಡಿದಂತೆ ಆಡುವುದಕ್ಕೆ ಏನಾದರೂ ಅರ್ಥವಿದೆಯೇ?. ಈ ದಲಿತ ಸಮುದಾಯದವರಿಗೆ ಈ ಸಮಾಜದಲ್ಲಿ ಸು-ವ್ಯವಸ್ಥಿತವಾಗಿ ಬದುಕಲು ಅವಕಾಶವಿಲ್ಲವೇ? ಎಂದು ಪ್ರಶ್ನೆಮಾಡಬೇಕಾಗುತ್ತದೆ. ಪ್ರೀತಿಗೆ ಜಾತಿಯುಂಟೆ? ಹನುಮಂತಯ್ಯ ಮೇಲ್ವರ್ಗದ ಹುಡುಗಿಯನ್ನು ಪ್ರೀತಿಸಿದ. ತಿಂಗಳುಗಳು ಕಳೆದವು. ಸುತ್ತಾಡಿದ್ದರು, ಚುಂಬಿಸಿದ್ದರು. ಹುಡುಗಿಗೆ ನಾನು ಪ್ರೀತಿಸುತ್ತಿರುವ ಹುಡುಗ ಮಾದಿಗ ಜಾತಿ ಎಂದು ಗೊತ್ತಾಯಿತು. 'ನಿನ್ನ ಯೋಗ್ಯತೆಗೆ ಮುತ್ತು ಬೇರೆ ಕೇಡು, ಕನ್ನಡಿಯಲ್ಲಿ ನಿನ್ನ ಮುಖ ನೋಡಿಕೊಂಡಿದ್ದೀಯಾ ನಮ್ಮ ಮನೆಯ ಬಾಗಿಲೊಳಗೂ ಕಾಲಿಡುವ ಯೋಗ್ಯತೆ ಇಲ್ಲದ ಮಾದಿಗ ಜಾತಿಯ ನೀನು ನನ್ನನ್ನು ಪ್ರೀತಿಸುತ್ತಿಯಾ?' ಎಂದು ಅವಮಾನಿಸುತ್ತಾಳೆ. ಪರಸ್ಪರ ಇಬ್ಬರ ಮನಸ್ಸುಗಳು ವಿಶ್ವಾಸದಿಂದ, ಪ್ರೀತಿ ಮಮತೆಯಿಂದ ಬದುಕನ್ನು ನಡೆಸುವ ಈ ಪ್ರೇಮಿಗಳಿಗೆ ಜಾತಿ ಎಂಬ ಸೋಂಕು ತಗಲಿ ಪ್ರೀತಿ ಅಡಂಬರವಾಗುವುದನ್ನು ಕಾಣಬಹುದು. ಅಂದರೆ ಮನುಷ್ಯ-ಮನುಷ್ಯರ ಪ್ರೀತಿಗಿಂತ ಜಾತಿಯ ಅಹಂ ಮುಖ್ಯವೇ ಎನ್ನುವ ನಿಲುವನ್ನು ಈ ಸಮಾಜ ಚಿಂತಿಸಬೇಕಿದೆ. ಜಾತಿಯ ನಿಲುವುಗಳನ್ನು ಹೋಗಲಾಡಿಸಿ ಪಂಪನ ಮಾತಿನಂತೆ 'ಮನಷ್ಯ ಜಾತಿ ತಾನೊಂದೆ ವಲಂ' ವಚನಕಾರರ ಸಮ-ಸಮಾಜದ ಕನಸು ಕಾಣುತ್ತಾ, ಕುವೆಂಪು ಅವರ ವಿಶ್ವಮಾನವ ದಿವ್ಯ ಸಂದೇಶದ ಅನಿಕೇತನ ತತ್ವವನ್ನು ಈ ಸಮಾಜ ಅರ್ಥೈಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಪರಾಮರ್ಶನ ಗ್ರಂಥಗಳು

೧. ಸಂ. ಕೋಟಿಗಾನಹಳ್ಳಿ ರಾಮಯ್ಯ, ತಲಪರಿಗೆ, ಅಭಿಮಾನಿ ಪ್ರಕಾಶನ, ಬೆಂಗಳೂರು. ೨೦೦೬.
೨. ಸಿದ್ದಲಿಂಗಯ್ಯ, ಊರುಕೇರಿ, ಅಂಕಿತ ಪ್ರಕಾಶನ, ಬೆಂಗಳೂರು, ೨೦೧೦.
೩. ಈ. ನಾರಾಯಣಸ್ವಾಮಿ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೮.

೪. ತುಂಬಾಡಿ ರಾಮಯ್ಯ, ಮಣೆಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೫. ಸಮತಾ ದೇಶಮಾನೆ, ಒಡಲಿನ ಬೆಂಕಿ, ಶ್ರೀಸಾಯಿ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೯.

೬. ಎನ್. ಚಿನ್ನಸ್ವಾಮಿ ಸೋಸಲೆ, ಅಂಬೇಡ್ಕರ್ ವಾದ ಮತ್ತು ಪ್ರಸ್ತುತ ದಲಿತರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨.

೭. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೭.

೮. ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨.

೯. ಲಕ್ಷ್ಮಣ್ ಸಂಬೋಳಿ, ಭಾಗೋದಯ ಪ್ರಕಾಶನ, ಬೆಂಗಳೂರು, ೨೦೦೭.

೧೦. ದು. ಸರಸ್ವತಿ, ಈಗೇನ್ ಮಾಡೀರಿ, ಮಾನಸ ಪ್ರಕಾಶನ, ಬೆಂಗಳೂರು, ೨೦೦೧.

೧೧. ಪರಶಿವಮೂರ್ತಿ, ಗೆರೆದಾಟಿದ ಮೇಲೆ, ರೂಪ ಪ್ರಕಾಶನ, ಮೈಸೂರು, ೨೦೦೯.

೧೨. ಶರಣಮ್ಮ ಅ. ಗೊರೇಬಾಳ, ಕನ್ನಡಸಾಹಿತ್ಯದಲ್ಲಿ ಆತ್ಮಚರಿತ್ರ, ದಲಿತ ಸಾಹಿತ್ಯ ಪರಿಷತ್, ಗದಗ, ೨೦೦೨.

□□□

೩. ಎಂ.ಆರ್. ಶ್ರೀನಿವಾಸ ಮೂರ್ತಿ : ಬದುಕು-ಬರಹ

– ಪ್ರೊ. ಕೆ.ಎನ್. ಗಂಗಾನಾಯಕ್

ಬಾಲ್ಯ ಜೀವನ :

ಎಂ.ಆರ್. ಶ್ರೀನಿವಾಸಮೂರ್ತಿಯವರು ಆಧುನಿಕ ಕನ್ನಡ ನವೋದಯ ಸಾಹಿತ್ಯವನ್ನು ಕಟ್ಟಿಬೆಳೆಸಿದವರಲ್ಲಿ ಪ್ರಮುಖರು. ಜೊತೆಗೆ ತಾವು ಜೀವಿಸುತ್ತಿದ್ದ ಕಾಲದಲ್ಲಿ ಪ್ರಗತಿಶೀಲ ಚಳುವಳಿಯ ಕಾವು ಏರಿದ್ದರೂ ಅದರ ಪ್ರಭಾವಕ್ಕೆ ಒಳಗಾಗದೆ ನವೋದಯದಲ್ಲೇ ಗಟ್ಟಿಯಾಗಿ ನೆಲೆಯೂರಿದವರಲ್ಲಿ ಇವರೂ ಒಬ್ಬರು. ಶ್ರೀಯುತರು ರಾಮಚಂದ್ರರಾಯ ಮತ್ತು ಸಾವಿತ್ರಮ್ಮ ದಂಪತಿಗಳಿಗೆ ಎರಡನೆಯ ಮಗನಾಗಿ ೧೮೯೨ರಲ್ಲಿ ಜನಿಸಿದರು. ಇವರ ಪೂರ್ವಜರ ಮೂಲಸ್ಥಾನ ಆಂಧ್ರ ಪ್ರದೇಶವಾಗಿತ್ತು. ಆದರೆ ಗೋಲ್ಕಂಡ ಮುಸಲ್ಮಾನ ಕುತುಬ್‌ಷಾಹಿ ಸುಲ್ತಾನರ ಕಾಟ ತಾಳಲಾರದೆ, ಅವರಿಂದ ತಪ್ಪಿಸಿಕೊಂಡು ಇವರ ವಂಶಸ್ಥರು ದಕ್ಷಿಣದ ಧರ್ಮಪುರಿಗೆ ಬಂದು ನೆಲೆಸುತ್ತಾರೆ. ಕಾಲಕ್ರಮೇಣ ಇವರ ಪೂರ್ವಜರು ಸೇಲಂ ಜಿಲ್ಲೆಯ ಧರ್ಮಪುರಿಯಿಂದ ಮೈಸೂರು ಪ್ರಾಂತ್ಯಕ್ಕೆ ವಲಸೆ ಬಂದು ವಾಸಿಸಲಾರಂಭಿಸುತ್ತಾರೆ. ಇಂತಹ ಮನೆತನದಲ್ಲಿ ಹುಟ್ಟಿದ ಇವರು ತಂದೆ ತಾಯಿಗಳ ಮತ್ತು ಗುರುಹಿರಿಯರ ಆರೈಕೆ, ಮಾರ್ಗದರ್ಶನದಲ್ಲಿ ಬೆಳೆದಿದ್ದರಿಂದಲೇ ಇವರಲ್ಲಿ ಶಿಸ್ತು, ಸಂಯಮ, ವಿಧೇಯತೆ, ಪ್ರೀತಿ, ಸದ್ಗುಣಗಳು ಸ್ವಾಭಾವಿಕವಾಗಿ ಬೆಳೆದು ಬಂದಿದ್ದವು.

ಹಾಸನದಲ್ಲಿ ಜನಿಸಿದ ಇವರು ತಂದೆ ಉದ್ಯೋಗದಲ್ಲಿದ್ದುದ್ದರಿಂದ ಅವರು ವರ್ಗವಾಗಿ ಹೋಗುತ್ತಿದ್ದ ಕಡೆಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ನಡೆಯಿತು. ಪ್ರೌಢ ಶಿಕ್ಷಣಕ್ಕಾಗಿ ಬೆಂಗಳೂರಿನ ಪ್ರಸಿದ್ಧ ಸೆಂಟ್ರಲ್ ಕಾಲೇಜಿಗೆ ಬರಬೇಕಾಯಿತು. ಶ್ರೀನಿವಾಸ ಮೂರ್ತಿಯವರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿದ್ದುಕೊಂಡು ವ್ಯಾಸಂಗ ಮಾಡಿದರು. ಆಗಿನ ಕಾಲದಲ್ಲೇ

ಸೆಂಟ್ರಲ್ ಕಾಲೇಜಿಗೆ ದೊಡ್ಡ ಹೆಸರಿತ್ತು. ಇವರು ಕಿರಿಯ ವಯಸ್ಸಿನಲ್ಲೇ ಬೆಂಗಳೂರು ನಗರಕ್ಕೆ ಕಾಲಿಟ್ಟಿದ್ದರಿಂದ ಅದು ಇವರಲ್ಲಿ ರೋಮಾಂಚನವನ್ನುಂಟುಮಾಡಿತು. ಇವರಿಗೆ ಬೆಂಗಳೂರು ನಗರದ ವಾತಾವರಣ ಸಹಜವಾಗಿಯೇ ಚೈತನ್ಯವನ್ನು ತುಂಬುತ್ತದೆ. ಇಂತಹ ಬೆಂಗಳೂರಿನ ಉತ್ತಮ ವಾತಾವರಣದೊಂದಿಗೆ, ಹೊಸ ಜನರೊಂದಿಗೆ ಇವರು ಬಹು ಬೇಗನೆ ಹೊಂದಿಕೊಂಡು ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡರು. ಬೆಂಗಳೂರಿನ ಆಧುನಿಕ ವಾತಾವರಣದಿಂದ ಪಡೆದ ಪ್ರೇರಣೆ, ಹೊಸ ಹೊಸ ಗ್ರಂಥಗಳ ಅಧ್ಯಯನದಿಂದ ಪ್ರಾಪ್ತವಾದ ಜ್ಞಾನ, ಇವರಲ್ಲಿ ಅಪಾರವಾಗಿ ಇದ್ದುದ್ದರಿಂದ ವ್ಯಾಸಂಗಕ್ಕೆ ವಿಜ್ಞಾನ ವಿಷಯವನ್ನು ಐಚ್ಛಿಕವಾಗಿ ಆಯ್ಕೆಮಾಡಿಕೊಂಡರು. ಬುದ್ಧಿವಂತರೂ, ಶ್ರದ್ಧಾಳುಗಳೂ ಆಗಿದ್ದ ಇವರು ವಿಜ್ಞಾನ ವಿಷಯಗಳೊಂದಿಗೆ ೧೯೧೫ರಲ್ಲಿ ಹೆಚ್ಚು ಅಂಕಗಳೊಂದಿಗೆ ಬಿ.ಎ ಪದವಿಧರರಾದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ೧೯೧೫ರಲ್ಲಿ ಬಿ.ಎ ಪದವಿ ಮುಗಿದ ನಂತರ ಶ್ರೀನಿವಾಸ ಮೂರ್ತಿಯವರು ತಮ್ಮ ಎಫ್.ಎ ವ್ಯಾಸಂಗವನ್ನು ಅದೇ ಸೆಂಟ್ರಲ್ ಕಾಲೇಜಿನಲ್ಲಿ ಮುಂದುವರೆಸಿದರು. ಈ ಸಂದರ್ಭದಲ್ಲಿ ಪ್ರಿನ್ಸಿಪಾಲ್ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕ ಟೇಟ್ ಸಾಹೇಬರು, ವಿಜ್ಞಾನಶಾಸ್ತ್ರಗಳ ಪ್ರಾಧ್ಯಾಪಕ ನಾರಾಯಣಪ್ಪನವರು, ಗಣಿತಶಾಸ್ತ್ರದ ಶಿಕ್ಷಕ ಎಂ.ಟಿ. ನಾರಾಯಣಯ್ಯಂಗಾರ್, ಇಂಗ್ಲಿಷ್ ಅಧ್ಯಾಪಕ ಮೆಟ್ಕಾಫ್‌ರಂತಹ ಅಧ್ಯಾಪಕರು ಶ್ರೀನಿವಾಸಮೂರ್ತಿಯವರಿಗೆ ದೊರಕಿದ್ದರಿಂದ ಬೇರೆ ಬೇರೆ ಜ್ಞಾನ ಸಂಪಾದನೆಗೆ ಹೆಚ್ಚು ಅನುಕೂಲವಾಯಿತು. ಸೆಂಟ್ರಲ್ ಕಾಲೇಜಿನಲ್ಲಿ ಸಾಹಿತ್ಯದ ವ್ಯಾಸಂಗ ಮಾಡುತ್ತಿದ್ದ ವೆಂಕಟರಾವ್ ತೆಲಾಂಗ್ ಮುಂತಾದವರ ಪರಿಚಯವೂ ಇವರಿಗೆ ಆಯಿತು. ಇಂತಹ ಮಹನೀಯರ ಮೂಲಕ ಎಂ.ಆರ್.ಶ್ರೀನಿವಾಸಮೂರ್ತಿಯವರು ಹಲವು ಕನ್ನಡ ಕಾವ್ಯಗಳ ಪರಿಚಯ ಮಾಡಿಕೊಂಡು ಆ ಮೂಲಕ ಸಾಹಿತ್ಯದ ಗೀಳು ಹೆಚ್ಚಿಸಿಕೊಂಡರು. ವಿಜ್ಞಾನ ವಿಷಯ, ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹೆಚ್ಚಿಸಿಕೊಂಡಿದ್ದ ಎಂ.ಆರ್.ಶ್ರೀ ಅವರು ವ್ಯಾಸಂಗದ ಅವಧಿಯಲ್ಲಿ ಗುರುಗಳ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಇವರಲ್ಲಿ ದೃಢನಿರ್ಧಾರವಿದ್ದುದರಿಂದಲೇ ಮನಸ್ಸನ್ನು ಆಚೆ ಈಚೆ ಹರಿದಾಡಿಸದೇ ಛಲಬಿಡದ ತ್ರಿವಿಕ್ರಮನಂತೆ ಸೆಂಟ್ರಲ್ ಕಾಲೇಜ್ ಲೈಬ್ರರಿಯಲ್ಲಿನ ಗ್ರಂಥಗಳನ್ನೆಲ್ಲ ಓದಲಾರಂಭಿಸಿದರು. ಹೀಗೆ ತಮ್ಮ ವ್ಯಾಸಂಗದ ಅವಧಿಯಲ್ಲಿ ಪಠ್ಯ ವಿಷಯದ ಜೊತೆ ಜೊತೆಗೆ ಸಾಹಿತ್ಯ ವಿಷಯವನ್ನೂ ಅಧ್ಯಯನ ಮಾಡಿ ಕನ್ನಡದಲ್ಲಿ ಅಪಾರ ಜ್ಞಾನವನ್ನು ತಮ್ಮದಾಗಿಸಿಕೊಂಡರು.

ಅನ್ಯಶಿಸ್ತೀಯ ವಿಷಯಗಳ ಮೇಲೆ ಹೆಚ್ಚಿನ ಆಸಕ್ತಿ ಹೊಂದಿದ್ದ ಶ್ರೀನಿವಾಸಮೂರ್ತಿಯವರು ಬಿ.ಎ ಮತ್ತು ಎಫ್.ಎ ವ್ಯಾಸಂಗವನ್ನು ಪೂರೈಸಿದ

ಕೂಡಲೇ 'ಲಾ' ಪರೀಕ್ಷೆಯ ವಿದ್ಯಾಭ್ಯಾಸಕ್ಕೋಸ್ಕರ ಮುಂಬಯಿಗೆ ಹೋದರು. ಆದರೆ ಅವಿಭಕ್ತ ಕುಟುಂಬದಲ್ಲಿದ್ದ ಇವರು ಕೌಟುಂಬಿಕ ಸಂದರ್ಭಗಳಿಂದ ಲಾ ಕೋರ್ಸನ್ನು ಪೂರೈಸಲಾಗದೆ ಆರು ತಿಂಗಳ ಒಳಗಾಗಿ ತಂದೆ ನೌಕರಿ ಮಾಡುತ್ತಿದ್ದ ಶಿವಮೊಗ್ಗಕ್ಕೆ ಹಿಂತಿರುಗಿ ಬಂದು ಅಧ್ಯಾಪಕ ವೃತ್ತಿ ಮಾಡಬೇಕಾಯಿತು. ಉಪಾದ್ಯಾಯ ವೃತ್ತಿಯಲ್ಲಿದ್ದುಕೊಂಡೇ ಪುನಃ ಇವರು ವಿದ್ಯಾರ್ಥಿಯಾಗಬೇಕಾಗುತ್ತದೆ. ಹೀಗೆ ಸ್ನಾತಕೋತ್ತರ ಉಪಾಧ್ಯಾಯ ಶಿಕ್ಷಣ ತರಬೇತಿಗೆ ಮೈಸೂರಿಗೆ ಬಂದು ಅದನ್ನು ಮುಗಿಸಿದರು.

ದಾಂಪತ್ಯ ಜೀವನ

ಶ್ರೀನಿವಾಸ ಮೂರ್ತಿಯವರು ಪ್ರೌಢಶಾಲೆಯ ಕೊನೆಯ ತರಗತಿಯ ವಿದ್ಯಾರ್ಥಿಯಾಗಿದ್ದಾಗಲೇ ಸೋದರ ಮಾವನ ಮಗಳಾದ ಲಕ್ಷ್ಮಮ್ಮನೊಂದಿಗೆ ವಿವಾಹವಾಗಿತ್ತು. ಆದರೆ ಇವರ ವಿದ್ಯಾಬ್ಯಾಸ ಮುಗಿಯುವವರೆಗೆ ಹೆಂಡತಿ ತವರು ಮನೆಯಲ್ಲೇ ವಾಸವಾಗಿದ್ದರು. ಇವರು ಬೊಂಬಾಯಿಯಿಂದ ಬಂದೊಡನೆ ಮೂರ್ತಿಗಳ ಸಾಂಸಾರಿಕ ಜೀವನ ಪ್ರಾರಂಭವಾಯಿತು. ಕೆಲಸ ಖಾಯಂ ಆದ ಮೇಲೆ ತೀರ್ಥಹಳ್ಳಿಯಲ್ಲಿ ಒಂದು ಮನೆಯನ್ನು ಕೊಂಡುಕೊಂಡು ಹೊಸ ಸಂಸಾರವನ್ನು ಪ್ರಾರಂಭಿಸಿದರು. ಹೆಂಡತಿಗೂ ಒಂದು ವ್ಯಕ್ತಿತ್ವವಿದೆ, ಅವಳೂ ಸರಿಸಮಾನಳು, ಅವಳಿಗೂ ಮಾನ್ಯತೆ ನೀಡಬೇಕು ಎಂಬ ಮನೋಭಾವ ಇವರಲ್ಲಿ ಇತ್ತು. ಹಾಗಾಗಿ ಇವರು ಹೆಂಡತಿಯನ್ನು ಪ್ರೀತಿಯಿಂದ ಕಾಣುತ್ತಿದ್ದರು. ಯಾವ ತಾರತಮ್ಯವಿಲ್ಲದೆ ತಮ್ಮ ಸಂತೋಷದ ಪಾಲನ್ನು ಹೆಂಡತಿಯೊಂದಿಗೆ ಮುಕ್ತವಾಗಿ ಹಂಚಿಕೊಳ್ಳುತ್ತಿದ್ದರು. ಹೊರಗಿನ ಪ್ರಪಂಚದ ಅನುಭವ ಸ್ತ್ರೀಯರಿಗೂ ಆಗಬೇಕು, ಅವರೂ ಶಿಕ್ಷಣ ಪಡೆಯಬೇಕು ಎಂಬ ಕಳಕಳಿ ಇದ್ದುದರಿಂದಲೇ ಲಕ್ಷ್ಮಮ್ಮನಿಗೆ ಇವರ ಮೇಲೆ ಅಪಾರವಾದ ಗೌರವವಿತ್ತು. ಈ ರೀತಿ ಇವರ ದಾಂಪತ್ಯ ಜೀವನ ಅನ್ಯೋನ್ಯವಾಗಿದ್ದುದರಿಂದಲೇ ಇವರ ಈ ಸಾಧನೆಯ ಹಿಂದೆ ಇವರ ಧರ್ಮಪತ್ನಿಯಾದ ಲಕ್ಷ್ಮಮ್ಮ ಅವರ ಪಾತ್ರ ಬಹಳ ಮುಖ್ಯವಾದುದು. ಇವರ ಅನ್ಯೋನ್ಯ ದಾಂಪತ್ಯ ಜೀವನ ನೆರೆಹೊರೆಯವರಿಗೆ ಆದರ್ಶವಾಗಿತ್ತು. ಎಂ.ಆರ್. ಶ್ರೀನಿವಾಸಮೂರ್ತಿಯವರ ಬದುಕಿನ ಎಲ್ಲ ಕಷ್ಟ ಸುಖಗಳಲ್ಲಿ ಪಾಲುದಾರಳಾಗಿರುವ ಶ್ರೀಮತಿ ಲಕ್ಷ್ಮಮ್ಮನವರು ಪತಿಯ ಇಂಗಿತವನ್ನು ಅರಿತು ಮುನ್ನೆಡೆಯುತ್ತಿದ್ದರು. ಆ ಮೂಲಕವಾಗಿ ಮೂರ್ತಿಯವರ ಎಲ್ಲ ಸಾಧನೆ-ಸಿದ್ಧಿಗಳ, ಸರ್ವತೋಮುಖ ಬೆಳವಣಿಗೆಯ ಹಿಂದಿನ ಶಕ್ತಿಯಾಗಿ ನಿಂತುಕೊಂಡಿದ್ದರು. ಇವರ ಬರವಣಿಗೆಗೆ ಪಲವಾರು ರೀತಿಯಲ್ಲಿ ಇವರು ಸಹಾಯಮಾಡಿದ್ದಾರೆ. ಹೀಗೆ ಪತಿಯ ಪ್ರಗತಿಗೆ

ಲಕ್ಷ್ಮಮ್ಮನವರು ಶಕ್ತಿಮೀರಿ ದುಡಿದಿರುವುದನ್ನು ಕಾಣುತ್ತೇವೆ. ಈ ರೀತಿ ಅನ್ಯೋನ್ಯವಾಗಿದ್ದ ಪರಸ್ಪರರು ತಮ್ಮ ಸಾಂಸಾರಿಕ ಜೀವನವನ್ನು ಸಂತೋಷದಿಂದಲೇ ಕಳೆದರು. ಶ್ರೀನಿವಾಸಮೂರ್ತಿಯವರು ಆಗಿನ ಕಾಲದ ಹಳೆಯ ಕಂದಾಚಾರ, ಅನಿಷ್ಟ ಪದ್ಧತಿಯಿಂದ ಹೊರತಾಗಿದ್ದುದರಿಂದಲೇ ಸಾಂಸಾರಿಕ ಜೀವನದಲ್ಲಿ ಅನ್ಯೋನ್ಯತೆಯನ್ನು ಕಾಪಾಡಿಕೊಂಡು ಇತರರಿಗೆ ಆದರ್ಶವಾಗಿದ್ದರು.

ನೌಕರಿ

ಇವರದು ಅವಿಭಕ್ತ ಕುಟುಂಬವಾಗಿದ್ದುದರಿಂದ ತಂದೆ ರಾಮಚಂದ್ರರಾಯರೊಬ್ಬರ ಸಂಪಾದನೆಯಿಂದ ಕುಟುಂಬ ನಿರ್ವಹಣೆ ಕಷ್ಟವಾಗಿತ್ತು. ಕುಟುಂಬ ದೊಡ್ಡದಾಗಿದ್ದುದರಿಂದ ಖರ್ಚು ವೆಚ್ಚವನ್ನು ಸರಿದೂಗಿಸಲಾಗುತ್ತಿರಲಿಲ್ಲ. ಆಗ ರಾಮಚಂದ್ರರಾಯರು ಬೊಂಬಾಯಿಯಲ್ಲಿದ್ದ ಮಗನನ್ನು ಹಿಂದಕ್ಕೆ ಕರೆಸಿಕೊಂಡರು. ಹಿಂದಿರುಗಿ ಬಂದ ಶ್ರೀನಿವಾಸಮೂರ್ತಿಯವರು ಮೊದಲಿಗೆ ಶಿವಮೊಗ್ಗಾದ ಶಾಲೆಯಲ್ಲಿ ಮೂರು ತಿಂಗಳು ಉಪಾಧ್ಯಾಯರಾಗಿ ಸೇವೆಸಲ್ಲಿಸಿ, ಅನಂತರ ತೀರ್ಥಹಳ್ಳಿಯಲ್ಲಿ ಸೇವೆ ಪ್ರಾರಂಭಿಸಿ, ೧೯೧೬ರಲ್ಲಿ ಖಾಯಂಗೊಂಡರು. ಹೀಗೆ ಶಿಕ್ಷಣ ಇಲಾಖೆಯನ್ನು ಪ್ರವೇಶಿಸಿ ಅಧ್ಯಾಪಕರಾಗಿ, ಮಾಧ್ಯಮಿಕ ಶಾಲೆಯ ಮುಖ್ಯೋಪಾದ್ಯಾಯರಾಗಿ, ರೇಂಜ್‌ಇನ್ಸ್‌ಪೆಕ್ಟರಾಗಿ ಹಲವು ಬಗೆಯ ಹುದ್ದೆಗಳನ್ನು ನಿರ್ವಹಿಸಿದರು. ಜೊತೆಗೆ ಇವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ - ಇಂಗ್ಲಿಷ್ ನಿಘಂಟುವಿನ ಸಹ ಸಂಪಾದಕರಾಗಿ ೧೯೪೩ ರಿಂದ ೧೯೪೬ರ ವರೆಗೆ ಕೆಲಸ ಮಾಡಿದರು. ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾಧಿಕಾರಿಗಳಾಗಿಯೂ ಸೇವೆಸಲ್ಲಿಸಿದ ಇವರು ೧೯೪೭ರಲ್ಲಿ ನಿವೃತ್ತರಾದರು. ಇವರು ಒಳ್ಳೆಯ ಅಧ್ಯಾಪಕ, ಸಮರ್ಪಕ ಅಧಿಕಾರಿ,, ಒಳ್ಳೆಯ ವಾಗ್ಮಿಗಳಾಗಿದ್ದರು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿಬೆಳೆಸಿದ ಹಿರಿಯರಲ್ಲೊಬ್ಬರಾದ ಇವರು ನಿವೃತ್ತರಾದ ಮೇಲೆ ಪರಿಷತ್ತಿನ ಕಾರ್ಯಕಾರಿ ಸದಸ್ಯರಾಗಿ, ಅಧ್ಯಕ್ಷರಾಗಿ (೧೯೫೦-೫೩) ಸೇವೆಸಲ್ಲಿಸಿದರಲ್ಲದೆ, ಕನ್ನಡ ನುಡಿ ಮತ್ತು ಪರಿಷತ್ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು.

ಹೀಗೆ ಶ್ರೀನಿವಾಸಮೂರ್ತಿಯವರು ಕೆಲಸಕ್ಕೆ ಸೇರಿ ತಂದೆಯ ನೆರವಿಗೆ ನಿಂತರು. ತೀರ್ಥಹಳ್ಳಿಯಲ್ಲಿ ಒಂಬತ್ತು ತಿಂಗಳು ಸೇವೆಸಲ್ಲಿಸಿ ಮರಳಿ ಶಿವಮೊಗ್ಗೆಗೆ ಬಂದರು. ಆ ನಂತರ ೧೯೨೧ರ ಸುಮಾರಿಗೆ ಇವರನ್ನು ಬೆಂಗಳೂರಿಗೆ ವರ್ಗ ಮಾಡಲಾಗುತ್ತದೆ. ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ, ಇನ್ಸ್‌ಪೆಕ್ಟರ್ ಆಗಿ, ಜಿಲ್ಲಾ ವಿದ್ಯಾಧಿಕಾರಿಗಳಾಗಿ ಸೇವೆಸಲ್ಲಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಕಟ್ಟುನಿಟ್ಟಿನ ಜೀವನ ನಡೆಸಿ, ತತ್ವಸಿದ್ಧಾಂತಗಳಿಗೆ ಬದ್ಧರಾಗಿದ್ದುಕೊಂಡು ತಮ್ಮ ವೃತ್ತಿ ಜೀವನದಲ್ಲಿ

3

ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಅತ್ಯಂತ ಪ್ರಾಮಾಣಿಕ ವ್ಯಕ್ತಿಯಾಗಿದ್ದ ಇವರು ನಿವೃತ್ತಿಯ ಕೊನೆಯ ದಿನಗಳವರೆಗೆ ಶ್ರದ್ಧೆ, ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಪಾಠ ಕಲಿಸುವಾಗ, ಆಡಳಿತ ನಡೆಸುವಾಗ ಇವರಲ್ಲಿ ಶಿಸ್ತು ಇರುತ್ತಿತ್ತು. ಸರಳ ಸಜ್ಜನರಾಗಿದ್ದ ಇವರು ಕೈಯಲ್ಲಿ ಅಧಿಕಾರವಿದ್ದರೂ ಅದನ್ನು ಎಂದೂ ಚಲಾಯಿಸಲಿಲ್ಲ. ಎಲ್ಲರನ್ನು ಗೌರವದಿಂದ ಕಾಣುತ್ತಿದ್ದ ಇವರು ಇತರರೊಂದಿಗೆ ಸಹಾನುಭೂತಿಯಿಂದ ನಡೆದುಕೊಳ್ಳುತ್ತಿದ್ದರು.

ಈ ವೇಳೆಗಾಗಲೇ ರಾಮಚಂದ್ರರಾಯರ ಕುಟುಂಬದಲ್ಲಿ ಕಷ್ಟದ ಮೇಲೆ ಕಷ್ಟಗಳು ಅಲೆ ಅಲೆಯಾಗಿ ಬಂದವು. ಅಣ್ಣ-ತಂಗಿ ಇನ್ನಿತರರನ್ನು ಸಾಕಿ ಸಲಹುವ ಜವಾಬ್ದಾರಿ ಇವರ ಮೇಲೆ ಬಿತ್ತು. ಆಗ ಎಂ.ಆರ್.ಶ್ರೀನಿವಾಸಮೂರ್ತಿಯವರು ಮತ್ತು ಸುಬ್ಬರಾಯ ಪಂತಲು ಮಾತ್ರ ಸಂಪಾದಿಸುತ್ತಿದ್ದರು. ಇವರಿಬ್ಬರು ಗಾಡಿಯ ಎರಡು ಎತ್ತುಗಳಂತೆ ಒಂದಾಗಿ ಸಂಸಾರದ ನಿರ್ವಹಣೆಯನ್ನು ಮಾಡಿದರು. ಪ್ರಾಮಾಣಿಕರೂ, ಉದಾರಿಗಳೂ, ಇತರರ ಕಷ್ಟದಲ್ಲಿ ಭಾಗಿಯಾಗುವ ಗುಣಹೊಂದಿದ್ದ ಶ್ರೀನಿವಾಸಮೂರ್ತಿಯವರು ಜೀವನದಲ್ಲಿ ಅತಿ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಇದನ್ನು ನಿಭಾಯಿಸುವುದಕ್ಕಾಗಿ ಅವರು ವಿಶೇಷ ರೀತಿಯ ಮಾನಸಿಕ, ಆರ್ಥಿಕ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದರು.

ವಿಜ್ಞಾನಕ್ಕಿಂತ ಸಾಹಿತ್ಯದಲ್ಲಿ ಹೆಚ್ಚು ಆಸಕ್ತಿ ಇತ್ತು. ಇದು ಅವರಿಗೆ ಅನುವಂಶಿಕವಾಗಿ ಬಂದಿತ್ತು. ಸಂಸ್ಕೃತದ ಜೊತೆಗೆ ಹಳಗನ್ನಡ, ಹೊಸಗನ್ನಡ ಕಾವ್ಯಗಳ ಅಧ್ಯಯನ, ವೀರಶೈವ ವಾಙ್ಮಯದ ಮೇಲೆ ಇವರಿಗೆ ವಿಶೇಷ ಮಮತೆಯಿತ್ತು. ಜೊತೆಗೆ ಬೇರೆ ಬೇರೆ ಕಾವ್ಯದ ಹಲವಾರು ಪದ್ಯಗಳನ್ನು ಕುಳಿತಲ್ಲಿ ನಿಂತಲ್ಲಿ ತಪ್ಪಿಲ್ಲದೆ ಉದ್ಧರಿಸಬಲ್ಲ ಅದ್ಭುತ ನೆನಪಿನಶಕ್ತಿಯೂ ಇವರಿಗಿತ್ತು. ಹೀಗೆ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದ್ದ ಇವರು ಸೃಷ್ಟಿಸಿರುವ ಸಾಹಿತ್ಯವು ವೈವಿಧ್ಯಮಯವಾದದ್ದು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸದಸ್ಯರಾಗಿ, ಅಧ್ಯಕ್ಷರಾಗಿ ದುಡಿದಿದ್ದಲ್ಲದೆ ೩೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನೂ ವಹಿಸಿ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕವಿತೆ, ನಾಟಕ, ಕಾದಂಬರಿ ಹಾಗೂ ಸೃಜನೇತರ ಕ್ಷೇತ್ರದಲ್ಲಿ ಲೇಖಕರಾಗಿ ಕನ್ನಡ ಸಾಹಿತ್ಯ ಸಮೃದ್ಧಿಗೆ ಕಾರಣಕರ್ತರು. ಧರ್ಮ, ಇತಿಹಾಸ, ಸಾಮಾಜಿಕ ನಡವಳಿಕೆ ಇವರ ಸಾಹಿತ್ಯದ ವಸ್ತು. ಇವರು ವಿಜ್ಞಾನದ ಅಧ್ಯಯನದಲ್ಲಿ ತೊಡಗಿದ್ದರಿಂದಲೇ ವೈಚಾರಿಕತೆಯನ್ನು ಸಾಹಿತ್ಯದಲ್ಲಿ ತುರುಕಲು ಸಾಧ್ಯವಾಗಿದೆ.

ಧರ್ಮದುರಂತ, ನಾಗರಿಕ ನಾಟಕಗಳು ಇಂತಹ ಅಸ್ಮಿತೆಯುಳ್ಳವುಗಳಾಗಿವೆ. ನವೋದಯ ಕಾಲದವರಾದ ಎಂ.ಆರ್.ಶ್ರೀಯವರು ಇದ್ದದ್ದು ಇದ್ದಹಾಗೆ ಒಪ್ಪುವವರಾಗಿರಲಿಲ್ಲ. ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳು ಮಹಿಳೆಯರ ಪಾಲಿಗೆ ನುಂಗಲಾರದ ಬಿಸಿ ತುಪ್ಪವಾಗಿದ್ದ ಕಾಲದಲ್ಲಿ ಅದನ್ನು ಮುರಿದು ಕ್ರಾಂತಿ ಎಬ್ಬಿಸುತ್ತಾರೆ. ವಿಧವೆಯರ ಮೇಲೆ ಹೇರಿರುವ ಕಂದಾಚಾರಕ್ಕೆ ಒಳಗಾಗದೆ ಸಹಜವಾಗಿ ಬದುಕಬೇಕೆಂಬುದನ್ನು ತಮ್ಮ ಕುಟುಂಬದಲ್ಲೇ ಜಾರಿಗೆ ತಂದ ಧೀಮಂತರು. ನಾದಿನಿ ಗಂಡ ಸತ್ತ ಮೇಲೆ ಮೂಗುತಿ, ಓಲೆ, ಕೈಬಳೆಗಳನ್ನು ಧರಿಸಬೇಕೆಂದು ಹೇಳಿ ಆಚರಣೆಗೆ ತಂದ ಪ್ರಜ್ಞಾವಂತರು.

ಸಾವಿತ್ರಿ – ಸಾಮಾಜಿಕ ಕಾದಂಬರಿ. ಮೂರ್ತಿರಾಯ, ಸಾವಿತ್ರಿಯರಿಬ್ಬರ ನಡುವಿನ ಪ್ರೇಮಪ್ರಸಂಗವು ಮನೆ, ದೇವಸ್ಥಾನ, ನದಿ ದಂಡೆಯ ಮೇಲೆ ರೊಮ್ಯಾಂಟಿಕ್ ರೀತಿಯಲ್ಲಿ ನೆರವೇರುತ್ತದೆ. ಇಲ್ಲಿ ಪುರುಷ–ಸ್ತ್ರೀ ನಡುವಿನ ಪ್ರೇಮ, ಅನುರಾಗವು ಸಹಜತೆಗಿಂತ ಭಿನ್ನ ಸ್ವರೂಪ ಪಡೆದು ವಿವಾದದೊಂದಿಗೆ ಕೊನೆಗೊಳ್ಳುತ್ತದೆ.

ಆದರೆ **ಮಹಾತ್ಯಾಗ** ಕಾದಂಬರಿಯು ದುರಂತದಿಂದ ಕೂಡಿದ್ದು ಇದಕ್ಕೆ ತದ್ವಿರುದ್ಧವಾದುದು. ಇಲ್ಲಿ ಬರುವ ನಾಯಕ ನಾಯಕಿಯರು ಪ್ರೀತಿಸಿ, ಮದುವೆಯಾದವರಲ್ಲ. ಹಾಗಾಗಿ ಇಬ್ಬರಲ್ಲಿ ಮನಸ್ತಾಪ ಏರ್ಪಡುತ್ತದೆ. ಸೀತಾ ರಾಮರಾಯರು ತಾಯಿಯ ಮಾತನ್ನು ಮೀರಲಾಗದೆ ಇಷ್ಟವಿಲ್ಲದಿದ್ದರೂ ಸರೋಜಾಳನ್ನು ಮದುವೆಯಾಗುತ್ತಾನೆ. ಆದರೆ ಕೆಲವೇ ದಿನಗಳಲ್ಲಿ ಅತ್ತೆ ಸೊಸೆ ಜಗಳವಾಡಿಕೊಂಡು ಬೀದಿರಂಪ ಮಾಡುತ್ತಾರೆ. ಇದರಿಂದ ಮನನೊಂದು ನೆಮ್ಮದಿಯಿಲ್ಲದ ನಾಯಕ ಇನ್ನೊಂದು ಮದುವೆ ಮಾಡಿಕೊಳ್ಳುತ್ತಾನೆ. ಗಂಡ ನಿರಾಕರಿಸಿದರೂ ಸರೋಜ ವೈದ್ಯ ವೃತ್ತಿಯ ಮೂಲಕ ಸಮಾಜ ಸೇವೆಯಲ್ಲಿ ತೊಡಗುತ್ತಾಳೆ. ಗಂಡ ಮದುವೆಯಾದನೆಂದು ಎಂದೂ ಕೊರಗದೆ ಸರೋಜ ಇಲ್ಲಿ ಮಹಾತ್ಯಾಗ ಮಾಡುತ್ತಾಳೆ. ಆ ಮೂಲಕ ಜೀವನದಲ್ಲಿನ ಕಷ್ಟ ನಷ್ಟಗಳನ್ನೆಲ್ಲ ಸಹಿಸಿಕೊಂಡು ಪರಿವರ್ತನೆಯಾಗುವುದನ್ನು ಕಾಣುತ್ತೇವೆ.

ರಂಗನ ಕನಸಿನ ದಿನಗಳು ವಿಶಿಷ್ಟ ಬಗೆಯ ಹಾಸ್ಯಪ್ರಧಾನ ಕಾದಂಬರಿ. ಆತ್ಮ ಕಥೆ, ಪ್ರಬಂಧ, ಕಾದಂಬರಿಯ ಪರಿಕಲ್ಪನೆ ಎಲ್ಲವೂ ಮಿಳಿತಗೊಂಡಿರುವ ಒಂದು ಪರಿಪಕ್ವ ರಚನೆ. ಎಂ.ಆರ್.ಶ್ರೀಯವರು ಹಳ್ಳಿಯಲ್ಲಿ ಸ್ಕೂಲ್ ಮಾಸ್ಟರ್ ಆಗಿದ್ದಾಗಿನ ಅನುಭವಗಳ ಕ್ರೋಢೀಕರಣವೆಂದೇ ಇದನ್ನು ಹೇಳಬಹುದು. ಇಲ್ಲಿ ಬರುವ ಸ್ಕೂಲ್ ಇನ್‌ಸ್ಪೆಕ್ಟರ್, ಸ್ಕೂಲ್ ಹೆಡ್ ಮಾಸ್ಟರ್‌ಗಳ ನಡುವಿನ ಸಂಬಂಧ, ಹಳ್ಳಿಸ್ಕೂಲುಗಳ

ಹಾಗೂ ಹಳ್ಳಿ ಮೇಸ್ಟರ ನಡುವಿನ ಅವಿನಾಭಾವ ಸಂಬಂಧಗಳ ಚಿತ್ರಣಗಳು ಕಣ್ಣಿಗೆ ಕಟ್ಟುವಂತೆ ಬಿಡಿ ಬಿಡಿಯಾಗಿ ಅನಾವರಣಗೊಂಡಿವೆ. ಬಡ ಸ್ಕೂಲ್ ಮಾಸ್ಟರ್‌ಗಳೆಂದೇ ಕರೆಸಿಕೊಳ್ಳುತ್ತಿದ್ದ ಅಂದಿನ ಅಧ್ಯಾಪಕರುಗಳ ಬಡತನ, ಹೆಂಡತಿ ಸತ್ತ ಮೇಸ್ಟರುಗಳ ಸಾಂಸಾರಿಕ ಬದುಕಿನ ಗೋಳು, ವಿದ್ಯಾರ್ಥಿಗಳೊಂದಿಗಿನ ಅವರ ಅವಿನಾಭಾವ ಸಂಬಂಧಗಳು ಕಣ್ಣಿಗೆ ಕಟ್ಟುವಂತೆ ಇಲ್ಲಿ ಗೋಚರಿಸುತ್ತವೆ. ಒಟ್ಟಾರೆ ಕನ್ನಡ ಸಾಹಿತ್ಯದ ಜೀವಂತ ಗ್ರಂಥಗಳಲ್ಲಿ ಇದೂ ಒಂದು ಎಂಬ ಪ್ರಶಂಸೆಗೆ ಪಾತ್ರವಾಗಿದೆ.

ಕವನಗಳು

ಮೂಢನಂಬಿಕೆ, ಕಂದಾಚಾರ, ಧರ್ಮ–ದೇವರುಗಳಿಂದ ಉಪಯೋಗವಿಲ್ಲ ಎನ್ನುವ ಧೋರಣೆ ಇವರ ಕವಿತೆಗಳಲ್ಲಿ ಎದ್ದು ಕಾಣುತ್ತದೆ. ಸ್ವದೇಶಿ ಮತ್ತು ವಿದೇಶಿ ವಿಚಾರಗಳಿಗೆ ಮಾರುಹೋಗಿದ್ದ ಇವರು ಪಾಶ್ಚಾತ್ಯ ರೀತಿಯ ಕಥನ ಕವನಗಳನ್ನು ಪೊರತಂದಿದ್ದಾರೆ. ತತ್ವಜ್ಞಾನಿ, ದೇವಯಾನಿ, ಲಲಿತಾಂಗಿ ಮೊದಲಾದ ಕವನ ಸಂಕಲನಗಳು ಇವರ ಹೊಸ ಆಲೋಚನೆಗಳಿಗೆ ಹಿಡಿದ ಕನ್ನಡಿಯಂತಿವೆ.

ನಾಟಕಗಳು

ಧರ್ಮ ದುರಂತ, ನಾಗರಿಕ, ರೋಲ್ಸ್ ಮೇಸ್ತ್ರು, ಕವಿಯ ಸೋಲು– ಇವು ಎಂ.ಆರ್.ಶ್ರೀಯವರ ಪ್ರಸಿದ್ಧ ನಾಟಕಗಳು. ಒಂದು ಕಾಲದಲ್ಲಿ ವಿಜಯನಗರದ ಅರಸರುಗಳು ಮುತ್ತುರತ್ನಗಳನ್ನು ಧಾನ್ಯದ ರಾಶಿಗಳಂತೆ ಒಟ್ಟಿಕೊಂಡು ಮಾರಾಟ ಮಾಡುತ್ತಿದ್ದ ಹಂಪೆಯ ವೈಭವ ಇಂದು ನಾಶವಾಗಿದೆ. ಇಂತಹ ಅಳಿದುಳಿದ ಅವಶೇಷಗಳು ಯುವಕನ ಮನಕಲಕುವಿಕೆಯ ಚಿತ್ರಣ ನಾಗರಿಕ ಕೃತಿಯಲ್ಲಿ ಅಭಿವ್ಯಕ್ತಗೊಂಡಿದೆ. ಉಗ್ರನರಸಿಂಹ, ಹಂಪೆಯ ವಿರೂಪಾಕ್ಷನಿಗೆ ಈ ಗತಿ ಬರಬಾರದಿತ್ತು. ಏಕೆಂದರೆ ಭಕ್ತಿಭಾವದಿಂದ ಪೂಜಿಸಲ್ಪಡುತ್ತಿದ್ದ ದೇವರುಗಳು ದಾಳಿಕೋರರನ್ನು ಏಕೆ ಹಿಮ್ಮೆಟ್ಟಿಸಲಿಲ್ಲವೆಂದು ಯುವಕ ಇಲ್ಲಿ ಪ್ರಶ್ನಿಸುತ್ತಾನೆ. ಜೊತೆಗೆ ಕಲ್ಲಿನ ಮೂರ್ತಿಗಳಲ್ಲಿ ಶಕ್ತಿಯಿದೆ ಎಂದು ಭಾವಿಸಿರುವುದು ಬರೀ ಭ್ರಮೆ. ಆದ್ದರಿಂದ ದೇವರುಗಳಿಗೆ ಪೂಜೆಗಳೇಕೆ, ಆ ವಿಗ್ರಹಗಳಲ್ಲಿ ದೇವರಿಲ್ಲವೆಂದು ಪ್ರಶ್ನಿಸುತ್ತಾನೆ. ಜೊತೆಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳದ ಈ ದೇವರುಗಳು ಭಕ್ತರನ್ನು ಹೇಗೆ ರಕ್ಷಿಸಬಲ್ಲರು? ಎಂಬ ಸಂಶಯ ವ್ಯಕ್ತಪಡಿಸಿ ನಾಸ್ತಿಕವಾದವನ್ನು ಪ್ರತಿಪಾದಿಸುತ್ತಾನೆ. ನಮ್ಮ ನಂಬಿಕೆ, ಆಚಾರ ವಿಚಾರಗಳೆಲ್ಲ ಸುಳ್ಳು ಎಂದು ತೊಳಲಾಡುವುದೆ ಇಲ್ಲಿ ಪ್ರಧಾನವಾಗಿದೆ. ಹಾಳು ಹಂಪೆಯ ದೃಶ್ಯವನ್ನು ಕಂಡೊಡನೆ ಒಬ್ಬ ಪ್ರಜ್ಞಾವಂತನಲ್ಲಿ ಒಡಮೂಡುವ ಭಾವನೆಯನ್ನು ಕಂಡ ಪೂಜಾರಿ, ಭಕ್ತಜನ, ಋಷಿಗಳು ಇವನೊಬ್ಬ

ನಾಸ್ತಿಕನೆಂದು ಭಾವಿಸುತ್ತಾರೆ. ಹೀಗೆ ವಿಜಯನಗರದ ಕಾಲದ ಐತಿಹಾಸಿಕ ದೃಶ್ಯವನ್ನು ಲೇಖಕರು ನಾಟಕವಾಗಿಸಿದ್ದಾರೆ. 'ಕಂಠೀರವ ವಿಜಯ' ನಾಟಕವು ಮೈಸೂರು ಅರಸರ ಕಾಲದ ಆಳ್ವಿಕೆಯ ಚರಿತ್ರೆಯನ್ನು ಪ್ರತಿಬಿಂಬಿಸುತ್ತದೆ. ನಾಟಕಕಾರರು ಇತಿಹಾಸದ ವಿಷಯದಲ್ಲಿ ಬದಲಾವಣೆ ಮಾಡಿಕೊಂಡು ನಾಟಕವಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಧರ್ಮದುರಂತ'ವೂ ಸಹ ಐತಿಹಾಸಿಕ ನಾಟಕವಾದರೂ ಸಾಮಾನ್ಯ ವ್ಯಕ್ತಿಯ ಮತಾಂತರದ ವಿಷಯ ಇಲ್ಲಿ ಅಡಕವಾಗಿದೆ. ಇತಿಹಾಸ, ಧರ್ಮ ಮತ್ತು ಸಾಮಾಜಿಕ ಅಂಶಗಳು ಇಲ್ಲಿ ಸ್ಥಾನ ಪಡೆದಿವೆ. ಜಾತಿ ಬಿಟ್ಟ ಮೇಲೆ ಪುನಃ ಪೂರ್ವಾಶ್ರಮಕ್ಕೆ ಬರಲಾರದ ತೊಳಲಾಟವೇ ಈ ನಾಟಕದ ವಸ್ತು. ಈ ನಾಟಕದಲ್ಲಿ ಬರುವ ನಾಯಕ ಹುಟ್ಟಿನಿಂದ ಬ್ರಾಹ್ಮಣನಾದರೂ ಟಿಪ್ಪುಸುಲ್ತಾನನ ಪ್ರಭಾವದಿಂದ ಮುಸಲ್ಮಾನನಾಗಿ ಪರಿವರ್ತನೆಗೊಂಡು ಖಾನ್ ಜಹಾನ್ ಖಾನನಾಗುತ್ತಾನೆ. ಮೂಲದಲ್ಲಿ ಮದುವೆಯಾಗಿದ್ದ ಬ್ರಾಹ್ಮಣ ಪತ್ನಿ, ಮತಾಂತರಗೊಂಡ ಮೇಲೆ ವಿವಾಹವಾದ ಮುಸಲ್ಮಾನ ಹುಡುಗಿಯ ಬದುಕಿನೊಂದಿಗಿನ ಜಂಜಾಟವೆ ಇಲ್ಲಿ ಮಾರ್ಮಿಕವಾಗಿ ಚಿತ್ರಣಗೊಂಡಿದೆ.

ಇವರ ಪರಿಶ್ರಮ ಇಷ್ಟಕ್ಕೆ ನಿಲ್ಲದೆ ಆಯಸ್ಕಾಂತತೆ, ವಿದ್ಯುಚ್ಛಕ್ತಿ, ಉಪಾಧ್ಯಾಯರ ಆರೋಗ್ಯಶಾಸ್ತ್ರ, ಸ್ಕೌಟುಗಳ ಕನ್ನಡ ಕೈಪಿಡಿ, ಕರ್ನಾಟಕ ಸಾಹಿತ್ಯ ಚರಿತ್ರೆ ಮುಂತಾದ ಸಾಹಿತ್ಯ ಪ್ರಕಾರದಲ್ಲಿನ ಕೃತಿಗಳು ವಿವಿಧ ಕ್ಷೇತ್ರಗಳಲ್ಲಿ ಇವರಿಗಿದ್ದ ಪರಿಶ್ರಮಕ್ಕೆ ಸಾಕ್ಷಿಯಾಗಿವೆ. ಜೊತೆಗೆ ಸೊಲ್ಲಾಪುರದವರೆಗೆ ಹೋಗಿ ವಚನಗಳ ಮತ್ತು ವಚನಕಾರರ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ನಡೆಸಿ, ವಿಫುಲ ಸಾಮಗ್ರಿಯನ್ನು ಸಂಗ್ರಹಿಸಿದರು. ಕ್ಲಿಷ್ಟವಾದ ವಿಷಯಗಳನ್ನು ಸರಳವಾಗಿ ಆಕರ್ಷಕವಾಗಿ ಹೇಗೆ ಹೇಳಬಹುದೆಂಬುದಕ್ಕೆ ಅವರ ಗ್ರಂಥಗಳು ಉದಾಹರಣೆಯಾಗಿವೆ. ಜೊತೆಗೆ ಒಬ್ಬ ಶ್ರೇಷ್ಠ ವಿಮರ್ಶಕರೆಂಬುವುದನ್ನು ಅವರ ವಿದ್ವತ್ತಿನಲ್ಲಿ ಗುರುತಿಸಬಹುದು. "ಒಳ್ಳೆಯ ಕವಿಯಲ್ಲಿ ಕವಿತಾ ಲಕ್ಷಣಗಳು ಹೇಗೆ ಉತ್ತಮವಾಗಿರುವವೋ ಹಾಗೆಯೇ ವಿಮರ್ಶಾ ಗುಣಗಳೂ ಉತ್ತಮವಾಗಿರುತ್ತವೆ". ಎಂದು ವಿಮರ್ಶೆಯನ್ನು ಕುರಿತು ಹೇಳಿರುವ ಈ ಮಾತಿನಿಂದಲೇ ಅವರ ಬಹುಮುಖ ಪ್ರತಿಭೆಯನ್ನು ಗುರುತಿಸಬಹುದು.

ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತಿದ್ದ ಇವರು ಒಡಹುಟ್ಟಿದವರ ಹಾಗೂ ಕುಟುಂಬದ ಇತರ ಸದಸ್ಯರನ್ನೂ, ಸ್ನೇಹಿತರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ಕಷ್ಟ ನಷ್ಟಗಳಲ್ಲಿ ಹೆಗಲಿಗೆ ಹೆಗಲು ಕೊಡುತ್ತಿದ್ದರು. ನೆರೆಹೊರೆಯವರನ್ನು ಹೆಚ್ಚು ಪ್ರೀತಿಸುತ್ತಿದ್ದ ಶ್ರೀನಿವಾಸಮೂರ್ತಿಯವರು ಅವರಿಗೆ ತಮ್ಮ ಕೈಲಾದಷ್ಟು

ಸಹಾಯ ಮಾಡುತ್ತಿದ್ದರು. ತಂದೆ-ತಾಯಿ, ಹಿರಿಯರ ಸೇವೆ ಎಂದರೆ ಇವರಿಗೆ ಅಚ್ಚುಮೆಚ್ಚಿನ ಕೆಲಸವಾಗಿತ್ತು. ತಂದೆ ತೀರಿಕೊಂಡ ಮೇಲೆ ಅವಿಭಕ್ತ ಕುಟುಂಬದ ಸಂಪೂರ್ಣ ಜವಾಬ್ದಾರಿ ಇವರದಾಗುತ್ತದೆ. ಆಗ ಸ್ವಲ್ಪವೂ ಎದೆಗುಂದದೆ ಇವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆಗಳಿಗೆ ಸ್ಪಂದಿಸಿ ಕುಟುಂಬವನ್ನು ಮುನ್ನೆಡೆಸುತ್ತಾರೆ. ಎಂ.ಆರ್.ಶ್ರೀಯವರು ಹಿರಿಯ ವ್ಯಕ್ತಿಯಾಗಿ ತಮ್ಮ ಔದಾರ್ಯ ಗುಣದಿಂದಲೇ ಮನೆಯಲ್ಲಿನ ಕಿರಿಯರ ಗೌರವಕ್ಕೆ ಪಾತ್ರರಾಗಿದ್ದರು. ಜೊತೆಗೆ ಜಾತಿ, ಮತಬೇಧಗಳಿಲ್ಲದೆ, ಹಿರಿಕಿರಿಯರೊಂದಿಗೆ ಬೆರೆಯುವ ಗುಣವಿದ್ದುದ್ದರಿಂದಲೇ ಇವರು ಸಾರ್ವಜನಿಕವಾಗಿಯೂ ಅಚ್ಚುಮೆಚ್ಚಿನವರಾಗಿದ್ದರು. ಇಂತಹ ಔದಾರ್ಯ ನಿಧಿಗೆ ಬಾದಾಮಿಯ ಶಿವಯೋಗಿ ಮಠದಿಂದ ೧೯೪೦ರಲ್ಲಿ 'ವಾಙ್ಮಯ ವಿಶಾರದ' ಎಂಬ ಬಿರುದು ಸಂದಿದೆ.

ಪರಾಮರ್ಶನ ಗ್ರಂಥಗಳು

೧. ಪ್ರಸನ್ನ ವೆಂಕಟೇಶಮೂರ್ತಿ - ಎಂ.ಆರ್.ಶ್ರೀ ಜೀವನ ಮತ್ತು ಕಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಡಾ. ನಗುವನಹಳ್ಳಿ ಪಿ. ರತ್ನ - ಎಂ.ಆರ್.ಶ್ರೀ ಒಂದು ಅಧ್ಯಯನ, ಪ್ರಶಾಂತಿ ಪ್ರಕಾಶನ, ೧೫, ಶಿವಾನಂದ ನಿಲಯ, ಯಾದವಗಿರಿ, ಮೈಸೂರು-೨೦.

❑❑❑

೪. ಯಾದವಾಭ್ಯುದಯ ಕಾವ್ಯ

– ಬಿ.ಕೆ. ಗಾಯತ್ರೀ

ಶ್ರವ್ಯ ಕಾವ್ಯಗಳಲ್ಲಿ ಭಕ್ತಿಪ್ರದವಾದ ಕಾವ್ಯಗಳೂ ಅನೇಕ ವಿಧವಾಗಿವೆ. ಸ್ವಾಮಿ ದೇಶಿಕರು 'ಕವಿತಾರ್ಕಿಕ ಸಿಂಹ' ಎಂಬ ಬಿರುದು ಪಡೆದವರು. ಅನೇಕ ಕಾವ್ಯಗಳನ್ನು ಬರೆದು ಕಾಳಿದಾಸನಂತೆಯೇ ಕವಿಶ್ರೇಷ್ಠರೆನಿಸಿಕೊಂಡಿದ್ದಾರೆ. ಆರ್ಯಕವಿಸ್ತೋಮದ ಅಗ್ರಭಾಗದಲ್ಲಿ ಶ್ರೀವೇದಾಂತಾಚಾರ್ಯರನ್ನು ಸಂಕೀರ್ತನೀಯರನ್ನಾಗಿ ಮಾಡಿರುವ ಗ್ರಂಥಗಳಲ್ಲಿ ಯಾದವಾಭ್ಯುದಯವು ಪ್ರಮುಖವಾದದ್ದು. ಆಚಾರ್ಯರ ಅದ್ವಿತೀಯವಾದ ಕವಿತಾಶಕ್ತಿ, ಅವರಿಗಿದ್ದ ಸರ್ವತೋಮುಖವಾದ ವಿಷಯಜ್ಞಾನ ಇವುಗಳನ್ನು ಪ್ರತಿಪಾದಿಸುವ ಈ ಮಹಾಕಾವ್ಯವು ಸುಲಭವಾದ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಅವರೇ ಹೇಳಿಕೊಂಡಿರುವಂತೆ "ತರ್ಕೇಷು ಕರ್ಕಶಧಿಯೋ ವಯಮೇವ ನಾನ್ಯಃ, ಕಾವ್ಯೇ ಕೋಮಲಧಿಯೋ ವಯಮೇವ ನಾನ್ಯಃ" ಎಂಬಂತೆ ಕೋಮಲವಾದ ಕಾವ್ಯಗಳನ್ನು ಲೀಲಾಜಾಲವಾಗಿ ರಚಿಸಿದ್ದಾರೆ. ಅವರ ಮಹಾಕಾವ್ಯಗಳಲ್ಲಿ ಯಾದವಾಭ್ಯುದಯವೂ ಒಂದು. 'ಅಭಿನವ ಭಾಗವತ' ಎಂದು ಕರೆಯಲ್ಪಡುವ ಈ ಕಾವ್ಯವನ್ನು ಅದರ ಹೆಸರೇ ಸೂಚಿಸುವಂತೆ ಶ್ರೀಕೃಷ್ಣಾವತಾರದ ಮೇಲೆ ಬರೆದಿದ್ದಾರೆ. ಶ್ರೀಕೃಷ್ಣನ ದಿವ್ಯ ಚರಿತಾಮೃತವನ್ನು ಎಲ್ಲರೂ ಪಾನಮಾಡಲೆಂದು ಸುಲಭವಾದ ಶೈಲಿಯಲ್ಲಿ ಈ ಮಹಾಕಾವ್ಯವನ್ನು ರಚಿಸಿದ್ದಾರೆ. ಕಾಳಿದಾಸನ ರಘುವಂಶ, ಕುಮಾರಸಂಭವಗಳ ಧಾಟಿಯಲ್ಲಿದೆ. ಇದಕ್ಕೆ 'ಯದುವಂಶ' ಅಥವಾ 'ಕೃಷ್ಣಾಭ್ಯುದಯ' ಎಂಬ ಹೆಸರೂ ಇವೆ. ಈ ಗ್ರಂಥ ರಚನೆಯು ಪರಂಪರಾನುಗತವಾಗಿ ಬಂದಿರುವ ಕಥಾ ಸಂದರ್ಭ ಬಹಳ ಆಕರ್ಷಣೀಯವಾಗಿದೆ. ವಿಜಯನಗರ ಸಾಮ್ರಾಜ್ಯದ ಆಸ್ಥಾನ ಕವಿ ಡಿಂಡಿಮನು ವೇದಾಂತದೇಶಿಕರ ಬಳಿ ಬಂದು ಸಾಹಿತ್ಯ ಶಾಸ್ತ್ರವಾದಕ್ಕೆ ಕರೆದನೆಂದು ಈ ಕೆಳಗಿನ ಶ್ಲೋಕದಿಂದ ವ್ಯಕ್ತಪಡುವುದು.

ಪ್ರಾಜ್ಞಾನಾಮೇವ ರಾಜ್ಞಾಂ ಸದಸಿ ನ ಸಹತೇ ಜಲ್ಪಮಲ್ಪೇತರೇಷಾ??।
ಕ್ಷುದ್ರೇಷ್ವಾಕ್ಷೇಪಮುದ್ರಾಂ ನ ಖಲು ಗಣಯತೇ ಡಿಂಡಿಮಃ ಸಾರ್ವಭೌಮಃ ॥

ಪಂಡಿತ ಸಾರ್ವಭೌಮನಾದ ಡಿಂಡಿಮನು ರಾಜಸಭೆಯಲ್ಲಿ ಪ್ರಾಜ್ಞರೂ, ಗೌರವಾರ್ಹರೂ ಆಗಿರುವ ಪಂಡಿತರ ವಾದ ಸರಣಿಯನ್ನು ಸಹಿಸುವುದಿಲ್ಲ. ಹೀಗಿರುವಾಗ ಸಾಮಾನ್ಯವಾದ ಕ್ಷುದ್ರ ಪಂಡಿತರ ಆಕ್ಷೇಪ ರೀತಿಯನ್ನು ಹೇಗೆ ತಾನೆ ಲೆಕ್ಕಿಸಿಯಾನು?

ಡಿಂಡಿಮ ಕವಿಯ ವಾದವನ್ನು ಕೇಳಿ ವೇದಾಂತದೇಶಿಕರು ಅವನನ್ನು ತಕ್ಷಣ ಈ ಕೆಳಗಿನ ಶ್ಲೋಕದಿಂದ ಪ್ರತಿಭಟಿಸಿದರು.

ಬಾಹ್ಯೈರ್ವರ್ಣಾಡಂಬರೈರ್ಮಾಭ್ರಮಸ್ತು ಭಿತ್ವಾ ಗರ್ಭಾಭ್ಯಂತರಂಶೋಧಯಂತು ।
ನಿರ್ಣೇತಾರೋ ನೀರಸತ್ವೇನ ಕೋವಾ ಡಿಂಡಿರಾಣಾಂ ಡಿಂಡಿಮಾನಾಂ ಚ ಭೇದಃ ॥

ಹೊರಗೆ ತೋರುವ ವರ್ಣಾಡಂಬರದಿಂದಲೇ ಭ್ರಮಿಸಬಾರದು. ಒಡೆದು ಒಳಗಿರುವ ಸತ್ವವನ್ನು ಪರೀಕ್ಷಕರು ಶೋಧಿಸಿ ತಿಳಿಯಬೇಕು. ಒಳಗೆ ನೀರಸವಾಗಿರುವ ವಿಚಾರದಲ್ಲಿ ಡಿಂಡಿಮಕ್ಕೂ (ಭೇರಿ) ಡಿಂಡಿರಕ್ಕೂ (ನೀರಿನ ಗುಳ್ಳೆ) ಭೇದವೆನಿಸದೇ ನಿಸ್ಸರತಾ ವಿಷಯದಲ್ಲಿ ಎರಡು ಒಂದೇ ಆಗಿದೆ.

ಆಚಾರ್ಯರ ಕವಿತಾ ಸಾಮರ್ಥ್ಯದ ಹಿರಿಮೆಯನ್ನು ಕಂಡು ಡಿಂಡಿಮ ಕವಿಯು ಅಪ್ರತಿಭನಾಗಿ ಸೋಲನ್ನೊಪ್ಪಿಕೊಂಡುದಾಗಿ ನಿರೂಪಿತವಾಗಿದೆ. ಅನಂತರ ತಾನು ರಚಿಸಿದ 'ರಾಘವಾಭ್ಯುದಯ' ಕಾವ್ಯವನ್ನು ಆಚಾರ್ಯರಿಗೆ ತೋರಿಸಿದಾಗ ಅವರು ಸಂತೋಷಪಟ್ಟು ತಕ್ಷಣ ಯಾದವಾಭ್ಯುದಯವೆಂಬ ಕಾವ್ಯವನ್ನು ರಚಿಸಿ ಅವನಿಗೆ ಕೊಟ್ಟುದಾಗಿ ತಿಳಿಸಲಾಗಿದೆ. ಅದನ್ನು ನೋಡಿ ಡಿಂಡಿಮ ಕವಿಯು ತನ್ನ ಸಂಪೂರ್ಣ ಮೆಚ್ಚಿಕೆಯನ್ನೂ, ಪ್ರಶಂಸೆಯನ್ನೂ ಆಚಾರ್ಯರಿಗೆ ಸಲ್ಲಿಸಿದನೆಂದು ವರದಿಯಾಗಿದೆ.

ಆಚಾರ್ಯರ ಅದ್ವಿತೀಯವಾದ ಕವಿತಾಶಕ್ತಿ ಅವರಿಗಿದ್ದ ಸರ್ವತೋಮುಖವಾದ ವಿಷಯಜ್ಞಾನವನ್ನು ಈ ಕಾವ್ಯವು ಪ್ರತಿಬಿಂಬಿಸುತ್ತದೆ. ಕಾವ್ಯವು ಬಹಳ ಸರಳ ಶೈಲಿಯಲ್ಲಿ ಬರೆಯಲಾಗಿದ್ದು ಸಾಮಾನ್ಯ ಸಂಸ್ಕೃತ ಜ್ಞಾನವುಳ್ಳವರೂ ಸಹ ಸುಲಭವಾಗಿ ಓದಿ ಅರ್ಥಮಾಡಿಕೊಂಡು ಆನಂದ ಪಡೆಯಬಹುದಾಗಿದೆ. ತಮ್ಮ ವಿರೋಧಿಗಳಿಗೆ ತಮ್ಮ ಕವಿತಾ ಸಾಮರ್ಥ್ಯವನ್ನು ತೋರಿಸುವುದಕ್ಕಲ್ಲದೇ ಬೇರಾವ ಉದ್ದೇಶವೂ ಇಲ್ಲ. ಇದರ ಶ್ಲೋಕಗಳಲ್ಲಿ ಶ್ರಮಲೇಶವೂ ಇಲ್ಲದೆ ಶ್ರೀಸರಸ್ವತೀ ದೇವಿಯ ಕರಕಮಲದಿಂದ ಹೊರಡುವ ವೀಣಾಸ್ವರಗಳಂತೆ ಆಚಾರ್ಯರ ವರಾನನದಿಂದ ಅಮೃತಧಾರೆಯೋಪಾದಿಯಲ್ಲಿ ಹೊರಸೂಸಿವೆ.

ಕಾವ್ಯದಲ್ಲಿ ಒಟ್ಟು ೨೪ ಸರ್ಗಗಳಿದ್ದು ೨೬೪೫ ಶ್ಲೋಕಗಳನ್ನು ರಚಿಸಲಾಗಿದೆ. ಅದ್ವೈತ ಆಚಾರ್ಯರುಗಳಲ್ಲಿ ಪ್ರಸಿದ್ಧರಾದ ಅಪ್ಪಯ್ಯ ದೀಕ್ಷಿತರು ಈ ಕಾವ್ಯಕ್ಕೆ ವ್ಯಾಖ್ಯಾನ

ಬರೆದು ಶ್ರೀವೇದಾಂತ ದೇಶಿಕರ ಕಾವ್ಯಸಂಪತ್ತನ್ನು ಕೊಂಡಾಡುವುದರ ಮೂಲಕ ವಿದ್ವತ್ತಿಗೆ ತಮ್ಮ ನಿಷ್ಪಕ್ಷಪಾತ ಗೌರವವನ್ನು ಸಲ್ಲಿಸಿ ಸರ್ವರಿಂದಲೂ ಮಾನ್ಯರಾಗಿದ್ದಾರೆ.

ಇತ್ಥಂ ವಿಚಿತ್ರಾಃ ಸರ್ವತ್ರ ಭಾವಾಃ ಸಂತಿ ಪದೇ ಪದೇ ।
ಕವಿತಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ ॥

ಎಂಬುದು ಅವರ ಉದ್ಗಾರ. ಕಾವ್ಯವನ್ನು

ವಂದೇ ವೃಂದಾವನ ಚರಂ ವಲ್ಲವೀ ಜನವಲ್ಲಭ ।
ಜಯಂತೀ ಸಂಭವಂ ಧಾಮ ವೈಜಯಂತೀ ವಿಭೂಷಣ ॥

ಎಂಬ ಶ್ಲೋಕದಿಂದ ಪ್ರಾರಂಭಿಸಿದ್ದಾರೆ.

ಆಚಾರ್ಯರ ಪ್ರಸಿದ್ಧ ಸ್ತೋತ್ರಗಳಲ್ಲಿ ಒಂದಾದ ಅವರ ಕವಿತಾ ಸಾಮರ್ಥ್ಯಕ್ಕೆ ಹೆಸರಾದ ಗೋಪಾಲವಿಂಶತಿ ಸ್ತೋತ್ರವನ್ನೂ ಸಹ ಇದೇ ಶ್ಲೋಕದಿಂದ ಆರಂಭಿಸಿದ್ದಾರೆ. ಕಾವ್ಯದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ಮುಖ್ಯ ತತ್ತ್ವಗಳಾದ ತತ್ತ್ವತ್ರಯ, ಭಕ್ತಿ, ಶರಣಾಗತಿ, ಭಾಗವತ ಪಾರತಂತ್ರ್ಯ ಇವುಗಳ ಬಗ್ಗೆಯೂ ಸಹ ಒಳ್ಳೆಯ ವಿವರಣೆ ಇದೆ. ಸ್ವಾಮಿ ದೇಶಿಕರ ಕೆಲವು ಕಲ್ಪನೆಗಳಂತೂ ಅತ್ಯಂತ ಸುಂದರ ಹಾಗೂ ಅದ್ಭುತ. ಕಾವ್ಯವನ್ನು ಓದಿದರೆ ಮಾತ್ರ ಅವುಗಳನ್ನು ಅನುಭವಿಸಬಹುದು.

ಕೆಲವು ಶ್ಲೋಕಗಳು ಹೀಗಿವೆ –

ಶಕ್ತ್ಯಾ ಶೌರಿ ಕಥಾಸ್ವಾದಃ ಸ್ಥಾನೇ ಮಂದಧಿಯಾಮಪಿ ।
ಅಮೃತಂ ಯದಿ ಲಭ್ಯೇತ ಕಿಂ ನ ಗೃಹ್ಯೇತ ಮಾನವೈಃ ॥

(ಮೊದಲನೆಯ ಸರ್ಗದ ಮೂರನೆಯ ಶ್ಲೋಕ)

ಕಡಿಮೆ ತಿಳುವಳಿಕೆಯುಳ್ಳವರೂ ಸಹ ಶ್ರೀಕೃಷ್ಣನ ಚರಿತ್ರೆಯನ್ನು ಓದಬಯಸುತ್ತಾರೆ. ಅಮೃತವನ್ನು ಯಾರು ತಾನೇ ಬಿಡುತ್ತಾರೆ? ಇಲ್ಲಿ ದೃಷ್ಟಾಂತ ಅಲಂಕಾರವೂ ಇದೆ.

ಸವಿಷ್ಣುರಿವ ಲೋಕಾನಾಂ ತಪನಸ್ತೇಜಸಾಮಿವ ।
ಸಮುದ್ರ ಇವ ರತ್ನಾನಾಂ ಸತಾಮೇಕಾಶ್ರಯೋ ಭವತ್ ॥

(ಸರ್ಗ ೧–೩೦)

ಶ್ರೀಕೃಷ್ಣನ ತಂದೆಯಾದ ವಸುದೇವನು ಸಕಲ ಲೋಕಗಳಿಗೂ ರಕ್ಷಕನಾದ ಮಹಾವಿಷ್ಣುವಿನಂತೆ, ತೇಜಸ್ಸಿನ ನಿಧಿಯಾದ ಸೂರ್ಯನಂತೆ ರತ್ನಗಳಿಗೆಲ್ಲ ತವರುಮನೆಯಾದ ಸಮುದ್ರರಾಜನಂತೆ ಸಜ್ಜನರಿಗೆ ಆಶ್ರಯದಾತನಾಗಿದ್ದನು.

ನಾಲ್ಕನೆಯ ಸರ್ಗದಲ್ಲಿ ಕಾಳಿಯ ಸರ್ಪದ ಮೇಲೆ ಶ್ರೀಕೃಷ್ಣನು ನಡೆಸಿದ ನೃತ್ಯವನ್ನು ಅತ್ಯಂತ ಹೃದಯಂಗಮವಾಗಿ ಕಾವ್ಯ ರಚಿಕತೆಯಿಂದ ವರ್ಣಿಸಿದ್ದಾರೆ –

ಲೋಲಾಪತಚ್ಚರಣ ಲೀಲಾಹತಿಕ್ಷರಿತ ಹಾಲಾಹಲೇ ನಿಜಫಣೇ
ನೃತ್ಯಂತಮಪ್ರತಿಘ ಕೃತ್ಯಂತಮಪ್ರತಿಮಮತ್ಯಂತ ಚಾರು ವಪುಷಂ ।
ದೇವಾದಿಭಿಃ ಸಮಯ ಸೇವಾದರ ತ್ವರಿತ ಹೇವಾಕ ಘೋಷಮುಖರೈ
ದೃಷ್ಟಾವದಾನಮಥ ತುಷ್ಟಾವ ಶೌರಿಮಹಿರಿಷ್ಟಾವರೋಧ ಸಹಿತಃ ॥ (೪ –೧೨೪)

ಆಟವಾಡುವ ಹಾಗೆ ಕಾಳಿಯ ಫಣಿಯ ಮೇಲೆ ಯಾವ ನೃತ್ಯಪಟುವಿಗೂ ಕಡಿಮೆ ಇಲ್ಲದವನಂತೆ ನೃತ್ಯದ ಎಲ್ಲಾ ಪ್ರಕಾರಗಳನ್ನು ಪ್ರದರ್ಶಿಸಿ ಅವನಲ್ಲಿದ್ದ ವಿಷಯವೆಲ್ಲವೂ ಹೊರಗೆ ಬರುವ ಹಾಗೆ ನಟನ ಮಾಡಿದ ಶ್ರೀಕೃಷ್ಣನ ನೃತ್ಯವನ್ನು ನೋಡಿ ದೇವಾದಿಗಳೆಲ್ಲರೂ ಆಶ್ಚರ್ಯ ಚಕಿತರಾದರು.

ಗೋಪಿಕಾವಸ್ತ್ರಾಪಹರಣ ಸಂದರ್ಭದಲ್ಲಿ ಶ್ರೀಕೃಷ್ಣನು ನದಿಯಲ್ಲಿದ್ದ ಗೋಪಸ್ತ್ರೀಯರಿಂದ ಕೇವಲ ಅಂಜಲಿಯನ್ನು ಮಾತ್ರ ಯಾಚಿಸಿದನು ಎಂಬುದಾಗಿ ಭಾಗವತದಲ್ಲಿ ಹೇಳಿದೆ. ಅದೇ ಪ್ರಸಂಗವನ್ನು ಸ್ವಾಮಿದೇಶಿಕರು ತಮ್ಮ ಕಾವ್ಯದಲ್ಲಿ ಹೀಗೆ ವರ್ಣಿಸಿದ್ದಾರೆ –

ನ ಚೈಕ ಹಸ್ತಪ್ರಣತಿಂ ವಿಧುನ್ವನ್ ಕೌಮಾರ್ಥಿನೀನಾಂ ಹರಿರಂಗನಾನಾ ।
ಅನ್ಯೋನ್ಯ ಹಸ್ತಾರ್ಪಣ ಸಂಪ್ರವೃತ್ತಂ ಆಸಾಂ ಜಹಾಸಾಂಜಲೀಂಪ್ಯಪೂರ್ವ ॥

ಗೋಪಸ್ತ್ರೀಯರು ಒಂದು ಕೈಯಲ್ಲಿ ತಮ್ಮ ಮಾನವನ್ನು ಕಾಪಾಡಿಕೊಂಡು ಮತ್ತೊಂದು ಹಸ್ತವನ್ನು ಇನ್ನೊಬ್ಬರ ಹಸ್ತದೊಂದಿಗೆ ಜೋಡಿಸುವುದರ ಮೂಲಕ ಅಪೂರ್ವವಾದ ಅಂಜಲಿಯನ್ನು ನೀಡಿ ಶ್ರೀಕೃಷ್ಣನ ಕೋರಿಕೆಯನ್ನು ಈಡೇರಿಸಿದರು. ಇದೊಂದು ಉತ್ತಮ ವಿವರಣೆ.

ಪುರಃ ಸ್ಥಿತೇ ಗೋಪ್ತಂ ವಿಶ್ವಹೇತೇ ಪಶ್ಚಾವದಸ್ಥಾಯಿನಿ ತತ್ಪ್ರವರ್ತ್ಯೇ ।
ಅನನ್ಯಯೋಗಾತ್ ಸರಥೋ ಬಭಾರ ಪ್ರಾಥೀತವೇದ್ಯಾಂ ಪ್ರಣವಪ್ರವೃತ್ತಿ ॥
(೨೩ನೇ ಸರ್ಗ –೨೩)

ಮುಂಭಾಗದಲ್ಲಿ ಶ್ರೀಕೃಷ್ಣನೂ ತದನಂತರ ಅರ್ಜುನನೂ ಕುಳಿತಿದ್ದ ಪಾಂಡವರು ಕುರುಕ್ಷೇತ್ರ ಮಹಾಯುದ್ಧದಲ್ಲಿ ಅದ್ಭುತವಾದ ಜಯವನ್ನು ಗಳಿಸಲು ಸಾಧಕವಾದ ಆ ರಥವು ಜೀವಾತ್ಮನು ಪರಮಾತ್ಮನಿಗೆ ನಿತ್ಯಕಿಂಕರನೆಂಬ ಉದಾತ್ತವಾದ ವೇದಾಂತ ತತ್ತ್ವವನ್ನು ಬೋಧಿಸುತ್ತಿದ್ದಿತು.

ಕೃಷೀವಲಃ ಸ್ಥಾವರಜಂಗಮಾನಾಂ ಕ್ಷೇತ್ರೇ ಕುರೂಣಾಂ ಸಮಕಾಲವಾತಾನ್ ।
ಅನೀಕಶಾಲೀನ್ ಭುಜಶಾಲಿವರ್ಗೈಃ ಫಲೋಪಪನ್ನಾನ್ ಪ್ರಭುರಿತ್ಯಲಾವೀತ್ ॥
(ಸರ್ಗ –೨೩–೪೮)

ರೈತನು ಪೈರುಗಳೆಲ್ಲಾ ಪರಿಪಕ್ವವಾದ ಮೇಲೆ ರೇಖೆ ಮಾಡಿ ಜನಗಳಿಗೆ ಆಹಾರವನ್ನೊದಗಿಸಿ ಲೋಕೋಪಕಾರ ಮಾಡುವಂತೆ ದುಷ್ಟನಿಗ್ರಹ ಶಿಷ್ಟಪರಿಪಾಲನ ವ್ರತನಾದ ಪರಮಾತ್ಮನು ಅನೇಕ ದುಷ್ಕೃತ್ಯಗಳನ್ನು ಮಾಡಿ ಪಾಂಡವರನ್ನು ಹಾಳು ಮಾಡಲೆತ್ನಿಸಿ ತನ್ಮೂಲಕ ಪಾಪದ ಪರಿಮಿತಿಯನ್ನು ಸೇರಿದ ದುಷ್ಟ ಕೌರವರನ್ನು ಪಾಂಡವರ ಮೂಲಕ ಸಂಹಾರ ಮಾಡಿಸಿ ತನ್ಮೂಲಕ ಲೋಕೋಪಕಾರವನ್ನು ಮಾಡಿದನು.

ರುಕ್ಮಿಣೀ ದೇವಿಯ ಮಹಿಮೆಯನ್ನು ೧೩ನೇ ಸರ್ಗದಲ್ಲಿ ವರ್ಣಿಸುತ್ತಾ ಹೀಗೆ ಹಾಕಿದ್ದಾರೆ. –

ಮಲ್ಲೀವಿರಾಜೋಜ್ವಲಮಂದಹಾಸಾ ರೋಮೋದ್ಗಮೈರಹಿತ ಕೋರಕಶ್ರೀಃ ।
ಸಮೇಯುಷೀ ಸಂದದೃಶೇ ತದಾಸಾ ವಸಂತಲಕ್ಷ್ಮೀರಿವ ಮಾಧವೇನ ॥

(ಸರ್ಗ – ೧೩ –೨೩)

ಅವಳ ಮುಗುಳ್ನಗೆಯು ಮಲ್ಲಿಗೆ ಹೂವಿನ ಅರಳುವಿಕೆಯಂತೆ ಇತ್ತು. ದೇಹದಲ್ಲಿ ಕೂದಲಿನ ಕುಚ್ಚುಗಳು ಚಿಕ್ಕ ಚಿಕ್ಕದಾಗಿ ಸುಂದರವಾಗಿದ್ದವು. ವೈಶಾಖ ಮಾಸದಲ್ಲಿ ಯಾವರೀತಿ ವಸಂತ ಋತು ಸೇರಿದರೆ ಆಹ್ಲಾದಕರವಾಗಿರುತ್ತದೆಯೋ ಅದರಂತೆ ಅವರಿಬ್ಬರ ಜೋಡಿ ಇತ್ತು.

ಸುಭಗಮುಫಲ ಬಿಂಬೇ ಶಾಂತ ಕುಂಭೇ ಪಿ ರತ್ನಂ ಕನತಿ ವಿಪಿನಭಾಗೇ
ಕಾಲಕಂಠೇಽಪಿ ಗಂಗಾ ।
ವಶಿಕನೃಪಗೃಹೇ ಸಾ ವಾಸುದೇವೇಽಪ್ಯದೀವ್ಯತ್ ನ ಹಿ ಭವತಿ
ವಿಶೇಷಃ ಕ್ವಾಪಿ ನಿತ್ಯೋನ್ನತಾನಾಂ ॥

(೧೩–೧೦೯)

ರತ್ನವನ್ನು ಕಲ್ಲಿನಲ್ಲಿಡಲಿ ಅಥವಾ ಚಿನ್ನದಲ್ಲಿ ಕೆತ್ತಲಿ ಪ್ರಕಾಶಮಾನವಾಗುತ್ತದೆ. ಗಂಗಾ ನದಿಯು ಕಾಡಿನಲ್ಲೂ ತೇಜಸ್ವಿಯಾಗಿ ಹರಿಯುತ್ತದೆ. ಹಾಗೆ ಪರಮೇಶ್ವರನ ತಲೆಯಲ್ಲಿಯೂ ಸಹ. ರುಕ್ಮಿಣೀದೇವಿಯು ತನ್ನ ತಂದೆಯ ಮನೆಯಲ್ಲಿಯೂ ಮಹಿಮಾನ್ವಿತಳಾಗಿದ್ದಳು. ಪರಮಾತ್ಮನಾದ ವಾಸುದೇವನ ಕೈ ಹಿಡಿದ ನಂತರವೂ ಸಹ ಇನ್ನೂ ಹೆಚ್ಚು ಮಹಿಮಾನ್ವಿತಳಾದಳು. ಆದ್ದರಿಂದ ದೊಡ್ಡವರು ಎಲ್ಲಿಯೇ ಇರಲಿ ಅವರ ಸ್ವಭಾವ ನಡತೆಗಳಲ್ಲಿ ಯಾವ ವ್ಯತ್ಯಾಸವೂ ಕಂಡು ಬರುವುದಿಲ್ಲ.

ಶಿಶುಪಾಲವಧ ಸರ್ಗವಾದ ೧೫ನೇ ಸರ್ಗದಲ್ಲಿ ಗೋಪಾಲವಿಂಶತಿಯ ಪ್ರಸಿದ್ಧ ಶ್ಲೋಕವನ್ನೇ ಮತ್ತೊಮ್ಮೆ ಉಚ್ಚರಿಸಿದ್ದಾರೆ. ಶಿಶುಪಾಲನಿಗೆ ಅವನ ಅಂತಿಮ ಕಾಲದಲ್ಲಿ ಶ್ರೀಕೃಷ್ಣನ ದರ್ಶನವಾಯಿತು. ಅದೇ ರೀತಿ ನಮಗೂ ಆಗಬೇಕು.

ಅಧರಾಯಿತ ಚಾರುವಂಶ ನಾಳಾಃ ಮುಕುಟಾಲಂಭಿಮಯೂರಪಿಂಛಮಾಲಾಃ ।
ಹರಿನೀಲಶಿಲಾವಿಭಂಗನೀಲಾಃ ಪ್ರತಿಭಾಸ್ಸಂತು ಮಮಾಂತಿಮಪ್ರಯಾಣೇ ॥

(೧೫-೯೦)

ನನ್ನ ಅಂತಿಮ ಕಾಲದಲ್ಲಿ ತನ್ನ ಅಧರಗಳಲ್ಲಿ ಸುಂದರವಾದ ವೇಣುವನ್ನು ಇಟ್ಟುಕೊಂಡು ಇರುವ ಕಿರೀಟ ಕುಂಡಲಗಳಿಂದ ಶೋಭಿತನಾದ ಇಂದ್ರನೀಲ ಮಣಿಗಳಿಂದ ಅಲಂಕೃತನಾದ ಶ್ರೀಕೃಷ್ಣನ ದಿವ್ಯಮಂಗಳ ವಿಗ್ರಹವು ನನ್ನ ಮುಂದೆ ಬಂದು ನಿಲ್ಲಲಿ ಎಂಬ ಪ್ರಾರ್ಥನೆ.

೧೦ನೇ ಸರ್ಗದಲ್ಲಿ ಶ್ರೀಕೃಷ್ಣ ಬಲರಾಮರ ಮಲ್ಲಯುದ್ಧ ವರ್ಣನೆ. ಎಂಥ ಮಲ್ಲಯುದ್ಧ ವಿಶಾರದರನ್ನೂ ಚಕಿತಗೊಳಿಸುತ್ತದೆ. ವಿಧ ವಿಧ ಹೆಸರುವಾಸಿಯಾದ ಪಟ್ಟುಗಳನ್ನು ಪ್ರಯೋಗಿಸಿ ಶ್ರೀಕೃಷ್ಣನು ಚಾಣೂರ ಮುಷ್ಟಿಕರನ್ನು ಸೋಲಿಸುತ್ತಾನೆ. ಆಚಾರ್ಯರೇ ಶಾಸ್ತ್ರೀಯವಾಗಿ ಮಲ್ಲಯುದ್ಧ ಅಭ್ಯಸಿಸಿದ್ದರೇನೋ ಎಂಬ ಸಂದೇಹ ಬರುತ್ತದೆ.

ಜನವಾದ ವಿಮಶ್ರೃಣ್ವನ್ ಜಾತಹಾಸೋ ಜನಾರ್ದನ ।
ಭುಜಂ ಆಸ್ಫೋಟಯಾಮಾಸ ಭೂಭಾರಹರಣೇ ಕ್ಷಮಂ ॥ (೧೦-೪೨)

ಭಗವಂತನು (ಶ್ರೀಕೃಷ್ಣನು) ಪ್ರಜೆಗಳ ಈ ಮಾತುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಾ ನಗುತ್ತಾ ಭೂಮಿಯ ಭಾರವನ್ನೆಲ್ಲಾ ಹೋಗಿಸಬಲ್ಲ ತನ್ನ ಭುಜವನ್ನು ತಟ್ಟಿದನು. ತೋಳನ್ನು ತಟ್ಟಿ ಯುದ್ಧಕ್ಕೆ ಸಿದ್ಧನಾದನು. ತಾನು ಭೂಭಾರ ಹರಣಾರ್ಥವಾಗಿಯೇ ಅವತಾರವೆತ್ತಿದವನೆಂದು ತಿಳಿಯಪಡಿಸುವುದಕ್ಕಾಗಿ ತನ್ನ ತೋಳನ್ನು ತಟ್ಟಿ ಮಲ್ಲಯುದ್ಧಕ್ಕೆ ಸಿದ್ಧನಾದನು.

೨೦ನೇ ಸರ್ಗದಲ್ಲಿ ಶ್ರೀಕೃಷ್ಣ ಬಾಣಾಸುರರ ಯುದ್ಧದ ವರ್ಣನೆ ಇದ್ದು ಶಸ್ತ್ರವಿದ್ಯೆಯ ಧನುರ್ವಿದ್ಯೆಯ ಮರ್ಮಗಳನ್ನೆಲ್ಲಾ ಹೊರಗೆಡಹಿದ್ದಾರೆ.

೨೨ನೇ ಸರ್ಗದಲ್ಲಿ ಜೈತ್ರಾಯಾತ್ರಾ ವಿವರಣೆಯ ಸರ್ಗದಲ್ಲಿ ನಾನಾ ದೇಶಗಳ ಭೂಗುಣ, ವಾಯುಗುಣ, ಜನಗಳ ಸ್ವಭಾವ, ಅವರ ಪದ್ಧತಿಗಳು ಇವೆಲ್ಲವನ್ನೂ ವರ್ಣಿಸಿರುವುದರಿಂದ ಶ್ರೀದೇಶಿಕರು ಎಲ್ಲಾ ದೇಶಗಳನ್ನು ಸಂದರ್ಶಿಸಿದ್ದರು ಎಂಬುದು ವೇದ್ಯವಾಗುತ್ತದೆ.

ಘೂರ್ಜರಾನ್ ಪಾರಶೀಕಾಂಶ್ಚ ಪ್ರಾಗೇವ ಭೂತಕೀಕೃತಾನ್ ।
ಅಪಶ್ಚಾತ್ ಪದವೀ ನ್ಯಾಸಾತ್ ಅಕರೋದಗ್ರಯಾಯಿನಃ ॥ (೨೨-೮೯)

ಉತ್ತರ ಘೂರ್ಜರ, ಪಾರಶೀ (ಪರ್ಶಿಯಾ) ಮುಂತಾದ ದೇಶಗಳ ಚಿತ್ರಣವಿದೆ.

ದಕ್ಷಿಣದ ಚೋಳದೇಶ, ಪಾಂಡ್ಯದೇಶ, ಕಾವೇರಿ ನದಿ, ಸಹ್ಯಾದ್ರಿ, ಆಂಧ್ರ, ಕರ್ನಾಟಕ ಮುಂತಾದ ಅನೇಕ ದೇಶಗಳ ವಿಚಾರಗಳನ್ನು ಈ ಸರ್ಗದಲ್ಲಿ ತಿಳಿಸಿದ್ದಾರೆ. ಅತ್ಯಂತ ದಕಿಣ್ಣದಲ್ಲಿರುವ ಲಂಕೆಯ ಬಗ್ಗೆಯೂ ಸಹ ಉಲ್ಲೇಖವಿದೆ.

ಪರಿಖಾಂ ಪ್ರೇಕ್ಷ್ಯಲಂಕಾಯಾಃ ಪಯೋಧಿಂ ಪ್ರಜಹರ್ಷ ಸಃ ।
ತಾರಾಭೂಷಿತದೇಹಸ್ಯ ತ್ರಿದಿವಸ್ಯೈವ ದರ್ಪಣಂ ॥ (೨೨-೧೭೮)

ಶ್ರೀಲಂಕೆಗೆ ಸೇತುವೆಯಂತಿರುವ ಸಮುದ್ರವನ್ನು ನಕ್ಷತ್ರಗಳಿಂದ ಅಲಂಕರಿಸಲ್ಪಟ್ಟ ದೇಹವುಳ್ಳ ಆಕಾಶವು ಅದರಲ್ಲಿ ತೋರುವ ಕನ್ನಡಿಯಂತೆ ಇದೆ.

ಕೊನೆಯದಾದ ೨೪ನೇ ಸರ್ಗದಲ್ಲಿ ಸ್ವಾಮಿಯ ಶೃಂಗಾರವನ್ನು ದೀರ್ಘವಾಗಿ ವಿವರಿಸಿ ಅಮರವಾದ ೧೨ ಶ್ಲೋಕಗಳನ್ನು ರಚಿಸಿದ್ದಾರೆ.

ಅನಿತರ ಜನಲಭ್ಯಾಂ ಪ್ರೀತಿಮಾಸೇದುಷೀಭಿಃ ಸುಚಿರಮನುಬಭೂವೇ
ಸ್ವರ್ಗಮೋಕ್ಷಾತಿಶಾಯೀ ।
ನಿರುಪಧಿಕರಸಾಬ್ಧಿಂ ನಿರ್ವಿಶಂತೀಭಿರಾದ್ಯಃ ಕುಲಯುವತಿಭಿರಿತ್ಥಂ ಕೋಽಪಿ
ಶೃಂಗಾರಭೂಮಾ ॥ (೨೪ - ೯೦)

ಇತರರಿಗೆ ಅಲಭ್ಯವಾದ ಸ್ವರ್ಗ ಮೋಕ್ಷಗಳಿಗಿಂತ ಶ್ರೇಷ್ಠವಾದ ವಾಚಾಮಗೋಚರವಾದ ಆನಂದವನ್ನು ಶ್ರೀಕೃಷ್ಣ ಪರಮಾತ್ಮನ ಪ್ರೇಯಸಿಯರು ಆತನ ನಿತ್ಯ ಸಾನಿಧ್ಯದಿಂದ ಅನುಭವಿಸಿದರು.

ಆಚಾರ್ಯರು ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಇಟ್ಟುಕೊಂಡಿದ್ದ ಸಂಪರ್ಕವು ಶಾಸ್ತ್ರ, ನೀತಿ ಮತ್ತು ಧರ್ಮಸಮ್ಮತವಾದದ್ದು ಎಂದು ಸಮರ್ಥಿದ್ದಾರೆ. ಇದೇ ರೀತಿ ಶ್ರೀಕೃಷ್ಣನ ಕ್ರೀಡೆಗಳ ಬಗ್ಗೆ ಅನೇಕರು ವ್ಯಕ್ತಪಡಿಸುವ ಸಂದೇಹಗಳನ್ನು ಆಚಾರ್ಯರು ' ಯಾದವಾಭ್ಯುದಯ' ಕಾವ್ಯದಲ್ಲಿ ಪರಿಹರಿಸಿದ್ದಾರೆ.

ಶ್ರೀಯಾದವಾಭ್ಯುದಯ ಕಾವ್ಯವು ಭಕ್ತಿರಸವನ್ನುಂಟು ಮಾಡುವ ಕಾವ್ಯ. ಕೊನೆಯ ಮಂಗಳ ಶ್ಲೋಕದಲ್ಲಿ –

ಗುರುಭಿರನಘ ಚಿತ್ತೈರಾಹಿತೋದಾರ ಭೂಮಾಸುರಭಿತರಸಮೇತತ್
ಸೂನೃತಂ ವೇಂಕಟೇಶಃ ।
ಪ್ರತನತ ಯದುವೀರ ಪ್ರೀತಿಮಿಚ್ಛನ್ ಪ್ರಭೂತಾಂ ಕವಿಕಥಕಮೃಗೇಂದ್ರಃ
ಕ್ಷೇಮದಂ ಕಾವ್ಯರತ್ನಂ ॥ (೨೪ - ೯೫)

ದೋಷವಿಲ್ಲದ ಮನಸ್ಸುಳ್ಳವರಾಗಿ ಅಜ್ಞಾನವೆಲ್ಲಾ ಕಳೆಯುವುದರಿಂದ ಗುರುವೆನ್ನಿಸಿಕೊಳ್ಳುವ ಆಚಾರ್ಯರುಗಳಿಂದ ಅನುಗ್ರಹಿಸಲ್ಪಟ್ಟ ಹಿರಿಮೆ ಹೊಂದಿದ

ಕವಿತಾರ್ಕಿಕ ಸಿಂಹರಾದ ಶ್ರೀವೇಂಕಟೇಶ ಕವಿವರ್ಯರು ಶ್ರೀಕೃಷ್ಣನಿಗೆ ವಿಶೇಷ ಸಂತೋಷ ತರುವುದಾಗಿರುವ ಎಲ್ಲರಿಗೂ ಹಿತವಾಗಿಯೂ, ಪ್ರಿಯವಾಗಿಯೂ, ಸತ್ಯವಾಗಿಯೂ ಇರುವ ಲೋಕಕ್ಕೆಲ್ಲಾ ಕ್ಷೇಮವನ್ನುಂಟು ಮಾಡುವ ಈ "ಯಾದವಾಭ್ಯುದಯ" ಎಂಬ ರತ್ನವನ್ನು ಆಚಾರ್ಯರು ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ರಚಿಸಿದ್ದಾರೆ.

ಈ ಕಾವ್ಯದ ಪಠಣದಿಂದ ಲೋಕಕ್ಕೆ ಕ್ಷೇಮವುಂಟಾಗುತ್ತದೆ. ಈ ಕಾವ್ಯವು ಕೇಳಲು ಹಿತವಾಗಿಯೂ ಇದ್ದು ಸತ್ಯವಿಚಾರಗಳನ್ನು ತಿಳಿಸುವುದಲ್ಲದೇ ಎಲ್ಲರ ಮನಸ್ಸಿಗೆ ಸಂತೋಷವನ್ನೂ ಉಂಟುಮಾಡುತ್ತದೆ. ಇದು ಒಂದು ಕಾವ್ಯರತ್ನ.

□□□

ಶ್ರೀ. ಕೆ. ರಾಮಯ್ಯನವರ 'ನಾಯಿತಿಪ್ಪ' ನಾಟಕದಲ್ಲಿ ಸಾಂಸ್ಕೃತಿಕ ಸಂಘರ್ಷ

– ಕುಪ್ಪಳ್ಳಿ ಎಂ. ಬೈರಪ್ಪ

ಮನುಷ್ಯಲೋಕದಲ್ಲಿ ಸೃಜನಶೀಲತೆಯೆಂಬುದೇ ಸಾಂಸ್ಕೃತಿಕ ದರ್ಶನದ ಒಂದು ಮಾದರಿ. ಈಗಾಗಲೇ ಅಸ್ತಿತ್ವದಲ್ಲಿರುವ ಸಾಂಸ್ಕೃತಿಕ ರಚನೆಗಳನ್ನು ಮೌಲ್ಯೀಕರಿಸುವ, ವಿಮರ್ಶಿಸುವ, ವೈಭವೀಕರಿಸುವ ಅಥವಾ ಪುನರ್‌ಮೌಲ್ಯೀಕರಿಸುವ ಪ್ರಕ್ರಿಯೆಯಾಗಿಯೂ ಸೃಜನಶೀಲ ದುಡಿಮೆಗಳನ್ನು ಪರಿಗಣಿಸಲಾಗುತ್ತಿದೆ. ಆದರೆ ಒಂದು ಕಾಲಕ್ಕೆ, ಒಂದು ವಿಚಾರಕ್ಕೆ ಮತ್ತು ಏಕಸ್ವಾಮ್ಯ ಸಂಸ್ಕೃತಿಗೆ ಸೀಮಿತಗೊಂಡ ಸೃಜನಕ್ರಿಯೆಗಳು ಮುಂಬರುವ ಕಾಲದ ಸದ್ದನ್ನು ಆಲಿಸದಿದ್ದರೆ ಅವು ಕಾಲಕಾಲಕ್ಕೆ ಸಲ್ಲುವುದಿಲ್ಲ. ಕಾಲದಿಂದ ಕಾಲಕ್ಕೆ ಬಹು ಸಾಂಸ್ಕೃತಿಕ ರಚನೆಗಳಲ್ಲಿ ಬದಲಾವಣೆಗಳು ಆಗುವುದರಿಂದ ಆ ಕಾಲ, ಈ ಕಾಲ, ಯಾವ ಕಾಲಕ್ಕೂ ಸಲ್ಲುವ ಸಾಂಸ್ಕೃತಿಕ ದಾರ್ಶನಿಕ ಕಾಣ್ಕೆಗಳನ್ನು ನೀಡುವ ಸೃಜನಶೀಲ ಕೃತಿಕಾಯಕಗಳು ಮಾತ್ರ ಬಹುಕಾಲ ಉಳಿಯುತ್ತವೆ. ಅಂತಹ ಅನೇಕ ಸೃಜನಶೀಲ ದುಡಿಮೆಗಳನ್ನು ಇಂದಿಗೂ ವಿಶ್ವದಾದ್ಯಂತ ಸ್ಮರಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಸ್ಥಳೀಯವಾದ ಸೃಜನಶೀಲ ಕಾಯಕದ ಮೂಲಕ ವಿಷಪೂರಿತ ಪ್ರಾದೇಶಿಕ ಹಾಗೂ ವಿಶ್ವಾತ್ಮಕ ಸಮಸ್ಯೆಗಳನ್ನು ದರ್ಶಿಸಿ ಸಾಂಸ್ಕೃತಿಕ ಯಾಜಮಾನ್ಯ (Cultural Hegemony) ಮತ್ತು ಸಾಂಸ್ಕೃತಿಕ ಜನಮಾನ್ಯ (Cultural popular approval)ಗಳ ನಡುವಿನ ಸಂಘರ್ಷಗಳನ್ನು ನಾಟಕ ಪ್ರಕಾರದ ಮೂಲಕವೂ ಕಟ್ಟಿಕೊಡಲಾಗಿದೆ. ಒಂದು ಸಂಸ್ಕೃತಿಯ ಅಧಿಕಾರದ ದಾಹ ಮತ್ತು ಅಹಂಕಾರ ಹಾಗೂ ಮತ್ತೊಂದು ಸಂಸ್ಕೃತಿಯ ಅಸ್ತಿತ್ವ ಮತ್ತು ಅಂತಃಕರಣಗಳ ನಡುವಿನ ಸಂಘರ್ಷಗಳು ಅಂದಿನಿಂದ ಇಂದಿನ ವರೆಗೂ ನಡೆಯುತ್ತಲೇ ಇವೆ. ಅಂದರೆ ಸಾಂಸ್ಕೃತಿಕ ಸಂಘರ್ಷ (Cultural struggle) ಎಂಬುದು ಸಾಂಸ್ಕೃತಿಕ ಹೊರಗೊಳ್ಳುವಿಕೆ (Cultural Exclusive)/ ಹೊರದಬ್ಬುವಿಕೆ

ಅಥವಾ ಸಾಂಸ್ಕೃತಿಕ ಒಳಗೊಳ್ಳುವಿಕೆ (Cultural Inclusive)ಗಳ ನಿರಂತರ ಪ್ರಕ್ರಿಯೆಯಾಗಿದೆ. ನಮ್ಮ ಕನ್ನಡದಲ್ಲಿ ಗೋವಿಂದ ಪೈ, ಕುವೆಂಪು ಅವರಿಂದಲೂ ಈವರೆಗಿನ ಹಲವಾರು ನಾಟಕಕಾರರು ಸಾಂಸ್ಕೃತಿಕ ಸಂಘರ್ಷದ ವಿವಿಧ ಆಯಾಮಗಳನ್ನು ತಮ್ಮ ನಾಟಕಗಳಲ್ಲಿ ನಿರೂಪಿಸಿದ್ದಾರೆ. ಅಂತಹ ನಾಟಕಕಾರರಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರು ಪ್ರಮುಖರಾಗಿದ್ದಾರೆ.

ನೆಲಮೂಲ ಸಂಸ್ಕೃತಿಯ ಬೇರುಬೆಳಕುಗಳನ್ನು ಹುಡುಕುತ್ತ ಸಾಂಸ್ಕೃತಿಕ ಚೈತನ್ಯಶೀಲತೆಗಾಗಿ ದುಡಿಯುತ್ತಿರುವ ಕೋಟಿಗಾನಹಳ್ಳಿ ರಾಮಯ್ಯನವರು ಕನ್ನಡದ ಪ್ರಸಿದ್ಧ ಕವಿ, ಪತ್ರಕರ್ತ, ನಾಟಕಕಾರರಾಗಿ ಸಾಂಸ್ಕೃತಿಕ ಹೋರಾಟಗಾರರೂ ಆಗಿದ್ದಾರೆ. ನಾಡಿನಾದ್ಯಂತ 'ರಾಮಣ್ಣ' ಎಂದೇ ಕರೆಸಿಕೊಳ್ಳುವ ಕೋಟಿಗಾನಹಳ್ಳಿ ರಾಮಯ್ಯನವರು ೧೯೫೫ರ ಮೇ ೭ರಂದು ಕೋಲಾರ ಜಿಲ್ಲೆಯ ಕೋಟಿಗಾನಹಳ್ಳಿಯಲ್ಲಿ ಜನಿಸಿದರು. ಇವರು ಹಲವಾರು ಜನಪರ ಚಳವಳಿಗಳಲ್ಲಿ ಭಾಗವಹಿಸುತ್ತ ಜಾಗೃತಿ ಮೂಡಿಸುವ ಬಹಳಷ್ಟು ಬಂಡಾಯಕಾವ್ಯವನ್ನು ಕಟ್ಟಿದ್ದಾರೆ. ರಾಮಣ್ಣನವರ ಕಾವ್ಯದಂತೆ ನಾಟಕಗಳು ಜಾಗೃತಿಯ ಬೆಳಕು ಬೀರುವ ಬೆಳಕಿನ ಬುಗ್ಗೆಗಳಾಗಿದ್ದು ನಾಯಿತಿಪ್ಪ, ಗಂಗಭಾರತ, ಅಣ್ಣಾ ಹಜಾರೆ, ಅವ್ವ, ಭಿಕ್ಷಾಪಾತ್ರೆ, ರತ್ನಪಕ್ಷಿ, ದ್ಯಾವರಪ್ಪ, ಕಣ್ಣಾಸ್ಪತ್ರೆಯ ಕ್ಯೂನಲ್ಲಿ ಜಗದಂಬೆ ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಸಿಂದ್ ಮಾದಿಗರ ಸಾಂಸ್ಕೃತಿಕ ಇತಿಹಾಸವನ್ನು ಕುರಿತ ಶೋಧನಗ್ರಂಥವಾಗಿ 'ಸಿಂದ್ ಮಾದಿಗರ ಸಂಸ್ಕೃತಿ'ಯು ಪ್ರಕಟಗೊಂಡಿದೆ. ಹಲವಾರು ಚಲನಚಿತ್ರಗಳಿಗೆ ಸಂಭಾಷಣೆ, ಚಿತ್ರಕಥೆ ಬರೆದು ಶ್ರೇಷ್ಠ ಸಂಭಾಷಣೆ, ಶ್ರೇಷ್ಠ ಚಿತ್ರಕಥೆ ಪ್ರಶಸ್ತಿಗಳನ್ನು ಪಡೆದಿದ್ದಾರೆ. ೫೩೦ ಕಂತುಗಳಲ್ಲಿ ಪ್ರಸಾರಗೊಂಡ 'ಸಂಕ್ರಾಂತಿ' ಎಂಬ ಮಹಾದೈನಿಕ ಧಾರಾವಾಹಿಯ ಪ್ರಧಾನ ಕಥಾಲೇಖಕರೂ, ಸಂಭಾಷಣೆಕಾರರೂ ಹಾಗೂ ಚಿತ್ರಕತೆಗಾರರೂ ರಾಮಣ್ಣನವರೆ. ಹೀಗೆ ಈ ನೆಲದ ನಿಜಕ್ಕಾಗಿ ಬಹುಮುಖೀ ನೆಲೆಗಳಲ್ಲಿ ದುಡಿಯುತ್ತಿರುವ ರಾಮಣ್ಣನವರಿಗೆ ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿ, ಅಂಬೇಡ್ಕರ್ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. ಕರ್ನಾಟಕ ಸರ್ಕಾರವು ೨೦೦೫ರಲ್ಲಿ ರಾಮಣ್ಣನವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈಚೆಗೆ ಅವರ ರಂಗಭೂಮಿಯ ಅನುಪಮ ಸೇವೆಯನ್ನು ಗುರ್ತಿಸಿ ಸಾಣೆಹಳ್ಳಿಯ ಪ್ರತಿಷ್ಠಿತ ಶಿವಕುಮಾರ ಪ್ರಶಸ್ತಿಯೂ ಲಭಿಸಿದೆ. ಪ್ರಸ್ತುತ 'ಆದಿಮ', 'ಆದಿಮ ಲಿವಿಂಗ್ ಸ್ಕೂಲ್', 'ಆದಿಮ ಲಿವಿಂಗ್ ಟೈಮ್ಸ್'ಗಳಲ್ಲಿ ಸಕ್ರಿಯರಾಗಿ ನೆಲಸಂಸ್ಕೃತಿಯ ನಡೆ–ನುಡಿಗಳ ಸೇವೆ ಸಲ್ಲಿಸುತ್ತಿದ್ದಾರೆ.

ಕೆ. ರಾಮಯ್ಯ ಅವರ 'ನಾಯಿತಿಪ್ಪ' (೧೯೯೮ರಲ್ಲಿ ರಚನೆ) ನಾಟಕವು ಬ್ರಾಹ್ಮಣೀಕರಣ ಹಾಗೂ ಜಾಗತೀಕರಣಗಳ ಪ್ರತಿರೋಧವಾಗಿ ತಳಸಮುದಾಯಗಳ ಜಾನಪದೀಯ ವಿವೇಕದ ಬಂಡಾಯವನ್ನು ಚಿತ್ರಿಸುವ ನಾಟಕವಾಗಿದೆ. ವಸಾಹತೋತ್ತರ ಜಾಗತೀಕರಣದ ಸಕಾರಾತ್ಮಕವಾದ ಅಂಶಗಳನ್ನು ಸ್ವೀಕರಿಸುತ್ತಲೇ, ಜಾಗತೀಕರಣದ ನೆಪದಲ್ಲಿ ಜನರನ್ನು ಶೋಷಿಸುವ ಬ್ರಾಹ್ಮಣೀಕರಣ ಮೊದಲಾದ ಯಾವ ಸಂಗತಿಯನ್ನೂ ತಳಸಮುದಾಯಗಳು ಪುರಸ್ಕರಿಸದೆ ಅದರ ವಿರುದ್ಧ ಬಂಡಾಯವೇಳುವ ಮತ್ತು ಬಂಡಾಯವೇಳಬೇಕಾದ ನೈತಿಕ ಸಂಕಥನವಿದಾಗಿದೆ. ಮುಖ್ಯವಾಗಿ, ತಳಸಮುದಾಯದ ತ್ಯಾಗ, ಸಹನೆ, ಪ್ರೀತಿ ಮತ್ತು ಮಾನವೀಯತೆಗಳನ್ನೊಳಗೊಂಡ ಜೀವನ ವಿವೇಕವುಳ್ಳ ಜೀವನಮೀಮಾಂಸೆಯ ದರ್ಶನವೂ ಇಲ್ಲಿದೆ.

ಅನ್ನಕೊಡುವ ಭೂಮಿಯನ್ನು ನೆಚ್ಚಿದ್ದ ಜನರು ಬರಗಾಲದಿಂದಾಗಿ ಬದುಕಲಾರದೆ ಗಂಟುಮೂಟೆ ಕಟ್ಟಿಕೊಂಡು ನಗರಗಳಿಗೆ ಹೊರಡುವ ದೃಶ್ಯದಿಂದಲೇ ನಾಟಕವು ಆರಂಭವಾಗುತ್ತದೆ. ಹಸಿವನ್ನು ನೀಗಿಸಲು 'ನಲಿವ ನಗರ'ವನ್ನು ನೆಚ್ಚುವ ತಳವರ್ಗದ ಬಡವಿ ಅಜ್ಜಿಯು ತನ್ನ ಮೊಮ್ಮಗ ನಾಯಿತಿಪ್ಪನನ್ನು ಆತನ ಗೆಳೆಯರೊಂದಿಗೆ ಬೆಂಗಳೂರು ಪ್ಯಾಟೆಗೆ ಹೋಗುವಂತೆ ಒಪ್ಪಿಸುತ್ತಾಳೆ. ತಿಪ್ಪನಿಗೆ ರಾಗಿರೊಟ್ಟಿ, ಒಂದಷ್ಟು ಕಾಸುಕೊಟ್ಟು ಪ್ಯಾಟೆಗೆ ಕಳುಹಿಸುತ್ತಾಳೆ. ಆದರೆ ಅಜ್ಜಿ, ತಿಪ್ಪನ ನಂಬಿಕೆ, ಕಲ್ಪನೆಗಳಿಗೆ ವಿರುದ್ಧವಾಗಿ ನಗರಕ್ಕೆ ನಗರವೇ ವರ್ತಿಸುತ್ತದೆ. ತಿಪ್ಪನು ತನ್ನ ಒಡನಾಡಿಗಳಿಂದ ದೂರವಾಗುತ್ತಾನೆ. ನಾಟಕದ ಮೂರನೇ ದೃಶ್ಯವು ನಗರದ ವ್ಯಾವಹಾರಿಕ ಸಂಸ್ಕೃತಿಯಿಂದ ನಿರ್ಲಕ್ಷಿತನಾದ ಅರ್ಥಾತ್ ಶೋಷಿತನಾದ ತಿಪ್ಪನ ಹುಡುಕಾಟವನ್ನು ಮನಕಲುಕುವಂತೆ ಚಿತ್ರಿಸಿದೆ. ನಾಲ್ಕನೇ ದೃಶ್ಯದಲ್ಲೂ ನಿರ್ಲಕ್ಷಿತನಾದ ತಿಪ್ಪನ ಓಡಾಟವಿದೆ. ಇಲ್ಲಿ ಸೈನಿಕರಾಗಲೀ, ಭಯವುಟ್ಟಿಸುವ ಸಂಸ್ಕೃತ ಪಾಠಪ್ರವಚನಗಳಾಗಲೀ, ಕರುಣೆಯಿಲ್ಲದ ವ್ಯಾಪಾರವಾಗಲೀ ತಿಪ್ಪನ ನೋವನ್ನು ಅರಿಯುವುದಿಲ್ಲ. ಇದರಿಂದ ನಗರವನ್ನು ತಿರಸ್ಕರಿಸಿ ತಿಪ್ಪನು ತನ್ನೂರಿಗೆ ವಾಪಸ್ಸಾಗುತ್ತಾನೆ, ತನ್ನೂರಿನ ಸನಿಹದಲ್ಲಿ ಎದ್ದಿದ್ದ 'ಇಮಾನ ಇಳಿಯೋ ಬಸ್ಟ್ಯಾಂಡ್'ನಲ್ಲಿ 'ದ್ವಾಸೆ' ಮಾರುವ ಕಾಯಕಕ್ಕೆ ಸಿದ್ಧರಾದ ಬಗೆಯನ್ನು ೫ನೇ ದೃಶ್ಯ ಚಿತ್ರಿಸುತ್ತದೆ. ೬ನೇ ದೃಶ್ಯದಲ್ಲಿ 'ದ್ವಾಸೆ'ಗಳನ್ನು ಮಾರೇ ತೀರುವ ಹಂಬಲದಲ್ಲಿ ತಿಪ್ಪನು ನಾಯಿಗಳಿಗೆ ದ್ವಾಸೆಗಳನ್ನು ನೀಡುವ ಹಾಗೂ ಅವು ಕಾಸು ನೀಡದಿದ್ದಾಗ ಅವುಗಳ ಬೆನ್ನಟ್ಟಿಹೋಗುವ ಮುಗ್ಧತೆಯ ಕ್ರಾಂತಿಯಿದೆ. ಇದು ನಂತರದ ದೃಶ್ಯದಲ್ಲೂ ಮುಂದುವರಿದು ೮ನೇ ದೃಶ್ಯದಲ್ಲಿ, ನಾಯಿಗಳಂತೇ ಹೆಸರುಳ್ಳ ಕಳ್ಳರು ಕದ್ದು ತಂದ

4

ಹಣವು ತಿಪ್ಪನಿಗೆ ಸಿಗುತ್ತದೆ. ಅದರಲ್ಲಿ ಜೊಳ್ಳು-ಗಟ್ಟಿಗಳನ್ನು ಪರಿಶೀಲಿಸಿ ತನಗೆ ಬರಬೇಕಿದ್ದ ದೋಸೆಯ ಹಣವನ್ನಷ್ಟೇ ಆರಿಸಿಕೊಂಡು ಬರುತ್ತಾನೆ. ತಿಪ್ಪನಿಗೆ ದೊರೆತ ಹಣದ ವಿಚಾರ ತಿಳಿದ ಅಜ್ಜಿಯು ಒಟ್ಟು ಹಣವನ್ನು ತಂದು ಮನೆಯಲ್ಲಿ ಶೇಖರಿಸಿ, '...ಸಿವಪ್ಪಾ... ಇದಾ ಈ ನಿನ್ನ ಎಕ್ಕಡದ ಒಂದು ತುಂಡಾ ಇಲ್ಲಿ ಹೆಣ ಹುಗಿದಂಗೆ ಹುಗದಿಟ್ಟೀನಿ. ಇದು ಈ ನನ್ನ ಕೂಸಂಥ ಕೂಸ ಕೈಗೆ ಸಿಗೋ ಹಂಗೆ ಮಾಡು. ಅಸ್ಟು ಮಾಡಿ ನೀ ಸಿವಾ ಅನ್ನುಸ್ಕೋ...' ಎಂದು ಬಡವರಿಗಾಗಿ ಸಂಪತ್ತನ್ನು ಜನಮುಖಿಗೊಳಿಸುವ ಬಗೆಯು ೯ನೇ ದೃಶ್ಯವಾಗಿದೆ. ಮುಂದೆ ವಿವಿಧ ಬಣ್ಣ, ರೂಪಗಳನ್ನು ಪಡೆದ ಈ ವಿಚಾರಕ್ಕೆ ಪ್ರತಿರೋಧವಾಗಿ ಅಜ್ಜಿಯ ಜಾಣತನದಲ್ಲಿ ಜಾನಪದೀಯ ಕೆಂಡದ ಮಳೆ, ನುಗ್ಗೇಮರದ ರೊಟ್ಟಿಯ ತಂತ್ರಾಸ್ತ್ರಗಳು ಮುಂಜಾಗ್ರತೆಯಿಂದ ಸಿದ್ಧವಾಗುತ್ತದೆ. ಅಜ್ಜಿ ಮತ್ತು ನಾಯಿತಿಪ್ಪ ಅರೆಸ್ಟ್ ಆಗುತ್ತಾರೆ. ನಾಟಕದ ಕೊನೆಯ ದೃಶ್ಯದಲ್ಲಿ, ಜನತಾ ನ್ಯಾಯಾಲಯದಲ್ಲಿ ಜಾನಪದ ವಿವೇಕದ ಜಯವೋ ಎಂಬಂತೆ ಅಜ್ಜಿಯ ಜಾಣಾಸ್ತ್ರಗಳಿಂದ ನ್ಯಾಯಪರತೆಯ ವಾದಸರಣಿ ಗೆಲ್ಲುತ್ತದೆ. ವಸಾಹತೋತ್ತರದ ಗ್ಯಾಟ್, ಪೇಟೆಂಟ್‌ಗಳಿಗೆ ಬಲವಿಲ್ಲವಾಗಿ ಅಜ್ಜಿ ಮತ್ತು ನಾಯಿತಿಪ್ಪ ಬಿಡುಗಡೆಯಾಗುತ್ತಾರೆ. ಹೀಗೆ, ಅಂತಿಮವಾಗಿ ಕಾಲದಿಂದ ಕಾಲಕ್ಕೆ ವಿವಿಧ ಪರಿವೇಷ ಹೊತ್ತು ಬರುವ ಶೋಷಕ ಸಂಸ್ಕೃತಿಯು ಜನರ ಜೀವನಪ್ರೀತಿ ಮತ್ತು ವಿವೇಕಗಳ ಎದುರಲ್ಲಿ ಸತ್ವಹೀನಗೊಳ್ಳಬೇಕೆಂಬ ಆಶಯವನ್ನು ನಾಟಕವು ಎತ್ತಿಹಿಡಿಯುತ್ತದೆ.

ಹೀಗೆ, 'ತಳಸಮುದಾಯವೊಂದು ಬದುಕಿಗಾಗಿ ಹೋರಾಡುತ್ತ ಹಲವು ಪಡಿಪಾಟಲನ್ನು ಕಂಡರೂ ಮರೆಯದ ಬದುಕಿನ ನೈತಿಕತೆಯನ್ನು ನಾಟಕದ ಹನ್ನೊಂದು ದೃಶ್ಯಗಳಲ್ಲಿ ನಿರೂಪಿಸಲಾಗಿದೆ. ಇಲ್ಲಿ ದರ್ಶಿಸಲ್ಪಡುವ ತಳಸಮುದಾಯದ ಜೀವನಮೀಮಾಂಸೆಯಲ್ಲಿ ೪ ನೆಲೆಯ ಸಾಂಸ್ಕೃತಿಕ ಸಂಘರ್ಷಗಳನ್ನು ಗುರುತಿಸಬಹುದಾಗಿದೆ :

೧. ನಗರಸಂಸ್ಕೃತಿ x ಗ್ರಾಮಸಂಸ್ಕೃತಿ

೨. ವೈದಿಕಸಂಸ್ಕೃತಿ x ತಳಸಂಸ್ಕೃತಿ

೩. ಪ್ರಭುಸಂಸ್ಕೃತಿ x ಪ್ರಜಾಸಂಸ್ಕೃತಿ

೪. ಜಾಗತೀಕರಣ x ಜಾನಪದ – ಈ ಸಂಘರ್ಷಗಳು ನಾಟಕದ ದೃಶ್ಯದಿಂದ ದೃಶ್ಯಕ್ಕೆ ಬೆಳೆಯುತ್ತ ಒಂದರೊಳಗೊಂಡು ಕಾಲೂರುತ್ತ ಎದುರುಗೊಳ್ಳುತ್ತಾ ಹೋಗುತ್ತವೆ.

ಬದುಕುವುದಕ್ಕಾಗಿ ನಗರಕ್ಕೆ ಬಂದಿದ್ದ ನಾಯಿತಿಪ್ಪನು ದಿಕ್ಕುತಪ್ಪಿ ನಗರದ ವ್ಯಾವಹಾರಿಕ ಸಂಸ್ಕೃತಿಗೆ ಬೆಚ್ಚಿಬೀಳುತ್ತಾನೆ. ಎಷ್ಟು ಬೇಡಿದರೂ ಕುಡಿಯಲು ಟೀ ಸಿಗುವುದಿಲ್ಲ. ನಂತರ ಕೆಲಸಕ್ಕಾಗಿ ಸೈನಿಕರ ಕವಾಯ್ತಿಗೆ ಸೇರಿಕೊಳ್ಳಲು ಪ್ರಯತ್ನಿಸುತ್ತಾನೆ. ಅಲ್ಲಿ, ಸಂಬಳಕೊಡೋದಾದ್ರೆ ಒದೆಸಿಕೊಳ್ಳಲು ಸೈ ಎಂದಿದ್ದ ತಿಪ್ಪನಿಗೆ ಒದೆ ಸಿಗುತ್ತದೆ; ಕೆಲಸವಲ್ಲ. ಮುಂದೆ ಕೆಲಸಕ್ಕಾಗಿ ಅಕ್ಷರಬೇಕೆಂದು ಪಾಠಶಾಲೆಗೆ ಹೋಗುತ್ತಾನೆ. 'ಇದ್ಯೆ ಕಲಿತ್ರೆ ಮಾತ್ರ ನೌಕರಿ ಸಿಗೋದು, ಇಲ್ಲಿಗ್ಹೋಗು ಕಲುಸ್ತಾರೆ ಅಂದ್ರು, ಬಂದೆ ಬುದ್ಧಿ' ಎಂದು ತಿಪ್ಪನು ಪಾಠಕಲಿಸುವ ಗುರುಗಳಿಗೆ ಹೇಳುತ್ತಾನೆ. ತಕ್ಷಣ ವೈದಿಕ ಸಂಸ್ಕೃತಿ ಪ್ರೇರಿತ ವಟು ವಿದ್ಯಾರ್ಥಿ ಸಮೂಹವು, 'ಬೇಡ ಗುರುಗಳೇ... ಅವನಿಗೆ ಕಲಿಸಬೇಡಿ, ಅವನನ್ನು ಸೇರಿಸ್ಕೋಬೇಡಿ, ಡೌನ್ ವಿತ್ ರಿಸರ್ವೇಷನ್, ಡೌನ್ ವಿತ್ ರಿಸರ್ವೇಷನ್!' ಎಂದು ತಳಸಮುದಾಯ ಏಳಿಗೆ ಪರವಾದ ಮೀಸಲಾತಿಯನ್ನು ವಿರೋಧಿಸುತ್ತದೆ. ಆದರೆ ಉದಾರವಾದಿ ಗುರುಗಳು ತಿಪ್ಪನಿಗೆ ಪಾಠ ಮಾಡಲು ಇಚ್ಛಿಸಿ 'ಕಾಲಾಯ ತಸ್ಮೈ ನಮಃ' ಎಂದು ಸಂಸ್ಕೃತ ಪಾಠ ಹೇಳುತ್ತಾರೆ. ಆದರೆ ಇದು ತಿಪ್ಪನನ್ನು ಹೆದರಿಸಿದಂತಾಗುತ್ತದೆ. ಅರ್ಥಾತ್ ತನ್ನದಲ್ಲದ್ದು, ತನಗೆ ಬೇಡದ್ದು ತನ್ನನ್ನು ಸುತ್ತಿ ಸಾಯಿಸುವುದೆಂಬ ಅರಿವು ತಿಪ್ಪನಿಗೆ ಉಂಟಾಗಿ ಜನಸಂಸ್ಕೃತಿ ವಿರೋಧಿ ಪಾಠವನ್ನು ತಿರಸ್ಕರಿಸುತ್ತಾನೆ. ಇಲ್ಲಿ ಆರ್ಥಿಕ ಅಧಿಕಾರ ಮತ್ತು ಅಕ್ಷರ ಅಧಿಕಾರಗಳು ಒಟ್ಟಾಗಿ ಜನಸಮುದಾಯಗಳಲ್ಲಿ ಭಯೋತ್ಪಾದನೆ ಉಂಟುಮಾಡುವುದನ್ನು ಕಾಣುತ್ತೇವೆ. ತನ್ನೊಡಲಿನ ಹಸಿವನ್ನು ಅರಿಯದ ನಗರದ ವ್ಯಾವಹಾರಿಕ ಸಂಸ್ಕೃತಿ, ಪ್ರಭುತ್ವದ ಭಾಗವಾಗಿ ಬರೀ ಶಿಸ್ತು ಮಾತ್ರ ಕಾಯ್ವ ಮಿಲಿಟರಿ ವ್ಯವಸ್ಥೆ, ಮೀಸಲಾತಿಯನ್ನು ವಿರೋಧಿಸುವ ಹಾಗೂ ತಳಸಮುದಾಯಗಳಿಗೆ ತಿಳಿಯದ ಭಾಷೆಯನ್ನು ಹೇರುವ ಹುನ್ನಾರದಲ್ಲಿ ಹುಟ್ಟಿದ ಶಿಕ್ಷಣ ವ್ಯವಸ್ಥೆ ಈ ಎಲ್ಲ ಸಾಂಸ್ಕೃತಿಕ ಯಾಜಮಾನ್ಯಗಳು ಒಂದರೊಳಗೊಂದು ಕಾಲೂರಿಕೊಂಡು ತುಳಿಯಲು ಯತ್ನಿಸುವ ಹುನ್ನಾರಗಳನ್ನು ವ್ಯಂಗ್ಯವಾದ ಧಾಟಿಯಲ್ಲಿ ವಿಡಂಬಿಸುವ ಸೃಜನಕ್ರಿಯೆಯು ವರ್ತಮಾನದ ಕನ್ನಡಿಯಾಗಿದೆ.

ನಮ್ಮ ಜನಪದರ ಜೀವನ ವಿವೇಕವು, ಹರಿದುಬರುತ್ತಿರುವ ಬಗೆ ಅದ್ಭುತವಾದುದು. ತಲೆಮಾರಿನಿಂದ ತಲೆಮಾರಿಗೆ, ಬಾಯಿಂದ ಬಾಯಿಗೆ ಸತ್ವವಾಗಿ, ತತ್ವವಾಗಿ ಜನಜೀವನದ ಜೀವನಾಡಿಯಾಗಿ ಹರಿದು ಬರುತ್ತಿರುವಂತಹುದು. ಈ ನಾಟಕದಲ್ಲಿ ಜಾಣಅಜ್ಜಿಯ ವಿವೇಕವು ಮುಗ್ಧ ತಿಪ್ಪನ ಅಂತರಂಗದೊಳಗೆ ಜೀವನಾಡಿಯಾಗಿ ಒಳವಿವೇಕವಾಗಿ ಮುಗ್ಧವಾಗಿ ಹರಿಯುತ್ತದೆ. ಇದಕ್ಕೆ, ಪಟ್ಟಣದ ವಿವಿಧ ವೇಷದ ಹಣಮುಖೀ ಸಂಸ್ಕೃತಿಗಳ ತುಳಿತಕ್ಕೆ ಒಳಗಾದ ಮುಗ್ಧ ತಿಪ್ಪನು

ಮಾಡುವ ಜೊಳ್ಳು-ಗಟ್ಟಿಗಳ ತೀರ್ಮಾನದ ವಿವೇಕವೇ ಸಾಕ್ಷಿಯಾಗಿದೆ. ತಿಪ್ಪನಿಗೆ ಹಣದ ಮೂಟೆ ಸಿಕ್ಕಿದ ಸಂದರ್ಭದಲ್ಲಿ ಅವನು ಮಾಡಿದ ವಿವೇಕ ಕಾರ್ಯ ಹೀಗಿದೆ: - "... ನೀನು ಕಣದಾಗೆ ರಾಗಿ ತೂರಿ ಜೊಳ್ಳು ಬ್ಯಾರೆ ಗಟ್ಟಿ ಬ್ಯಾರೆ ಮಾಡ್ತೀಯಲ್ಲ... ಹಂಗೇನೆ ನಾನು ಅರೆಕ್ಷಲ್ಲ ಹತ್ತಿ ತೂರಿಬುಟ್ಟೆ... ಜೊಳ್ಳೇ ಬ್ಯಾರೇ ಆಗೋಯ್ತು. ಗಟ್ಟೀನೆ ಬ್ಯಾರೆ ಆಗೋಯ್ತು. ಜೊಳ್ಳೆಲ್ಲ ಅಲ್ಲೇ ಬುಟ್ಟು ಈ ಗಟ್ಟೀನಾ ಹೊತ್ಕೋ ಬಂದೆ...'(ನಾಯಿತಿಪ್ಪ: ಪುಟ.೪೧) ತಿಪ್ಪನ ಈ ಮುಗ್ಧತೆಯಲ್ಲಿನ 'ಹೊಟ್ಟು ತೂರುವಿಕೆ'ಯು ನೆಲಸಂಸ್ಕೃತಿಯಲ್ಲಿನ ಕಣದಲ್ಲಿ ರಾಗಿ, ಭತ್ತಗಳ ಹೊಟ್ಟು ತೂರಿ ಗಟ್ಟಿ ಪಡೆವ ತತ್ವಾಧಾರಿತವಾಗಿದೆ. ಇಲ್ಲಿ 'ಕ್ರಾಂತಿಯ ಜನನಿ ತತ್ವಜ್ಞಾನ' ಎಂಬ ಅಂಬೇಡ್ಕರ್‌ರ ಮಾತು ನೆನಪಾಗುತ್ತದೆ. ಇಂಥ ತತ್ವಜ್ಞಾನದ ಪ್ರಕ್ರಿಯೆಯಲ್ಲಿ ಆಸೆ ಮತ್ತು ಅಹಂಕಾರಭರಿತ ನವಅಸ್ತಿತ್ವವಾದದ ಜಾಗತೀಕರಣ ಸಂದರ್ಭದ ಅಮಲುಗಳನ್ನು ತೂರಿ ಅರಿವುಗಳನ್ನು ಉಳಿಸಿಕೊಂಡು ಬದುಕಬೇಕಿರುವುದು ಅನಿವಾರ್ಯವಾಗಿದೆ.

ನಾಯಿತಿಪ್ಪನು ಇಲ್ಲಿ ಮುಗ್ಧನೇ, ಆದರೆ ತಾನು ನಂಬಿದವರು ಮಾತು-ಮಾರ್ಗ ತಪ್ಪಿ ದ್ರೋಹ ಬಗೆದರೆ ಮಹಾಕ್ರಾಂತಿಕಾರಿಯೂ ಆಗುತ್ತಾನೆ. ತುಳಿದ ನಗರವನ್ನು ತಿರಸ್ಕರಿಸಿ ಬಂದು ಊರ್‍ಗೌಡರಿಗೆ ಗುಡಿಸಲನ್ನು ಬರೆದುಕೊಟ್ಟು ದ್ವಾಸೆ ವ್ಯಾಪಾರವನ್ನು ಕೈಗೊಂಡು, ನಾಯಿಗಳಿಗೆ ದ್ವಾಸೆಗಳನ್ನು ಕೊಟ್ಟು ಕಾಸಿಗಾಗಿ ಕಾಯುತ್ತಾನೆ. ನಾಯಿಗಳು ತನ್ನ ದ್ವಾಸೆಯ ಹಣ ನೀಡದಿದ್ದಾಗ ಅವುಗಳ ಬೆನ್ನಟ್ಟಿ ತನ್ನ ಶ್ರಮದ ಫಲಕ್ಕಾಗಿ ಹೋರಾಡಿ ಫಲವನ್ನು ಗಳಿಸುತ್ತಾನೆ. ತನ್ನ ಅಸ್ತಿತ್ವಕ್ಕಾಗಿ ಹೋರಾಡುವ ತಿಪ್ಪನು ವರ್ತಮಾನದಲ್ಲಿ ರೋಸಿಹೋದ ಜನತೆಯ ಬಂಡಾಯದ ಪ್ರತಿನಿಧಿಯಾಗಿ ಕಾಣಿಸುತ್ತಾನೆ. ಜನಕ್ರಾಂತಿಯ ಚರಿತ್ರೆಗಳನ್ನು ನೆನಪಿಸುವ ಪಾತ್ರವಾಗಿ ಮೂಡಿದ್ದಾನೆ. ಇಲ್ಲಿ ನಾಯಿಗಳು ಕೇವಲ ನಾಯಿಗಳಲ್ಲ; ಅವು ನಮ್ಮ ಮತ ಪಡೆದು ಎರಡು ಬಗೆವ ರಾಜಕಾರಣಿಗಳ ವ್ಯಕ್ತಿತ್ವದ ಕನ್ನಡಿಯಾಗಿ ಅದ್ಭುತ ರೂಪಕಗಳಾಗಿ ಚಿತ್ರಿಸಲ್ಪಟ್ಟಿದೆ. ಹಿರಿಯ ವಿದ್ವಾಂಸರಾದ ಹಾಮಾನಾ ಅವರು ಹೇಳಿರುವಂತೆ; 'ಪ್ರಾಣಿಗಳನ್ನೇ ಪ್ರಧಾನ ಪಾತ್ರವಾಗಿ ಉಳ್ಳ ಪ್ರಾಣಿಗಳ ಕಥೆಗಳು ಅತ್ಯಂತ ಪ್ರಾಚೀನ ಜನಪದ ಕಥೆಗಳೆಂದು ಹೇಳಲಾಗಿದೆ.... ಇಲ್ಲಿ ಬರುವ ಪ್ರಾಣಿಗಳು ಕೆಲವು ಸಲ ಮಾನವನ ವಿಡಂಬನೆಗೂ, ಕೆಲವು ಸಲ ಅವನ ಆದರ್ಶಗಳಿಗೂ ಮಾದರಿಯಾಗಿ ನಿಲ್ಲುತ್ತವೆ. ಪ್ರಾಣಿಗಳ ಗುಣಾವಗುಣಗಳನ್ನು ಎತ್ತಿ ಆಡುವುದಕ್ಕಿಂತ ಮನುಷ್ಯನಿಗೆ ನೀತಿಯನ್ನು ಬೋಧಿಸುವುದು ಇವುಗಳ ಪರಮಗುರಿ." (ಜಾನಪದ ತತ್ವಗಳು: ಸಂ. ಪ್ರೊ. ಆರ್ವಿಯಸ್ ಸುಂದರಂ, ಪ್ರೊ. ಎನ್.ಎಸ್. ತಾರಾನಾಥ್,

ಪ್ರಸಾರಾಂಗ, ಮೈಸೂರು ವಿವಿ, ಮೈಸೂರು; ೧೯೯೯; ಪುಟ. ೮) ಹೀಗಾಗಿ, ಇಲ್ಲಿನ ನಾಯಿಗಳು ಸ್ವಾರ್ಥಹಿತದಲ್ಲಿ ಕಳೆದುಹೋಗುತ್ತಿರುವ ಪ್ರಭುಸಂಸ್ಕೃತಿಯ ಪ್ರತಿನಿಧಿಯಾಗಿಯೂ ಮತ್ತಷ್ಟು ಮುಂದಕ್ಕೆ ಹೋಗಿ ಶ್ರಮಸಂಸ್ಕೃತಿಯ ವಿರೋಧಿಯಾದ ಅಂತರರಾಷ್ಟ್ರೀಯ ಪೇಟೆಂಟ್, ಗ್ಯಾಟ್‌ಗಳನ್ನು ಕಾಪಾಡುವ ಕಾರ್ಯಪ್ರವೃತ್ತವಾದ 'ಸೀಕ್ರೇಟ್ ಏಜೆಂಟ್ಸ್' ಆಗಿಯೂ ಕಂಡುಬರುತ್ತವೆ. ಇಂಥ ನವಅಸ್ತಿತ್ವವಾದವು ವಿವಿಧ ಹುಸಿವೇಷ ಹೊತ್ತು ಎದೆಯಲ್ಲಿ ಅಧಿಪತ್ಯದ ನಂಜು ತುಂಬಿಕೊಂಡು ನಂಬಿದ ಜನರನ್ನು ನಯವಾಗಿ ವಂಚಿಸುತ್ತದೆ.

ನಯವಾಗಿ ವಂಚಿಸುವ ನವಅಸ್ತಿತ್ವವಾದದ ಜಾಗತೀಕರಣದಿಂದ ವಿವಿಧ ಪರಿವೇಷ ಹೊತ್ತು ಬರುವ ಶೋಷಕ ಸಂಸ್ಕೃತಿಯನ್ನು ಎದುರಿಸಲು ತುಂಬಾ ತಾಳ್ಮೆ, ಸಹನೆ, ಜಾಣತನ, ಬಹುಮುಖಿ ಅರಿವು ಅಗತ್ಯ. ಅದನ್ನು ಸಾಧಿಸಿ ತೋರುವ ಸಾಧ್ಯತೆಯಾಗಿ ಜಾಣ ಅಜ್ಜಿಯ ಜೀವನ ವಿವೇಕ ಮಾರ್ಗದೋರುತ್ತದೆ. ಜನತಾ ನ್ಯಾಯಾಲಯದಲ್ಲಿ ಅಜ್ಜಿಯು ಮಾಡುವ ವಾದವು ಜಾಗತೀಕರಣವನ್ನು ಇಕ್ಕಿ ಮೆಟ್ಟುತ್ತದೆ. ಇಲ್ಲಿ ಪುಸ್ತಕಗಳ ಓದು-ಬರಹ ಜ್ಞಾನವು ಸೋತು ಜನಜೀವನದ ಅನುಭವ ಮತ್ತು ವಿವೇಕಗಳು ಗೆಲ್ಲುತ್ತವೆ. ಅಜ್ಜಿಯಲ್ಲಿನ ಬೆರಗುಗೊಳಿಸುವ ಇಂಗ್ಲಿಷ್ ಭಾಷಾಪ್ರಜ್ಞೆಯು ತಕ್ಷಣಕ್ಕೆ ಕೃತ್ರಿಮ, ಭ್ರಾಮಕ ಮತ್ತು ಅಸಂಗತವಾದುದು ಎನಿಸಿಬಿಡಬಹುದು. ಆದರೆ ಈ ಕಲ್ಪನೆಯಲ್ಲಿನ ಅಜ್ಜಿಯ ಅಗಾಧ ಜೀವನಾನುಭವವನ್ನು ಕಂಡುಕೊಂಡರೆ ಇಂದು ತಳವರ್ಗದವರೂ ಇತರರಂತೆ ಇಂಗ್ಲೀಷ್ ಕಲಿಯಬೇಕೆಂಬ, ಕಲಿಯಬಲ್ಲರೆಂಬ ಕ್ರಾಂತಿಗೆ ಸ್ಫೂರ್ತಿಯಾಗುತ್ತದೆ. ಆದ್ದರಿಂದ ದೇಶಭಾಷೆಗಳನ್ನು ಹಾಗೂ ತಳಸಮುದಾಯಗಳನ್ನು ದುರ್ಬಲಗೊಳಿಸಲು ಅಂಚುಅಂಚಲ್ಲೂ ಸಂಚುಹಾಕುತ್ತಿರುವ ಸಂಸ್ಕೃತ, ಇಂಗ್ಲೀಷ್‌ಗಳ ಏಕಾತ್ಮಕತೆಯನ್ನು ಸವಾಲಾಗಿ ಸ್ವೀಕರಿಸಿ ಸ್ಥಳೀಯತೆಯ ಅಸ್ಮಿತೆ (Indigenous Identitiy)ಯನ್ನು ಒಳಗೊಳ್ಳುವ ಮೂಲಕ ವಿಶ್ವಾತ್ಮಕತೆ (Universality)ಯನ್ನು ಸಾಧಿಸುವುದು ಶಕ್ತವಾದುದು. ಹೀಗಾಗಿಯೇ ಅಕಾಡೆಮಿಕ್ ಅಲ್ಲದ ಈ ನೆಲದ ವಿದ್ಯಾ ಪ್ರತಿನಿಧಿಯಾದ ಅಜ್ಜಿಯ ಭಾಷಾಸಂಘರ್ಷವು ಜಾಣತನ, ಬಾಳಿನ ಅನುಭವ ಹಾಗೂ ಯಾಜಮಾನ್ಯ ವಿರೋಧಿ ಕ್ರಾಂತಿಬದ್ಧತೆಯ ರೂಪಕಗಳಾಗಿ ನಮಗೆ ಗೋಚರಿಸುತ್ತವೆ. ಗ್ಯಾಟ್ ವಿರುದ್ಧ ಅಜ್ಜಿ ಹೇಳುವ, 'ಗೇಟು, ಗೇಟು ಅಂತ ಒಡ್ಕೋತದೆ. ವಸಿ ಕರ್ಕೊಂಡೋಗಿ ಗೇಟ್ ವೇ ಆಫ್ ಇಂಡಿಯಾ ಅಗ್ಗಿಟ್ಟು'(ನಾಯಿತಿಪ್ಪ; ಪುಟ.೫೯) ಎಂಬ ಮಾತು ಅತ್ಯಂತ ಕ್ರಾಂತಿಕಾರಕವೂ, ಈ ನೆಲದ ವಿವೇಕದ ವಿಶ್ವಾಸವೂ ಆದುದಾಗಿದೆ. ಅಲ್ಲದೆ, ಈ ಹೊತ್ತಿನ ಜನಪರ ಹೋರಾಟಗಳ ಪ್ರಜ್ಞಾಪ್ರಕ್ರಿಯೆಯಲ್ಲಿ ಸಾಂಸ್ಕೃತಿಕವಾಗಿ ಒಳಗೊಳ್ಳುವ ಒತ್ತಾಸೆಯೂ ಆಗಿದೆ.

ಇಂದು ತಳಸಮುದಾಯಗಳೊಂದಿಗೆ ಎಲ್ಲರೂ ಕೂಡಿ ಬದುಕಬೇಕಾದ ಸಹಬಾಳ್ವೆಯ 'ಸಾಂಸ್ಕೃತಿಕ ಒಳಗೊಳ್ಳುವಿಕೆ'ಯು ಕುಂಠಿತಗೊಳ್ಳುತ್ತಿದೆ. ಬ್ರಾಹ್ಮಣ್ಯೀಕರಣ ಮತ್ತು ಜಾಗತೀಕರಣಗಳು ಒಂದರೊಳಗೊಂದು ಕಾಲೂರಿ ನವಅಸ್ತಿತ್ವವಾದದ ಪರಿವೇಷ ಹೊತ್ತು ಮತ್ತೆ ಮತ್ತೆ ತುಳಿಯಲೆತ್ನಿಸುತ್ತಿವೆ. ವಿಶೇಷ ಆರ್ಥಿಕವಲಯಗಳು ನೆಲವನ್ನು ನುಂಗಿ ನೀರು ಕುಡಿದು ರೈತರನ್ನು ಗೋಳಿಗೆ ದೂಡುತ್ತಿವೆ. ವಿದ್ಯಾಲಯಗಳು ಮತಾಲಯ, ಸ್ವಾರ್ಥಾಲಯಗಳಾಗಿ ಮೆರೆಹಾಡುತ್ತಿವೆ. ನಮ್ಮನ್ನು ಕಾಣುವ ಮಾತು ಕೊಟ್ಟ ಪ್ರಭುತ್ವವು ನಮ್ಮಲ್ಲಿ ವಿವಿಧ ಭಯೋತ್ಪಾದನೆಗಳಿಗೆ ಕಾರಣವಾಗುತ್ತದೆ. ಕಪ್ಪು-ಬಿಳುಪಿನಂತಿದ್ದ ಸ್ವಾರ್ಥ, ಸೇವೆಗಳು ಬಹುವರ್ಣದಲ್ಲಿ ಕಂಗೊಳಿಸುತ್ತಿವೆ. 'ಸಾಂಸ್ಕೃತಿಕ ಹೊರದಬ್ಬುವಿಕೆ'ಯು ವಿಜೃಂಭಿಸುತ್ತಿದೆ. "ನಮ್ಮ ಗ್ರಾಮಗಳು ಗ್ರಾಮಗಳಾಗಿ ಉಳಿಯಲಾರವೆಂಬ ಭೀತಿ ಆವರಿಸಿದೆ. ಆಧುನಿಕತೆ ತನ್ಮೂಲಕ ತಂತ್ರಜ್ಞಾನ, ಮಾಧ್ಯಮಗಳ ಪ್ರವೇಶದಿಂದ ಗ್ರಾಮೀಣ ಸಂಸ್ಕೃತಿಯ ಜಾಗದಲ್ಲಿ ಪಟ್ಟಣ ಸಂಸ್ಕೃತಿ ಮನೆ ಮಾಡುತ್ತಿದೆ. ಗ್ರಾಮ ಮತ್ತು ಪಟ್ಟಣಗಳೆರಡೂ ಹೇಗೆ ಹೇಗೋ ಸೇರಿಕೊಂಡ ಅಸಂತುಲಿತ ಸಂದರ್ಭ ಒದಗಿದೆ. ಪ್ರತಿ ಹಳ್ಳಿಯೂ ಉಪನಗರ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತಿದೆ... ಆರ್ಥಿಕ ಸಮಾನತೆ, ಜೀವನ ಮಟ್ಟದ ಅಂತರ, ಮಾರುಕಟ್ಟೆಯ ಆಳುವಿಕೆ, ಮಾಧ್ಯಮಗಳಿಗಾಗಿ ನಿತ್ಯ ನಡಾವಳಿಗಳನ್ನು ಹೊಂದಿಸಿಕೊಳ್ಳುವ ಮನೋಭಾವ, ಆದರ್ಶಗಳ ಹೆಣಗುವಿಕೆ ಇವೆಲ್ಲ ನಾವು ಮೂಲತಃ ಸತ್ಯವಂತರಾಗದಿದ್ದರೂ ಪರವಾಯಿಲ್ಲ, ಆದರೆ ರಾಜಕೀಯ ಸತ್ಯ (Politically correct) ಆಗಿದ್ದರೆ ಸಾಕು ಎಂಬ 'ಜೀವನಸೂತ್ರ' ರೂಪಿಸುತ್ತಿವೆ. ಇದು ನವ ಅಸ್ತಿತ್ವವಾದ (Neo existantialism). ಜೀವನದ ಬೆರಗು ನಾಶವಾಗುತ್ತಿರುವಾಗ ಮನುಷ್ಯ-ಮನುಷ್ಯರ ನಡುವಿನ ನಂಬಿಕೆಗಳು ಅಲುಗಾಡುತ್ತಿವೆ. ಇದನ್ನು ಆಧುನಿಕತೆಯಿಂದಲೇ ಎದುರಿಸಬೇಕೆನ್ನುವ ಶಿಷ್ಟ ಮನಸುಗಳು 'ಕಾಸ್ಮೋಪಾಲಿಟನ್ ಸಂಸ್ಕೃತಿ'ಯ ವಕ್ತಾರರಾಗುತ್ತಿದ್ದಾರೆ"(ಜಿ.ಕೆ.ರವೀಂದ್ರಕುಮಾರ್; ಪುನರ್ಭವ; ಕಿಟಕಿ ಪ್ರಕಾಶನ, ಮೈಸೂರು; ೨೦೦೯; ಪುಟ.೨೪-೨೫). ಇಂಥ ವಿಷಮ ವರ್ತಮಾನವನ್ನು ಅದ್ಭುತ ರೂಪಕಗಳುಳ್ಳ ಜನಪದ ಕಥಾನಕಗಳ ಮೂಲಕ ಹಿಡಿದಿಟ್ಟು 'ನಾಯಿತಿಪ್ಪ' ನಾಟಕವನ್ನು ಸೃಜಿಸಿದ್ದಾರೆ. ಇದು ಬೆಳೆಯುವ ಸಿರಿಯನ್ನು ಮೊಳಕೆಯಲ್ಲೇ ಕಾಪಾಡಬೇಕಿರುವ ನಿಟ್ಟಿನಲ್ಲಿ ಎಳೆಯರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಚಿತಗೊಂಡ ನಾಟಕವಾದರೂ ಎಳೆಯರಿಗೂ ಹಾಗೂ ಎಳೆಯರಿಂದ ಹಿರಿಯರಿಗೂ ನೆಲಸಂಸ್ಕೃತಿಯು ಎದುರಾದ ಸಂಘರ್ಷಗಳನ್ನು ತಿಳಿಸಿ ಎಚ್ಚರಿಸುವ ಉತ್ತಮ ನಾಟಕವಾಗಿದೆ.

ಇಂದು ಕೇವಲ ವ್ಯಾವಹಾರಿಕವಾದ ಗ್ಯಾಟ್, ಪೇಟೆಂಟ್ ಮತ್ತು ಮಾನಸಿಕ ದಾರಿದ್ರ್ಯವಾದ ಅಸ್ಪೃಶ್ಯತೆ ಮುಂತಾದ ಸಮಸ್ಯೆಗಳನ್ನು ಅರಿತುಕೊಂಡು ಮಾನವೀಯ ಬದುಕನ್ನು ನಿರೂಪಿಸಿಕೊಳ್ಳುವ ನೆಲದ ವಿವೇಕವನ್ನು ಈ ನಾಟಕ ಪ್ರಸಾರ ಮಾಡುತ್ತದೆ. ಮಕ್ಕಳ ನಾಟಕವೆಂಬ ಪ್ರಕಾರದಲ್ಲಿದ್ದರೂ ಮಹತ್ವಪೂರ್ಣ ಸಂಗತಿಗಳ ಅರಿವನ್ನು ಮೂಡಿಸಬೇಕಾದ ಬದ್ಧತೆಯಲ್ಲಿ ಸಬಾಲ್ಟರ್ನ್ ಜನಪದ ಕಥನ ತಂತ್ರಗಳ ಮೂಲಕ ನಾಟಕವು ನಿರೂಪಿತವಾಗಿದೆ. ಇಲ್ಲಿ ಸಾಹಿತ್ಯದ ಪ್ರಕಾರವು ಮುಖ್ಯವೂ ಅಮುಖ್ಯವೂ ಆಗಿ ಸಾಂಸ್ಕೃತಿಕ ಯಾಜಮಾನ್ಯದ ಶೋಷಣೆಯ ಪ್ರತಿರೋಧದ ತಳವರ್ಗಗಳ ಜೀವನವಿವೇಕದ ಜಾಡುಗಳನ್ನು ಹಾಗೂ ಅಸ್ತಿತ್ವ ಸಂಕಥನವನ್ನು ಬಿಡಿಸಿಡಲು ಪ್ರಯತ್ನಿಸಿರುವುದು ಸಬಾಲ್ಟರ್ನ್ ದೇಸೀಯತೆಯ ಸೃಜನಶೀಲತೆಗೆ ಒಂದು ಉತ್ತಮವಾದ ಮಾದರಿ.

ಆಕರ ಗ್ರಂಥಗಳು

೧. ನಾಯಿತಿಪ್ಪ : ಕೋಟಿಗಾನಹಳ್ಳಿ ರಾಮಯ್ಯ; ವಿಶ್ವಾಲಯ ಪ್ರಕಾಶನ, ಬೆಂಗಳೂರು; ೧೯೯೮.

೨. ಜಾನಪದ ತತ್ವಗಳು: ಸಂ. ಪ್ರೊ. ಆರ್ವಿಯಸ್ ಸುಂದರಂ, ಪ್ರೊ. ಎನ್.ಎಸ್. ತಾರಾನಾಥ್, ಪ್ರಸಾರಾಂಗ, ಮೈಸೂರು ವಿವಿ, ಮೈಸೂರು; ೧೯೯೯.

೩. ವಸಾಹತೋತ್ತರ ಚಿಂತನೆ; ಡಾ. ಸಿ.ಎನ್. ರಾಮಚಂದ್ರನ್; ಕ.ಸಾ.ಅ, ಬೆಂಗಳೂರು; ೨೦೦೨.

೪. ರಂಗರೂಪಕ; ಲಿಂಗದೇವರು ಹಳೆಮನೆ; ನಿರಂತರ ಪ್ರಕಾಶನ, ಮೈಸೂರು; ೨೦೦೯.

೫. ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ; ವಿಜಯ್ ಪೂಣಚ್ಚ ತಂಬಂಡ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ; ೨೦೦೯.

೬. ಪುನರ್ಭವ; ಜಿ.ಕೆ. ರವೀಂದ್ರಕುಮಾರ್; ಕಿಟಕಿ ಪ್ರಕಾಶನ, ಮೈಸೂರು; ೨೦೦೯.

೭. ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ; ಡಾ. ರಂಗನಾಥ ಕಂಟನಕುಂಟೆ; ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು; ೨೦೦೯.

೮. ಸಾಮಾಜಿಕ ಚಳವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ; ಡಾ.ಎ.ಮುನಿಶಾಮಪ್ಪ; ಕಾಲ ಪ್ರಕಾಶನ, ಬೆಂಗಳೂರು; ೨೦೦೯.

೯. ಸಂಸ್ಕೃತಿ ಶೋಧ-ಅರುಹು ಕುರುಹು ವಿಶೇಷ ಸಂಚಿಕೆ; ಕನ್ನಡ ತ್ರೈಮಾಸಿಕ, ಸಂ. ಎಚ್.ಎಸ್. ಉಮೇಶ್; ಮೈಸೂರು, ಜನವರಿ-ಮಾರ್ಚ್ ೨೦೧೦.

೧೦. ಸಾಹಿತ್ಯ ಮತ್ತು ಸಾಹಿತ್ಯದಾಚೆಗೆ; ಆರ್. ಚಲಪತಿ; ಸಖಿ ಪ್ರಕಾಶನ, ಹೊಸಪೇಟೆ, ೨೦೧೦.

೧೧. ಪ್ರತಿಸಂಸ್ಕೃತಿ: ರಹಮತ್ ತರೀಕೆರೆ; ಅಭಿನವ, ಬೆಂಗಳೂರು; ೪ನೇ ಮುದ್ರಣ ೨೦೧೧.

೧೨. ಐಡೆಂಟಿಟಿ ಹಾಗೂ ಕಾಲಮಾನದ ಚಿಂತನೆಗಳು: ಡಾ. ಮುಜಾಫರ್ ಅಸ್ಸಾದಿ: ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು: ೨೦೧೧.

೧೩. ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಅವರ ಪ್ರಭಾವ; ಡಾ. ಅನಸೂಯ ಕಾಂಬಳೆ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; ೨೦೧೧.

೧೪. ಸಬಾಲ್ಟರ್ನ್ ಓದು-ಅರುಹು ಕುರುಹು ವಿಶೇಷ ಸಂಚಿಕೆ; ಕನ್ನಡ ತ್ರೈಮಾಸಿಕ, ಸಂ. ಡಾ. ಮೇಟಿ ಮಲ್ಲಿಕಾರ್ಜುನ; ಮೈಸೂರು, ಜನವರಿ-ಮಾರ್ಚ್ ೨೦೧೩.

□□□

೬. ಅಂಕಣ ಸಾಹಿತ್ಯಕ್ಕೆ ಎಚ್ಚೆಸ್ಕೆ ಅವರ ಕೊಡುಗೆ

– ವನಿತ ಎಂ.ವಿ

ಕನ್ನಡ ಸಾರಸ್ವತ ಲೋಕದಲ್ಲಿ ಎಚ್ಚೆಸ್ಕೆ ಎಂದೇ ಪ್ರಸಿದ್ಧರಾಗಿರುವ ಹಳೆಯೂರು ಶ್ರೀನಿವಾಸ ಅಯ್ಯಂಗಾರ್ ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಎಡತೊರೆ ತಾಲ್ಲೂಕಿನ ಚುಂಚನಕಟ್ಟೆಯ ಬಳಿಯ ಹಳೆಯೂರಿನಲ್ಲಿ ೧೯೨೦ ಆಗಸ್ಟ್ ೨೯ರಂದು ಶ್ರೀನಿವಾಸ್ ಅಯ್ಯಂಗಾರ್ ಮತ್ತು ಅಲಮೇಲಮ್ಮ ಎಂಬ ದಂಪತಿಗಳಿಗೆ ಮಗನಾಗಿ ಜನಿಸಿದರು. ನಮ್ಮ ನಾಡಿನ ಅಗ್ರಮಾನ್ಯ ಲೇಖಕರಲ್ಲಿ ಒಬ್ಬರಾದ ಅವರು ಸಮದರ್ಶಿಯಾಗಿ ಕನ್ನಡ ಸಾಹಿತ್ಯದ ತೇರನ್ನು ನಿಶ್ಚಲ ಮನೋಭಾವದಿಂದ ಎಳೆದಿರುವ ನಿಶ್ಕಾಮ ಜೀವಿ.

ಕಡಿಮೆ ಘಟಿಗಳಲ್ಲಿ ಗಹನ ಚಿಂತನೆಯ ಗಾನದಾಟಿಯಲ್ಲಿ ಶಬ್ಧ ಮುತ್ತುಗಳ ನೇವ ಮಾಂತ್ರಿಕರು ಎನಿಸಿಕೊಂಡಿರುವ ಎಚ್ಚೆಸ್ಕೆ .ಅವರು ಸೃಜನಶೀಲ ಮತ್ತು ಸೃಜನೇತರ ಬರವಣಿಗೆಗಳೆರಡರಲ್ಲೂ ಅವರು ನಿಷ್ಣಾತರು. ವಾಣಿಜ್ಯ ಅರ್ಥಶಾಸ್ತ್ರಗಳಂತಹ ವಿಷಯಗಳಲ್ಲಿ ಶಾಸ್ತ್ರೀಯವಾಗಿ ಬರೆಯಬಲ್ಲವರಂತೆ ವ್ಯಕ್ತಿಚಿತ್ರಗಳನ್ನು ನಾಜೂಕಾಗಿ ಬಿಡಿಸಬಲ್ಲವರು. ಸಾಹಿತ್ಯಾಸಕ್ತಿ ಅವರ ಹುಟ್ಟುಗುಣವಾಗಿ ಪತ್ರಿಕಾ ಸಹಯೋಗ ಅವರ ಬದುಕಿನ ಭಾಗವಾಗಿದ್ದಂತೆ ತೋರುತ್ತದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೆ ಆ ಕಾಲದ ಪ್ರತಿಷ್ಠೆಯ ತಾಯಿನಾಡು ಪತ್ರಿಕೆಯ ವಾತ್ಮೀಯದಾರರಾಗಿ ಮಿಂಚಿ ದಿವಾನ್ ಮಿರ್ಜಾ ಅವರ ಗಮನ ಸೆಳೆದದ್ದು ಸಾಮಾನ್ಯ ಸಂಗತಿಯಲ್ಲ. ಆಗಿನಿಂದಲೇ ಹಲವು ಪ್ರಸಿದ್ಧ ಪತ್ರಿಕೆಗಳು ಅವರ ಸಾಹಿತ್ಯ ಕಲಾ ಸಾಧನೆಯ ಗರಡಿಗಳಾಗುತ್ತವೆ. ಕವಿತೆ, ಕಥೆ, ಪತ್ತೇದಾರಿ, ಕಾದಂಬರಿಗಳ ಮೂಲಕ ಅವರ ಪ್ರತಿಭೆ ವಿಕಾಸಗೊಳ್ಳುತ್ತದೆ. ಸಾಹಿತ್ಯ ಜೀವನದ ಪ್ರಾರಂಭದಲ್ಲಿಯೇ ಅವರು ಬಿ.ಎಂ.ಶ್ರೀ., ವಿ.ಸೀ., ರಾಜರತ್ನಂ ಮೊದಲಾದ ಉದ್ದಾಮ ಸಾಹಿತಿಗಳ ಗಮನವನ್ನು ಸೆಳೆದವರು.

ಸಾಹಿತ್ಯ ಅವರ ಮೊದಲ ಒಲವು ಅದರ ಜೊತೆಯಲ್ಲಿಯೇ ಅರ್ಥಶಾಸ್ತ್ರದಲ್ಲಿ ಉನ್ನತ ಪದವಿಯನ್ನು ಪಡೆದು ಬನುಮಯ್ಯ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರವನ್ನು ಬೋಧಿಸುತ್ತ ಮೆಟ್ಟಿಲು ಮೆಟ್ಟಿಲಾಗಿ ಪ್ರಾಧ್ಯಾಪಕ ಪ್ರಾಚಾರ್ಯ ಪದವಿಗೇರುತ್ತಾರೆ; ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಬೋಧಕರಾಗುತ್ತಾರೆ. ಅದರ ಜೊತೆಯಲ್ಲಿಯೇ ಕಾಲೇಜಿನ ಉನ್ನತಿಗೆ ಹಾಗೂ ಯಶಸ್ಸಿಗೆ ಕಾರಣರಾಗುತ್ತಾರೆ. ಅನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಶ್ವಕೋಶದ ಸಂಪಾದಕರಲ್ಲೊಬ್ಬರಾಗಿ ಮಾದರಿ ವಿಶ್ವಕೋಶವನ್ನು ಸಿದ್ಧಪಡಿಸುವಲ್ಲಿ ಅದಕ್ಕೆ ವಿಶೇಷ ಮೌಲ್ಯವನ್ನು ಒದಗಿಸುವಲ್ಲಿ ಯಶಸ್ವಿಯಾಗುತ್ತಾರೆ. ಎಚ್ಚೆಸ್ಕೆಯವರು ಅಂಕಣ ಬರಹಗಾರರೆಂದೇ ಪ್ರಸಿದ್ಧಿ. ಅಷ್ಟರ ಮಟ್ಟಿಗೆ ಅವರಿಗೂ ಅಂಕಣ ಬರಹಕ್ಕೂ ನಂಟು ಬಹಳ ಕಾಲ ಅವರು ತಮ್ಮನ್ನು ಇದರಲ್ಲಿ ತೊಡಗಿಸಿಕೊಂಡವರು.

ಅಂಕಣ ಬರಹ ಕನ್ನಡದಲ್ಲಿ ಸುಮಾರು ಅರ್ಧಶತಮಾನದಷ್ಟು ಹಳೆಯದಾಗಿದ್ದರೂ ಆ ಹೆಸರು ಚಾಲ್ತಿಗೆ ಬಂದದ್ದು, ಜನಪ್ರಿಯವಾದದ್ದು ಇತ್ತೀಚಿನ ವರ್ಷಗಳಲ್ಲಿ. ಇಂಗ್ಲಿಷಿನಲ್ಲಿ ಯಾವುದನ್ನು 'ಕಾಲಮ್‌ರೈಟಿಂಗ್' ಎನ್ನುತ್ತಾರೋ ಅದರ ಕನ್ನಡ ರೂಪವೇ 'ಅಂಕಣ ಬರಹ'. ಅದನ್ನು ಬರೆಯುವವನನ್ನು ಕಾಲಮಿಸ್ಟ್ ಎಂದು ಕರೆಯುತ್ತಾರೆ. ಕಾಲಮಿಸ್ಟ್ ಎಂದರೆ ಅಂಕಣಕಾರ ಎಂದರ್ಥ. ವರ್ತಮಾನ ಪತ್ರಿಕೆಗೆ ಕ್ರಮವಾಗಿ ತನ್ನ ಹೆಸರಿನಲ್ಲಿ ಸಮಕಾಲೀನ ಸ್ಥಿತಿಗತಿಗಳನ್ನು ವ್ಯಾಖ್ಯಾನಿಸುವ ಸ್ಥಿರ ಶೀರ್ಷಿಕೆಯ ಲೇಖನ ಮಾಲೆಯನ್ನು ಬರೆಯುವವನು ಅಂಕಣಕಾರನೆಂದು ಬ್ರಿಟಾನಿಯಾ ವಿಶ್ವಕೋಶ ಹೇಳುತ್ತದೆ ಅದು ಅಂಕಣ ವೈವಿಧ್ಯವನ್ನು ವಿವರಿಸುತ್ತದೆ.

'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಅಂಕಣಕಾರ ಸ್ಪರ್ಶಿಸದ ಸ್ಪಂದಿಸದ ವಸ್ತು ವಿಷಯವೆ ಇಲ್ಲ ಎನ್ನಬಹುದು. ಪ್ರಪಂಚದ ಆಗು-ಹೋಗುಗಳು, ಸುತ್ತಲಿನ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು, ರಾಜಕೀಯ, ಆರ್ಥಿಕ ವಿದ್ಯಾಮಾನಗಳು ಪುರಾಣ ಇತಿಹಾಸದ ಘಟನಾವಳಿಗಳು ಇವೆಲ್ಲವುಗಳಿಗೂ ಓರ್ವ ಅಂಕಣಕಾರ ಸ್ಪಂದಿಸುತ್ತಾನೆ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರ ಬಗೆಗೆ ಮಹಾತ್ಮರ ಬಗೆಗೆ ಬರೆಯುತ್ತಾನೆ. ತನ್ನ ಸಂಪರ್ಕಕ್ಕೆ ಬಂದ ವ್ಯಕ್ತಿಗಳ ಕುರಿತು ಆತ್ಮೀಯವಾದ ಚಿತ್ರಣಗಳನ್ನು ಕೊಡುತ್ತಾನೆ. ಹರಟೆ ಹೊಡೆಯುತ್ತಾನೆ. ಪ್ರಬಂಧ ಕಟ್ಟುತ್ತಾನೆ, ಕಥೆ ಹೇಳುತ್ತಾನೆ, ಆತ್ಮಕಥೆ ಬರೆಯುತ್ತಾನೆ, ಭಾವ ಲಹರಿಯನ್ನು ಹರಿಸುತ್ತಾನೆ. ಹೀಗೆ ಸಾಹಿತ್ಯದ ಹೆಚ್ಚಿನೆಲ್ಲಾ ಪ್ರಕಾರಗಳೂ ಈ ಅಂಕಣ ಸಾಹಿತ್ಯದೊಳಗಡೆ ಸೇರಿಕೊಂಡಿರುತ್ತವೆ. ತನ್ನ ಬರವಣಿಗೆಯ ಮೂಲಕ ಓದುಗರಿಗೆ ಅಪೂರ್ವ ಮಾಹಿತಿಗಳನ್ನೊಳದಗಿಸಿಕೊಡುವ ಅವರನ್ನು ಚಿಂತನೆಗೆ ಹಚ್ಚುವ

ನಗಿಸುವ ಅವರ ಮನಸ್ಸನ್ನು ಅರಳಿಸುವ ಕೆಲಸವನ್ನು ಓರ್ವ ಅಂಕಣಕಾರ ಮಾಡುತ್ತಾನೆ. ಪತ್ರಿಕೆಯಲ್ಲಿ ಬರೆಯುವ ಒಬ್ಬ ಅಂಕಣಕಾರನಿಗೆ ಅದೇ ಪತ್ರಿಕೆಯ ಓರ್ವ ವರದಿಗಾರನಿಗಿಂತ ಹೆಚ್ಚಿನದಾದ ಸ್ವಾತಂತ್ರ್ಯವಿರುತ್ತದೆ.

ಅಂಕಣ ಸಾಹಿತ್ಯವೆಂಬುದು ಪತ್ರಿಕೆಯಷ್ಟೇ ಪ್ರಾಚೀನವಾದುದು ದೈನಿಕ ಹಾಗೂ ನಿಯತಕಾಲಿಕೆಗಳ ಸಂಪಾದಕೀಯಗಳ ಅವುಗಳ ನಿಗದಿತ ಜಾಗದಲ್ಲಿ ನಿರ್ದಿಷ್ಟ ಶೀರ್ಷಿಕೆಗಳಡಿಯಲ್ಲಿ ನಿಯತವಾಗಿ ಪ್ರಕಟವಾಗುವ ಬಿಡಿ ಬರಹಗಳು ಇವೆಲ್ಲಾ ಅಂಕಣ ಸಾಹಿತ್ಯವೆನಿಸಿಕೊಳ್ಳುತ್ತವೆ. ಇಲ್ಲಿ ಮುಖ್ಯ ಶೀರ್ಷಿಕೆ ಒಂದೇ ಇದ್ದರೂ ವಿಷಯ ಮಾತ್ರ ಲೇಖನದಿಂದ ಲೇಖನಕ್ಕೆ ಬದಲಾಗುತ್ತಿರುತ್ತದೆ. ಈ ಅರ್ಥದಲ್ಲಿ ಇವು ಪತ್ರಿಕೆಯ ಧಾರವಾಹಿಗಳಿಗಿಂತ ಭಿನ್ನವಾಗಿರುತ್ತವೆ.

ಇತ್ತೀಚಿನ ದಶಕಗಳ ವರೆಗೆ ಅಂಕಣ ಬರಹಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಗೋಜಿಗೆ ಯಾರು ಹೋಗುತ್ತಿರಲಿಲ್ಲ. ಹಾಗಾಗಿ ಅವುಗಳ ಸಾಹಿತ್ಯಿಕ ಮೌಲ್ಯದ ಬಗೆಗೂ ಯಾರು ತಲೆಕೆಡಿಸಿಕೊಂಡಿರಲಿಲ್ಲ. ಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತಿದ್ದ ಸಮಕಾಲೀನ ಸಂದರ್ಭಗಳಿಗಷ್ಟೇ ಅಂಕಣ ಬರಹಗಳು ಪ್ರಸ್ತುತ ಅದರಿಂದಾಚೆಗಿನ ಸಾಹಿತ್ಯಿಕ ಮೌಲ್ಯ ಅವುಗಳಿಗಿಲ್ಲ ಎಂಬ ಭಾವನೆಯೇ ಸಾಮಾನ್ಯವಾಗಿತ್ತು. ಆದರೆ ಅಂತಹ ಬರಹಗಳು ೧೯೮೦-೯೦ರ ದಶಕದಲ್ಲಿ ಅಂಕಣ ಸಾಹಿತ್ಯದ ಸುವರ್ಣಯುಗವೆಂದೇ ಕರೆಯಿಸಿಕೊಳ್ಳುವಷ್ಟರ ಮಟ್ಟಿಗೆ ಮಹತ್ವವನ್ನು ಪಡೆದುಕೊಂಡವು. ಅಂಕಣ ಸಾಹಿತ್ಯ ಕನ್ನಡ ಸಾಹಿತ್ಯ ಪ್ರಕಾರಗಳಲ್ಲೊಂದಾಗಿ ಗುರುತಿಸಲ್ಪಟ್ಟಿದ್ದು ಹಾಮಾನಾ ಅವರ ಅಂಕಣಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದಾಗ. ಒಂದಲ್ಲ ಒಂದು ರೀತಿಯಲ್ಲಿ ಜನಮನವನ್ನು ಸೂರೆಗೊಂಡಿರುವ ಅಂಕಣ ಬರಹದ ವ್ಯಾಪ್ತಿ ತುಂಬಾ ವಿಶಾಲವಾದದ್ದು.

ಅಂಕಣ ಸಾಹಿತ್ಯವೆಂದಾಕ್ಷಣ ನಮಗೆ ನೆನಪಿಗೆ ಬರುವ ಪ್ರಮುಖ ಅಂಕಣಕಾರರುಗಳಲ್ಲಿ ಎಚ್ಚೆಸ್ಕೆಯು ಒಬ್ಬರು. ಸುಮಾರು ೬೦ ವರ್ಷಗಳಷ್ಟು ದೀರ್ಘಕಾಲ ವಿವಿಧ ಪತ್ರಿಕೆಗಳಾದ ಕನ್ನಡ ನುಡಿ, ದೇಶಬಂಧು, ವಿಶ್ವಕರ್ನಾಟಕ, ಛಾಯ, ಪ್ರಜಾವಾಣಿ, ಸುಧಾ, ಸಂಯುಕ್ತ ಕರ್ನಾಟಕ, ತರಂಗ, ಮೈಸೂರು ಮಿತ್ರ, ವಿವೇಕ ಸಂಪದಗಳಂತಹ ಕನ್ನಡ ಪತ್ರಿಕೆಗಳಲ್ಲದೆ ಸ್ಟಾರ್ ಆಫ್ ಮೈಸೂರು ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿಯು ಅಂಕಣ ಬರಹಗಳನ್ನು ಬರೆಯುತ್ತಾ ಆ ಬರಹವನ್ನು ಸೃಜನಶೀಲವಾಗಿಸ ಹೊರಟವರು. 'ಸುಧಾ' ವಾರಪತ್ರಿಕೆಯಲ್ಲಿ ಅವರು ಬರೆಯುವಂತಿದ್ದ 'ವಾರದ ವ್ಯಕ್ತಿಗಳು' ಹಾಗೂ 'ವ್ಯಕ್ತಿ ವಿಷಯ' ತುಂಬಾ ಪ್ರಸಿದ್ಧವಾಗಿದ್ದವು. ಚಿಕ್ಕ ಚೊಕ್ಕ ವಾಕ್ಯಗಳು ಅವರ ಅಂಕಣಗಳಲ್ಲಿ ಎದ್ದು ಕಾಣುವ

ಗುಣ. ಕ್ರಿಯಾಪದಗಳನ್ನು ಕಳಚಿಕೊಂಡಂತಿರುವ ಅವರ ಕೆಲವು ವಾಕ್ಯಗಳು ವಿಶಿಷ್ಟವಾಗಿವೆ. 'ವ್ಯಕ್ತಿವಿಷಯ'ದ ಚಿಕ್ಕ ಅಂಕಣದಲ್ಲಿ ಅವರು ವ್ಯಕ್ತಿಯ ಇಡಿ ವ್ಯಕ್ತಿತ್ವವನವನ್ನೆ ಹಿಡಿದಿಡುವ ಪರಿ ನಿಜಕ್ಕೂ ಅನನ್ಯವಾದುದು.

ಎಚ್ಚೆಸ್ಕೆ ಅವರು ತಮ್ಮ ಪತ್ರಿಕಾ ವ್ಯವಸಾಯದಲ್ಲಿ ಹಲವು ಬಗೆಯ ಅಂಕಣ ಲೇಖನಗಳನ್ನು ಬರೆದಿದ್ದಾರೆ. ಅವರ ಅಂಕಣ ಸಾಹಿತ್ಯ ರಾಶಿಯಲ್ಲಿ ಸುಂದರವಾದ ವ್ಯಕ್ತಿ ಚಿತ್ರಗಳಿವೆ. ಆರ್ಥಿಕ ಚಿಂತನೆಗಳಿವೆ. ರಾಜಕೀಯ ಚಿಂತನೆಗಳಿವೆ. ಶೈಕ್ಷಣಿಕ ಚಿಂತನೆಗಳಿವೆ ಹಾಗೂ ಕೃತಿ ವಿಮರ್ಶೆಗಳಿವೆ. ಅವುಗಳಲ್ಲಿ ಅವರ ವ್ಯಕ್ತಿ ಚಿತ್ರಗಳು ಆಕರ್ಷಣೆಯವಾದವುಗಳು.

ವ್ಯಕ್ತಿಚಿತ್ರಗಳು

ಎಚ್ಚೆಸ್ಕೆ ಅವರ ವ್ಯಕ್ತಿಚಿತ್ರಗಳ ಅಂಕಣಗಳು ಕಾವ್ಯಮಯವಾಗಿರುತ್ತವೆ. ಅವರ ಇತರ ಅಂಕಣಗಳಲೆಲ್ಲ ವ್ಯಕ್ತಿಚಿತ್ರಗಳು ಆಕರ್ಷಣೀಯವಾದವುಗಳು. ಇದರಲ್ಲಿ ದೇಶಿಯರ ವಿದೇಶಿಯರ ಚಿತ್ರಗಳಿವೆ. ಸಾಹಿತಿ. ದಾರ್ಶನಿಕ, ವಿಜ್ಞಾನಿ, ರಾಜಕಾರಣಿ, ಕಲಾಕಾರ. ಹೋರಾಟಗಾರ. ಪತ್ರಕರ್ತರ ಚಿತ್ರಗಳಿವೆ. ಪ್ರಾಚೀನ ಅರ್ವಾಚೀನರ ಚಿತ್ರಗಳಿವೆ ಇವೆಲ್ಲವುಗಳನ್ನು ತುಂಬು ಮನಸ್ಸಿನಿಂದ ಕಡೆದಂತವುಗಳು. ಕುಶಲ ಕಲೆಗಳಂತೆ ರೂಪುಗೊಂಡಿವೆ. ಈ ವ್ಯಕ್ತಿಚಿತ್ರಗಳು ಆಯಾ ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ಚಿತ್ರಗಳಲ್ಲ. ಅಂಥದ್ದು ಇಲ್ಲಿ ಸಾಧ್ಯವೂ ಇಲ್ಲ. ಆಯಾ ವ್ಯಕ್ತಿಯ ಯಾವುದೋ ಒಂದು ಮುಖದ ಒಲವಿನ ಅಥವಾ ನಿಲುವಿನ ಮೇಲೆ ಒತ್ತು ಕೊಟ್ಟಂಥವು. ಇವೆಲ್ಲವೂ ರೇಖಾ ಚಿತ್ರಗಳಂತೆ ಕಂಡರೂ, ಓದುಗನ ಮನಸ್ಸನ್ನು ಸಮಗ್ರ ಚಿತ್ರಗಳಂತೆಯೇ ತುಂಬಿಕೊಳ್ಳುತ್ತವೆ. ವ್ಯಕ್ತಿಯ ಭೌತಿಕ–ಬೌದ್ಧಿಕ–ಆಧ್ಯಾತ್ಮಿಕ ಚಿತ್ರವನ್ನೆಲ್ಲ ಒಮ್ಮೆಲೆ ಕಟ್ಟಿಕೊಡುವ ಕೆಲಸವನ್ನು ಇಲ್ಲಿಯ ವ್ಯಕ್ತಿ ಚಿತ್ರಗಳು ಮಾಡುತ್ತವೆ. ಆಕಾಶವನ್ನೆಲ್ಲ ಸೆರೆ ಹಿಡಿಯಲು ಆಕಾಶದಗಲದ ಕ್ಯಾಮರವೇನೂ ಬೇಕಾಗುವುದಿಲ್ಲ; ಇರುವುದೇ ಸಾಕಾಗುತ್ತದೆ. ಇಲ್ಲಿಯ ವ್ಯಕ್ತಿ ಚಿತ್ರಗಳು ಇದರಿಂದ ಹೊರತಾಗಿಲ್ಲ. ಎಚ್ಚೆಸ್ಕೆ ಅವರು ಎಷ್ಟೊ ಬಾರಿ ವ್ಯಕ್ತಿಗಳ ಹೆಸರನ್ನು ಕೊಡುವುದಿಲ್ಲ ಅವರ ಸ್ವಭಾವ ಧೋರಣೆ ಸಿದ್ಧಿ ಸಾಧನೆಗಳಿಂದಲೇ ಚಿತ್ರಿಸುತ್ತಾರೆ. ಅವರು ಬರೆಯುತ್ತಿದ್ದ ವ್ಯಕ್ತಿ ಚಿತ್ರಗಳು ಪುಸ್ತಕ ರೂಪದಲ್ಲಿ ಲಭ್ಯವಾಗಿವೆ. ಮೊದಮೊದಲು ಆಯ್ದ ವ್ಯಕ್ತಿ ಚಿತ್ರಗಳು ಪ್ರಕಟವಾಗಿದ್ದರೂ ಅವು ಸಮಗ್ರವಾಗಿ ಪ್ರಕಟಗೊಂಡಿದ್ದು ಇತ್ತೀಚೆಗೆ.

ಇವರ ವ್ಯಕ್ತಿಚಿತ್ರಗಳಲ್ಲಿ ರಾಜ್ಯ, ರಾಷ್ಟ್ರ ಮತ್ತು ವಿಶ್ವರಂಗಗಳಲ್ಲಿ ಮೆರೆದು ಸಾಧನೆ ಮಾಡಿ ಗೆದ್ದ ಗೆಲ್ಲದಿದ್ದರೂ ಭವ್ಯವಾದ ಸೋಲಿನಲ್ಲೂ ತಮ್ಮ ವ್ಯಕ್ತಿತ್ವವನ್ನು ಸಾರಿದ ಧೂಮಕೇತುವಿನಂತೆ ವ್ಯೋಮ ಪಟವನ್ನೆಲ್ಲ ಗುಡುಗಿಸಿ ಮರೆಯಾದ ವ್ಯಕ್ತಿಚಿತ್ರಗಳಿವೆ.

ಆರ್ಥಿಕ ಚಿಂತನೆಗಳು

ಎಚ್ಚೆಸ್ಕೆ ಅವರು ಆರ್ಥಿಕ ಅಭ್ಯುದಯ ಕುರಿತ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಜಾವಾಣಿ ಪತ್ರಿಕೆಯಲ್ಲಿ 'ಆರ್ಥಿಕ ಸಮೀಕ್ಷೆ' ಎಂಬ ಅಂಕಣವನ್ನು ಬರೆಯುತ್ತಿದ್ದರು. ಜಾಗತೀಕರಣ ತನ್ನ ಸಹಸ್ರ ಬಾಹುಗಳನ್ನು ಎಲ್ಲ ದಿಕ್ಕುಗಳಲ್ಲೂ ಚಾಚುತ್ತಿರುವುದರಿಂದ ಅದು ಎಲ್ಲವನ್ನೂ ತನ್ನ ಹತ್ತಿರ ಸೆಳೆದುಕೊಳ್ಳುತ್ತಿದೆ. ಇದರಿಂದ ಸ್ವೀಕೃತ ವಿಚಾರ ವ್ಯವಸ್ಥೆಗಳು ಬುಡಮೇಲಾಗುತ್ತಿವೆ. ಇದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯಬಹುದು ಏನೇನಾಗಬಹುದು ಎಂಬ ಆತಂಕ ಇಂದು ತೀವ್ರವಾಗಿ ಬಾಧಿಸುತ್ತಿದೆ. ಎಚ್ಚೆಸ್ಕೆ ಅವರು ತಮ್ಮ ಅಂಕಣದಲ್ಲಿ ವೈದ್ಯ ಸೇವೆ ಸೇವೆಯೇ, ಜಾಗತೀಕರಣ ಮತ್ತು ಬಡತನ, ಉಳ್ಳವರು ಇಲ್ಲದವರು, ಭೂಮಿಗೆ ಬರಲಿದೆ ಭೀಕರ ಬರ ಹೀಗೆ ಮುಂತಾದ ವಿಚಾರಗಳನ್ನು ಕುರಿತಂತೆ ಚಿಂತಿಸಿ ಅವುಗಳಲ್ಲಿ ಸರಿಯಾದ ಮಾರ್ಗ ಯಾವುದೆಂಬುದನ್ನು ಪ್ರತಿಯೊಬ್ಬರು ಕಂಡುಕೊಳ್ಳುವಂತೆ ಮಾಡಿದ್ದಾರೆ. ಪ್ರತಿಯೊಬ್ಬರ ನಿತ್ಯ ಜೀವನದ ಮೇಲೆ ಆರ್ಥಿಕ ವಿದ್ಯಾಮಾನಗಳು ತುಂಬಾ ಪರಿಣಾಮ ಬೀರುತ್ತವೆ ಎನ್ನುತ್ತಾರೆ. ಈ ಅಂಕಣಗಳಲ್ಲಿ ಸಾಮಾಜಿಕ ಕಳಕಳಿ ಬಿಂಬಿತವಾಗಿರುವುದನ್ನು ಗಮನಿಸಬಹುದು.

ಸಾಮಾಜಿಕ ಚಿಂತನೆಗಳು

ಭಾರತೀಯ ಸಾಮಾಜಿಕ ಚಿಂತನೆಗಳು ಬಹಳ ಪ್ರಾಚೀನ ಮೂಲವುಳ್ಳವುಗಳು. ಅವು ವೇದ ಕಾಲಕ್ಕಿಂತಲೂ ಇನ್ನೂ ಹಿಂದಿನ ಕಾಲದಿಂದ ಬೆಳವಣಿಗೆ ಹೊಂದಿರುವುದನ್ನು ಗುರುತಿಸಬಹುದಾಗಿದೆ. ಭಾರತೀಯ ಸಾಮಾಜಿಕ ಚಿಂತನೆಗಳು ಒಂದು ನಿರ್ದಿಷ್ಟ ವ್ಯಕ್ತಿಯಿಂದ ಆರಂಭಗೊಂಡಿವೆಯೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಎಚ್ಚೆಸ್ಕೆ ಅವರ ಈ ಅಂಕಣಗಳಲ್ಲಿ ಸಾಮಾಜಿಕ ಚಿಂತನೆಯ ವಿವಿಧ ಮುಖಗಳನ್ನು ಗುರುತಿಸಲಾಗಿದೆ. ಎಲ್ಲರ ಒಳಿತಿಗೆ, ಉದ್ಧಾರಕ್ಕೆ ಅವರ ಮನಸ್ಸು ತುಡಿದಿದೆ. ಮಾನವೀಯ ಕಾಳಜಿ ಅವರ ಎಲ್ಲ ಬರವಣಿಗೆಯ ಹಿಂದಿನ ಪ್ರಧಾನ ಲಕ್ಷಣವಾಗಿದೆ. ಎಚ್ಚೆಸ್ಕೆ ಅವರು ಸಮಾಜವನ್ನು ಕುರಿತು ಚಿಂತನೆ ನಡೆಸುವಾಗ ಸುಖ ಮರಣದ ಹಕ್ಕು, ಮುಪ್ಪು ಮತ್ತು ಸಮಾಜ, ಭ್ರಷ್ಟಚಾರದ ಮಹಾಸಾಮ್ರಾಜ್ಯ ಮುಂತಾದ ಸಾಮಾಜಿಕ ಚಿಂತನೆಯ ಬಗ್ಗೆ ಬರೆಯುವಾಗ ಭ್ರಷ್ಟ ಸಮಾಜದ ಹುಳುಕುಗಳನ್ನು ಜಗತ್ತಿನ ಚಿತ್ರ ವಿಚಿತ್ರಗಳನ್ನು ಓದುಗರ ಮುಂದೆ ಪ್ರತ್ಯಕ್ಷವಾಗಿ ಅಂಕಣ ಬರಹಗಳಲ್ಲಿ ನಿಲ್ಲಿಸಿದ್ದಾರೆ. ಅವುಗಳ ಅಖಂಡ ಸ್ವರೂಪವನ್ನು ಇಡಿಗಾತ್ರದಲ್ಲಿ ಹಿಡಿಯುವ ಶಕ್ತಿ ಅವರಿಗೆ ಕರತಲಾಮಲಕವಾಗಿತ್ತು ಎಂಬುದು ಅವರ ಅಂಕಣಗಳಲ್ಲಿ ಗೋಚರವಾಗಿದೆ.

ರಾಜಕೀಯ ಚಿಂತನೆಗಳು

ಎಚ್ಚೆಸ್ಕೆ ಅವರು ತಮ್ಮ ಅಂಕಣ ಬರಹದಲ್ಲಿ ನಮ್ಮ ದೇಶದ ರಾಜಕೀಯ ಹಾಗೂ ರಾಜಕೀಯ ವ್ಯಕ್ತಿಗಳ ಕುರಿತು ಪ್ರಸ್ತಾಪಿಸಿದ್ದಾರೆ. ರಾಜಕೀಯವಿಲ್ಲದೆ ಬೌದ್ಧಿಕ ಚಟುವಟಿಕೆಗಳಿಗೆ ಹೆಚ್ಚು ಅರ್ಥ ಇಲ್ಲ. ಪ್ರಸ್ತುತ ಸಂದರ್ಭದಲ್ಲಂತೂ ರಾಜಕೀಯವೆಂಬುದು ನಮ್ಮನ್ನು ಆಂತರಿಕವಾಗಿ ಮತ್ತು ಬಾಹ್ಯವಾಗಿ ಸಂಪೂರ್ಣ ಆವರಿಸಿಕೊಂಡಿದೆ. ಪ್ರಾಚೀನ ಪ್ರಜಾಪ್ರಭುತ್ವಗಳು, ಯಾರು ಹೆಚ್ಚು? ಪ್ರಧಾನಿಯೋ? ರಾಷ್ಟ್ರಪತಿಯೋ? ಮುಂತಾದ ರಾಜಕೀಯ ಚಿಂತನೆಗಳ ಬಗ್ಗೆ ತಮ್ಮ ಅಂಕಣ ಬರವಣಿಗೆಯಲ್ಲಿ ಚಿಂತನಾಲಹರಿ ಹರಿಸಿದ್ದಾರೆ.

ಪುಸ್ತಕ ವಿಮರ್ಶೆ

ಎಚ್ಚೆಸ್ಕೆ ಅವರ ಅಂಕಣ ಬರಹಗಳಲ್ಲಿ ಮೂಡಿಬಂದ ಕೃತಿ ಚಿಂತನೆಯ ವ್ಯಾಪ್ತಿ ವಿಶಾಲವಾಗಿದೆ. ಬಾಲ್ಯದಿಂದಲೇ ಅವರು ಪುಸ್ತಕಗಳನ್ನು ಓದುವುದರ ಬಗ್ಗೆ ಪ್ರೀತಿಯನ್ನು ಬೆಳೆಸಿಕೊಂಡಿದ್ದರು. ಎಚ್ಚೆಸ್ಕೆ ಅವರು ಅಂಕಣ ಬರಹದಲ್ಲಿ ಪುಸ್ತಕ ವಿಮರ್ಶೆಗೆ ಸಂಬಂಧಿಸಿ ಬರೆದ ಅಂಕಣದಲ್ಲಿ ಪುಸ್ತಕಗಳ ವಿಮರ್ಶೆ ಮಾಡುವುದಷ್ಟೇ ಅವರ ಉದ್ದೇಶವಾಗಿರಲಿಲ್ಲ. ಅದರ ಜೊತೆಗೆ ಅವುಗಳ ಪರಿಚಯ, ಪರಿಶೀಲನೆ, ಸಮೀಕ್ಷೆಗಳು ಮುಖ್ಯವಾಗಿವೆ ಇವು ಅವರ ಕಾಳಜಿ ಮತ್ತು ಸುಸಂಸ್ಕೃತ ಮನಸ್ಸಿನ ಸಂಕೇತವಾಗಿದೆ. ಪುಸ್ತಕಗಳು ನಮ್ಮ ಸುಖಮಯ ಸಮಯದಲ್ಲೂ ದುಃಖದ ಕ್ಷಣಗಳಲ್ಲೂ ಒಂದೇ ರೀತಿಯ ಮಾರ್ಗದರ್ಶನ ಮಾಡುತ್ತವೆ ಜೊತೆಗೆ ಜ್ಞಾನವನ್ನು ಹಂಚುತ್ತವೆ. ಎಚ್ಚೆಸ್ಕೆ ಅವರು ಅಂಕಣ ಬರವಣಿಗೆಯಲ್ಲಿ ಅನೇಕ ಪುಸ್ತಕಗಳ ಬಗ್ಗೆ ಚಿಂತನೆ ನಡೆಸಿದ್ದಾರೆ.

ಶೈಕ್ಷಣಿಕ ಚಿಂತನೆ

ಮಾನವನ ಎಲ್ಲಾ ಚಟುವಟಿಕೆಗಳಿಗೂ ಬುನಾದಿಯಂತಿರುವುದು ವಿದ್ಯೆಯೇ. ಇದು ವ್ಯಕ್ತಿಯಲ್ಲಿರುವ ಅಜ್ಞಾನ, ಆಲಸ್ಯ, ಜಾಡ್ಯ, ಅವಿವೇಕ, ಭ್ರಾಂತಿಗಳೆಂಬ ಸಂಕೋಲೆಯನ್ನು ಕಡಿದು ಒಂದು ಸ್ವತಂತ್ರ್ಯ ಅಸ್ತಿತ್ವವನ್ನು ದೊರಕಿಸಿಕೊಡುತ್ತದೆ. ಅದಕ್ಕಾಗಿಯೆ ಎಚ್ಚೆಸ್ಕೆ ಅವರು ತಮ್ಮ ಅಂಕಣದಲ್ಲಿ ಹೆಣ್ಣುಮಕ್ಕಳ ಶಿಕ್ಷಣ, ಶಿಕ್ಷಣದಲ್ಲಿ ಮೌಲ್ಯಪ್ರಜ್ಞೆ, ನಮ್ಮ ಶಿಕ್ಷಣ ವ್ಯವಸ್ಥೆ ಮುಂತಾದ ವಿಚಾರಗಳ ಬಗ್ಗೆ ಚಿಂತನೆ ನಡೆಸಿದ್ದಾರೆ. ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಆ ಪ್ರಾಂತ್ಯದ ಜನರು ಬುದ್ಧಿವಂತರಾಗಿರಬೇಕು. ಚಾಣಾಕ್ಷರಾಗಿರಬೇಕು ಮತ್ತು ಅಕ್ಷರಸ್ಥರಾಗಿರಬೇಕು. ಮೌಲ್ಯಯುತ ಒಳ್ಳೆಯ ಗುಣಮಟ್ಟದ ಜನಸಂಖ್ಯೆಯನ್ನು ಅದು ಹೊಂದಿರಬೇಕು.

ಮೌಲ್ಯರಹಿತ ಜನರಿದ್ದಾಗ ಅವರು ಆ ದೇಶಕ್ಕೆ ಹೊರೆಯಾಗುವರೆ ಹೊರತು ಅವರಿಂದ ಯಾವುದೇ ರೀತಿಯ ಸಕಾರಾತ್ಮಕ ಬೆಳವಣಿಗೆ ಆಗುವುದಿಲ್ಲ.

ಎಚ್ಚೆಸ್ಕೆ ಅವರು ಲೇಖನಿಯನ್ನೇ ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದ್ದಾರೆ. ಇವರ ಲೇಖನಿಯಿಂದ ಮೂಡಿಬರದ ವಿಷಯಗಳೇ ಇಲ್ಲ ಎನ್ನಬಹುದು. ಅನೇಕ ದಶಕಗಳಿಂದ ಅಂಕಣ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು ಇವರ ಅಂಕಣಗಳಲ್ಲಿ ಮುದುಡಿದ ಮನಗಳನ್ನು ಅರಳಿಸುವ ವಿಶ್ವಾಸ, ನಂಬಿಕೆಗಳನ್ನು ಕಳೆದುಕೊಂಡವರಲ್ಲಿ ಹೊಸತನವನ್ನು ಬಿಂಬಿಸುವ ಜೊತೆಗೆ ವಿಶ್ವಾಸದ ಬೇರುಗಳನ್ನು ದೃಢಪಡಿಸುವ ಪ್ರಯತ್ನಗಳು ನಿರಂತರವಾಗಿ ನಡೆದಿರುವುದನ್ನು ಕಾಣಬಹುದು. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಚಿಂತನೆಗಳನ್ನು ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೆ ಸಮಸ್ಯೆಗಳ ಎಲ್ಲಾ ಮುಖಗಳನ್ನು ತೆರೆದಿಟ್ಟಿದ್ದಾರೆ.

ಆಕರ ಗ್ರಂಥಗಳು

- ಅಂಕಣಬರಹ – ಎಚ್ಚೆಸ್ಕೆ
- ಕನ್ನಡ ವಿಷಯ ವಿಶ್ವಕೋಶ – ಪ್ರ. ಸಂ. ಡಾ. ಅರವಿಂದ ಮಾಲಗತ್ತಿ
- ಸಾಹಿತ್ಯ ಸಂಪದ – ಎಚ್ಚೆಸ್ಕೆ
- ಸಮದರ್ಶಿ – ಪ್ರಸಂ. ಪ್ರೊ ದೇ. ಜವರೇಗೌಡ

❏❏❏

೭. ಕುವೆಂಪು ಅವರ ಕಥೆಗಳಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ

– ನಾಗೇಂದ್ರಸ್ವಾಮಿ ಎಸ್

ಕುವೆಂಪು ಸಾಹಿತ್ಯ ಲೋಕದ ಧ್ರುವತಾರೆ. ಸದಾ ಮಿನುಗುತ್ತಲೇ ಸಾಹಿತ್ಯ ಕ್ಷೇತ್ರದಲ್ಲಿ ಅದ್ಭುತ ಛಾಪನ್ನು ಮೂಡಿಸಿದ ಮಹಾನ್‌ಕವಿ. ಆದಿಕವಿ ಪಂಪ ತನ್ನ ಪಂಪಭಾರತ ಕೃತಿಯಲ್ಲಿ "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಸಮಂ" ಎಂದು ಬನವಾಸಿಯನ್ನು ಬಣ್ಣಿಸಿ ಅದಕ್ಕೆ ಶರಣಾಗಿರುವಂತೆ, ಕುವೆಂಪು ಅವರು "ಹೋಗುವೆನು ನಾ ಹೋಗುವೆನು ಮಲೆಯ ನಾಡಿಗೆ, ಮಳೆಯ ಬೀಡಿಗೆ..." ಎಂದು ಹೇಳುವುದರ ಮೂಲಕ ಮಲೆನಾಡಿನ ಪರಿಸರಕ್ಕೆ ಮನಸೋತಿದ್ದಾರೆ. ಪಂಪನಿಂದ ಪ್ರಾರಂಭಗೊಂಡು ಕುವೆಂಪು ಅವರ ವರೆಗಿನ ಎಲ್ಲಾ ಕಾಲಘಟ್ಟದ ಕವಿಗಳು ಆಯಾ ಕಾಲದ ಭೌಗೋಳಿಕ, ಸಾಮಾಜಿಕ ಪರಿಸರದ ಪ್ರಭಾವಕ್ಕೆ ಒಳಗಾಗಿರುವಂಥದ್ದನ್ನು ಕಾಣಬಹುದು.

ಸಾಹಿತ್ಯ ಸಮಾಜದ ಪ್ರತಿಬಿಂಬ. ಸಾಹಿತಿ ಅದರ ನಿರ್ಮಾತೃ. ಭೌಗೋಳಿಕ, ಸಾಮಾಜಿಕ ಪರಿಸರಗಳು ಆತನ ಮೇಲೆ ಪ್ರಭಾವ ಬೀರುವಂತಹವು. ಯಾವೊಬ್ಬ ಸಾಹಿತಿಯೂ ಕೂಡ ಇವುಗಳಿಂದ ಬಿಡಿಸಿಕೊಂಡು ಸಾಹಿತ್ಯ ರಚನೆ ಮಾಡಲಾರ. ಭೌಗೋಳಿಕವಾಗಿ ಬೆಟ್ಟಗುಡ್ಡಗಳು, ಕಾಡುಕಡಲು, ಸೂರ್ಯ ಚಂದ್ರ, ಸಾಮಾಜಿಕವಾಗಿ ಜನರ ಸಂಸ್ಕೃತಿ, ಆಚಾರ ವಿಚಾರಗಳು. ಸಂಪ್ರದಾಯಗಳು, ಉಡುಗೆ ತೊಡುಗೆಗಳು ಕವಿಯನ್ನು ಪ್ರೇರೇಪಿಸುತ್ತವೆ. ಕವಿಯು ಇವುಗಳಿಂದ ಪ್ರಭಾವಿತಗೊಂಡು ಅವುಗಳನ್ನು ತನ್ನ ಕೃತಿಯಲ್ಲಿ ಪಡಿಮೂಡಿಸುತ್ತಾನೆ. ಸಾಹಿತ್ಯ ಸೃಷ್ಟಿಯ ಮೂಲ ನೆಲೆಯಾಗಿ ಪ್ರಕೃತಿ ಕಂಡುಬಂದರೆ, ಸಂಸ್ಕೃತಿ ಅದರ ಮುಂದುವರಿಕೆಯಾಗಿ ಹೆಜ್ಜೆ ಇಡುತ್ತದೆ. ಈ ಹಿನ್ನೆಲೆಯಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ಕುವೆಂಪು ಸಾಹಿತ್ಯದ ಎರಡು ಕಣ್ಣುಗಳಿದ್ದಂತೆ. ಕುವೆಂಪು ಅವರ ಜೀವನದಲ್ಲಿನ ಪರಿಸರದ ಪ್ರಭಾವವನ್ನು ಪ್ರಮುಖವಾಗಿ ಮೂರು ರೀತಿಯಲ್ಲಿ ಗುರುತಿಸಬಹುದು.

೧. ಬಾಲ್ಯದಲ್ಲಿ ಮಲೆನಾಡಿನ ಪ್ರಭಾವ

೨. ವಿದ್ಯಾರ್ಥಿ ದೆಸೆಯಲ್ಲಿ ರಾಮಕೃಷ್ಣಾಶ್ರಮದ ಪ್ರಭಾವ

೩. ಉದ್ಯೋಗಸ್ಥರಾದ ಮೇಲೆ ವಿಶ್ವವಿದ್ಯಾನಿಲಯದ ಪ್ರಭಾವ

ಈ ಮೂರು ಅಂಶಗಳು ಕುವೆಂಪುರವರನ್ನು ಪ್ರಕೃತಿ ಕವಿಯನ್ನಾಗಿ, ದಾರ್ಶನಿಕರನ್ನಾಗಿ, ವೈಚಾರಿಕ ಚಿಂತಕರನ್ನಾಗಿ ಮಾಡಿವೆ. ಪ್ರಕೃತಿಯಲ್ಲೇ ಪರಮಾತ್ಮನನ್ನು ಕಾಣುವ ಕುವೆಂಪುರವರು ಮಲೆನಾಡಿನ ಸಂಸ್ಕೃತಿಯನ್ನು ವೈವಿಧ್ಯಮಯವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಕುವೆಂಪುರವರು ಅಂದು ನೋಡಿದ, ಅನುಭವಿಸಿದ ಪ್ರಕೃತಿಯ ಸೌಂದರ್ಯ, ಸಂಸ್ಕೃತಿಯ ಚಿತ್ರಣವನ್ನು ಸವಿಯಲು ಇವರ ಕಾವ್ಯ, ಕಾದಂಬರಿ, ನಾಟಕಗಳಂತೆ ಸಣ್ಣಕತೆಗಳು ಉತ್ತಮ ಆಕರಗಳಾಗಿವೆ.

ಪ್ರಾಕೃತಿಕ ಸಂಪತ್ತು ಕುರಿತಾದ ವಿಶ್ಲೇಷಣೆ, ಇಲ್ಲಿನ ಪ್ರತಿಯೊಂದು ಸಂಗತಿಗಳು, ಪಾತ್ರಗಳು, ಘಟನೆಗಳು, ಸನ್ನಿವೇಶಗಳು ಮಲೆನಾಡಿನ ಪ್ರಾದೇಶಿಕ ಬದುಕನ್ನು ಸಾರುತ್ತವೆ. ಸೂರ್ಯೋದಯ, ಚಂದ್ರೋದಯ, ಬೆಳದಿಂಗಳು, ಕವಿಶೈಲ, ಸಹ್ಯಾದ್ರಿಯ ಶ್ರೇಣಿಗಳು, ಪರ್ವತಗಳು, ದಟ್ಟಾರಣ್ಯಗಳು, ಪಕ್ಷಿ ಸಂಕುಲಗಳು ಸಹೃದಯರನ್ನು ಆಕರ್ಷಿಸುತ್ತವೆ. ಇಲ್ಲಿನ ಕಾಡು ಬೆಟ್ಟಗಳೇ ಕುವೆಂಪು ಅವರ ಕಥೆಗಳಿಗೆ ಪಾತ್ರಗಳಾಗಿವೆ. ಇವರ ಎರಡು ಕಥಾ ಸಂಕಲನಗಳಲ್ಲಿ ಬರುವ ವ್ಯಕ್ತಿ ಚಿತ್ರಣಗಳು, ಪ್ರಾದೇಶಿಕ ಬದುಕು ಪ್ರಕೃತಿಯ ವೈಚಿತ್ರ್ಯಕ್ಕೆ ಪೂರಕವಾಗಿಯೇ ಬರುತ್ತದೆ. ಇವುಗಳ ನಡುವೆ ವ್ಯಕ್ತಿಯ ಬದುಕನ್ನು ತಿಳಿನೀರಿನ ಪ್ರಶಾಂತತೆಯಲ್ಲಿ ಅದ್ದಿ ಭಾವನಾತ್ಮಕ ಪ್ರಪಂಚಕ್ಕೆ ಕೊಂಡೊಯ್ಯುವ ಕಲೆಗಾರಿಕೆಯನ್ನು ಕುವೆಂಪು ಅವರಲ್ಲಿ ಕಾಣುತ್ತೇವೆ. ಕವಿ ಹೃದಯದ ಕಲ್ಪನೆಗಳು ಇಲ್ಲಿ ಮೂರ್ತಗೊಂಡು ಸಹೃದಯರ ಹೃದಯಕ್ಕೆ ಭಾವದೀಪ್ತತೆಯನ್ನು ತಂದೊಡ್ಡಿವೆ.

ಕುವೆಂಪುರವರ ವೈಶಿಷ್ಟ್ಯವೆಂದರೆ ಪ್ರಕೃತಿಯ ಅದ್ಭುತತೆಯಲ್ಲಿ ವ್ಯಕ್ತಿಯನ್ನು ಲೀನವಾಗಿಸುವುದು. ಯಾವುದೇ ವಿಚಾರವನ್ನಾಗಲೀ ಅಖಂಡ ದೃಷ್ಟಿಯಿಂದ ನೋಡುವ ಕುವೆಂಪುರವರು ವಾಸ್ತವತೆಗೆ ಪ್ರಧಾನತೆಯನ್ನು ನೀಡುತ್ತಾರೆ. ಇವರ ಬರವಣಿಗೆಯಲ್ಲಿ ನೈಜತೆ, ಕಲಾತ್ಮಕತೆ, ಭಾವತನ್ಮಯತೆ ಮುಪ್ಪುರಿಗೊಂಡಿವೆ. ಗ್ರಾಮೀಣರ ಮಾನವೀಯತೆ, ಮೌಢ್ಯತೆ, ಜೀತಪದ್ಧತಿ, ಜಾತಿಪದ್ಧತಿ, ಮೂಢನಂಬಿಕೆ ಇವರ ಕತೆಗಳಿಗೆ ವಸ್ತುಗಳಾಗಿವೆ. ಕುತೂಹಲ, ಹಾಸ್ಯ, ವಿಡಂಬನೆ ಇಲ್ಲಿನ ಕತೆಗಳಲ್ಲಿ ಸ್ಥಾನ ಪಡೆದಿವೆ. ಇವರು ಮಲೆನಾಡಿನ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಅನೇಕ ಮೌಢ್ಯಗಳನ್ನು, ಸಾಮಾಜಿಕ ವಿಕೃತಿಗಳನ್ನು ಕಟುವಾಗಿ ಟೀಕಿಸಿದ್ದಾರೆ.

'ಗಂಟು ಅಥವಾ ಗುಪ್ತಧನ' ಕತೆಯಲ್ಲಿ ಮಂಜಣ್ಣನೆಂಬ ವ್ಯಕ್ತಿ ಗುಪ್ತಧನದ ಆಸೆಯಿಂದಾಗಿ ಬೈರಾಗಿಗಳಿಂದ (ಮಂತ್ರವಾದಿ) ಮೋಸಹೋಗುವ ಚಿತ್ರಣವನ್ನು ಕೊಡುತ್ತಾರೆ. ಮಂಜಣ್ಣನ ಅತಿಯಾದ ಹಣದ ಆಸೆಯೇ ಅನೇಕ ದುರಂತಗಳಿಗೆ ಎಡೆಮಾಡಿಕೊಡುವಂತದ್ದನ್ನು ಇಲ್ಲಿ ಕಾಣಬಹುದು. ನಿಧಿ ಹೊರ ತೆಗೆಯಲು ಮಾಡುವಂತಹ ಕಾರ್ಯಗಳು ಆತನ ಮೌಢ್ಯತೆಗೆ ಸಾಕ್ಷಿಯಾಗಿದೆ. ಮಂಜಣ್ಣನ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡ ಬೈರಾಗಿಯು ಆತನನ್ನು ವಂಚಿಸುವಂತದ್ದು ಸಹಜವಾಗಿಯೇ ಕಂಡುಬಂದಿದೆ. ಕುವೆಂಪುರವರು ಇಲ್ಲೆಲ್ಲಾ ಜನರ ಮೌಢ್ಯಗಳನ್ನು ಪರೋಕ್ಷವಾಗಿಯೇ ಟೀಕಿಸುತ್ತಾರೆ. ಮೂಢನಂಬಿಕೆ, ಜಾತಿ, ಸಂಪ್ರದಾಯಗಳು ಎಲ್ಲೇ ಇರಲಿ ಅದನ್ನು ಖಂಡಿಸುವ ನಿಷ್ಠುರತೆ ಕುವೆಂಪು ಅವರದು. ಇವರ ಕಥೆಗಳ ಪ್ರಮುಖ ಪ್ರವೃತ್ತಿಗಳನ್ನು ಡಾ. ತಿಪ್ಪೇಸ್ವಾಮಿಯವರು ಈ ಕೆಳಕಂಡಂತೆ ಪಟ್ಟಿಮಾಡುತ್ತಾರೆ.

೧. ಇವರ ಕತೆಗಳಲ್ಲಿ ನಿಯತಿವಾದ ಅಂದರೆ ವಿಧಿವಿಲಾಸದ ಬಗೆಗೆ ಅಪಾರ ಆಸ್ಥೆಯನ್ನು ಕಾಣಬಹುದು.
೨. ಮಾನವೀಯ ಅಂತಃಕರಣ ತನ್ನೆಲ್ಲಾ ತುಡಿತದೊಂದಿಗೆ ಸಕ್ರಿಯವಾಗಿರುವುದು.
೩. ನಂಬಿಕೆ, ವಿಶ್ವಾಸ ಒಂದು ಮೌಲ್ಯವಾಗಿ ಪ್ರತಿಪಾದಿತವಾಗಿರುವುದು.
೪. ಧರ್ಮಪ್ರಜ್ಞೆಗೆ ಹೆಚ್ಚು ಒತ್ತು ನೀಡಿ ನಿರಂತರವಾಗಿರುವುದು.
೫. ಇವರ ಕತೆಗಳು ಆ ಸಮಾಜದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಬದುಕಿನ ದಾಖಲೆ ಆಗಿರುವುದು.
೬. ವ್ಯಂಗ್ಯವು ಪ್ರಧಾನವಾಗಿ ಸ್ಥಾಯಿಯಾಗಿರುವುದು.

ಶೋಷಣೆ ನಮ್ಮ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾಗಿರುವುದನ್ನು ಕುವೆಂಪು ಅವರು ತಮ್ಮ ಕಥೆಗಳಲ್ಲಿ ಗುರುತಿಸುತ್ತಾರೆ. ಪುರೋಹಿತಶಾಹಿ ಎಷ್ಟು ವಿಧಿವತ್ತಾಗಿದೆ ಎಂಬುದನ್ನು 'ಶ್ರೀಮನ್ಮೂಕವಾಗಿತ್ತು' ಕಥೆಯಲ್ಲಿ ಪ್ರಸ್ತಾಪಿಸುತ್ತಾರೆ. 'ಸಾಲದ ಮಗು', 'ಯಾರೂ ಅರಿಯದ ವೀರ', 'ಧನ್ವಂತರಿ ಚಿಕಿತ್ಸೆ', 'ದೆವ್ವದ ಕಾಟ', 'ಶ್ರೀಮನ್ಮೂಕವಾಗಿತ್ತು' ಕಥೆಗಳಲ್ಲಿ ಮಾನವೀಯತೆ, ಅನುಕಂಪ, ಶೋಷಣೆಗಳು ಸ್ಥಾಯಿಯಾಗಿ ಕಂಡುಬಂದಿವೆ. ಇವುಗಳಿಗೆ ಹಿನ್ನೆಲೆಯಾಗಿ ಪ್ರಕೃತಿಯ ಉಪಮೆ, ರೂಪಕಗಳು ಮಲೆನಾಡಿನ ಜೀವನಕ್ರಮವನ್ನು ಶೋಧನೆಗೆ ಒಳಗುಮಾಡುತ್ತವೆ.

ಕುವೆಂಪುರವರು ಪಾತ್ರಗಳನ್ನು ನಡೆಸಿಕೊಂಡಿರುವ ರೀತಿ ಮೆಚ್ಚುವಂತದ್ದು. ಇಲ್ಲಿನ ಪಾತ್ರಗಳಲ್ಲಿ ಸರಳತೆ, ಮುಗ್ಧತೆ, ಹಾಸ್ಯಪ್ರವೃತ್ತಿ ಕಂಡುಬರುತ್ತದೆ. 'ಸಾಲದ

ಮಗು' ಕತೆಯ 'ಸುಬ್ಬ', 'ಯಾರೂ ಅರಿಯದ ವೀರ' ಕತೆಯ 'ನಿಂಗ' ಸರಳತೆ, ಮುಗ್ಧತೆ, ಮಾನವೀಯತೆಗೆ ಹೆಸರಾದ ಪಾತ್ರಗಳಾಗಿ ನಿರ್ಮಾಣಗೊಂಡಿವೆ. 'ನನ್ನ ದೇವರು' ಕಥೆಯಲ್ಲಿ "ಅವರುಡುಗೆಯ ಸರಳತೆ ಶರತ್ಕಾಲದ ಬೆಳ್ಮುಗಿಲಿನ ನಡುವೆ ಬೆಳಗುವ ತಾರಾನಾಥನ ಸರಳತೆಯಂತೆ"[7] ಎಂಬ ಹೋಲಿಕೆಯನ್ನು ಕೊಡುತ್ತಾರೆ. ವ್ಯಕ್ತಿಯ ಸರಳತೆ, ಉಡುಗೆ ತೊಡುಗೆಗೆ ಪ್ರಕೃತಿಯನ್ನು ಉಪಮೆಯಾಗಿ ನೀಡುತ್ತಾರೆ. ಇಂತಹ ಎಷ್ಟೋ ವರ್ಣನೆಗಳು ಕುವೆಂಪುರವರ ಕತೆಗಳಲ್ಲಿ ಹಾಸುಹೊಕ್ಕಾಗಿವೆ.

ಮಲೆನಾಡಿನ ಮಳೆಯ ವರ್ಣನೆಯಲ್ಲಂತೂ ಓದುಗರನ್ನು ತೋಯಿಸಿಬಿಡುವ ಕುವೆಂಪುರವರು ಆ ಮುಂಗಾರು ಮಳೆಯಿಂದ ಆಗುವ ಪರಿಣಾಮಗಳನ್ನು, ಅನಾಹುತಗಳನ್ನು ದೃಶ್ಯವತ್ತಾಗಿ ಹೇಳಿದ್ದಾರೆ. 'ಸಾಲದ ಮಗು' ಹಾಗೂ 'ಯಾರೂ ಅರಿಯದ ವೀರ' ಕತೆಯಲ್ಲಿ ಮಳೆಯ ರೂಪ-ಸ್ವರೂಪಗಳ ಚಿತ್ರಣ ಕೊಡುತ್ತಾರೆ.

ಇಲ್ಲಿನ ಸಾಮಾಜಿಕ ಬದುಕು ಅದನ್ನು ರೂಪಿಸುವ ಪ್ರಕೃತಿ, ಅವುಗಳು ಉಂಟುಮಾಡುವ ಭಯಾನಕತೆ ಓದುಗರಲ್ಲಿ ಅಚ್ಚಳಿಯದೆ ನಿಂತುಬಿಡುತ್ತದೆ. ಮಳೆಗಾಲ, ಕಾರಿರುಳು ಕತ್ತಲು, ಗುಡುಗು ದಿಗಂತದಿಂದ ದಿಗಂತದವರೆಗೆ ಉರುಳುತಿತ್ತು. ತಡೆಯಿಲ್ಲದೆ ಜಡಿಮಳೆ ಜೋ ಎಂದು ಬೀಳುತ್ತಿತ್ತು ಎಂಬ ಪ್ರಕೃತಿಯ ವರ್ಣನೆಯೊಂದಿಗೆ ಪ್ರಾರಂಭವಾಗುವ 'ಸಾಲದ ಮಗು' ಕತೆಯು ಭಯಂಕರವಾದ ಮಳೆಗೆ ತೊಯ್ದು ಹೋದ ಅನಾಥ ಬಾಲಕನ ಯಾತನಮಯ ಬದುಕನ್ನು ಕಟ್ಟಿಕೊಡುತ್ತದೆ. ಗುಡುಗು, ಸಿಡಿಲುಗಿಂತಲೂ ಕಠೋರವಾದ ಗೌಡರ ಮಾತುಗಳು ಸುಬ್ಬನ ಬದುಕಿಗೆ ಮುಳುವಾಗಿವೆ. ವಿಷಸರ್ಪದ ಕಡಿತಕ್ಕೆ ಬಲಿಯಾಗುವ ಸುಬ್ಬ ಪ್ರಕೃತಿಯೊಡನೆ ಲೀನವಾಗುವಂತದ್ದು ದುರಂತಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಕತೆಯನ್ನು ಓದಿ ಮುಗಿಸಿದ ಮೇಲೆ ಮಳೆಯ ನೀರಿನೊಡನೆ ಓದುಗರ ಕಣ್ಣೀರು ತೊಯ್ದುಹೋಗುತ್ತದೆ.

'ಯಾರೂ ಅರಿಯದ ವೀರ' ಮಾನವೀಯತೆ, ಸ್ವಾಮಿಭಕ್ತಿಯನ್ನು ಹಿನ್ನಲೆಯಾಗುಳ್ಳ ಕತೆ. ಸುಬ್ಬಣ್ಣಗೌಡರ ಮನೆಯ ಜೀತದಾಳಾದ 'ಲಿಂಗ' ಪ್ರಕೃತಿಯೊಡನೆ ಹೋರಾಡಿ ಗೌಡರ ಕುಟುಂಬವನ್ನು ಉಳಿಸುವಂತದ್ದು ಸ್ವಾಮಿನಿಷ್ಠೆಗೆ ಸಾಕ್ಷಿಯಾಗಿದೆ. ಮಳೆಯ ಆರ್ಭಟದಿಂದ ಪ್ರವಾಹ ಉಂಟಾಗಿ ಸುಬ್ಬಣ್ಣಗೌಡರ ಕುಟುಂಬ ಸಿಲುಕಿದಾಗ ಅನ್ನ ಬಟ್ಟೆ ಕೊಟ್ಟು ಸಾಕಿದವರ ಬಳಗವನ್ನು ಉಳುಹಬೇಕೆಂಬ ಮಹಾಲೋಚನೆ ಮಾಡಿ ನದಿಗೆ ಹಾರುವಂತದ್ದು ಆತನ ತ್ಯಾಗಕ್ಕೆ ಸಾಕ್ಷಿಯಾಗಿದೆ.

ರೈತರು ನಮ್ಮ ಗ್ರಾಮಗಳ ಬೆನ್ನೆಲುಬು ಆಗಿರುವಂತೆ ಪುರೋಹಿತರು, ಜೋಯಿಸರು ಅವಿಭಾಜ್ಯ ಅಂಗವೇ ಆಗಿದ್ದಾರೆ. ಶೋಷಣೆಯ ಮೂಲಕ ರೈತರ ಬೆನ್ನು ಮುರಿಯುವ ಅಮಾನವೀಯ ಸ್ವಭಾವವನ್ನು ಇವರಲ್ಲಿ ಕಾಣುತ್ತೇವೆ.

ಪುರೋಹಿತಶಾಹಿ ಸಂಸ್ಕೃತಿಯ ಶೋಷಣೆಯ ವಿಭಿನ್ನ ಸ್ವರೂಪಗಳನ್ನು 'ಧನ್ವಂತರಿ ಚಿಕಿತ್ಸೆ' ಮತ್ತು 'ಶ್ರೀಮನ್ಮೂಕವಾಗಿತ್ತು' ಕಥೆಗಳಲ್ಲಿ ಕಾಣಬಹುದು. ಹಣಕ್ಕಾಗಿ ಸುಲಿಗೆ ಮಾಡುವ ಪುರೋಹಿತವರ್ಗ, ರೈತನ ದಾರುಣ ಸ್ಥಿತಿ, ಶ್ರೀಮಂತರ ಚಿತ್ರಣ ಇಂದಿನ ಸಮಾಜದ ಪ್ರತಿಬಿಂಬದಂತೆ ಚಿತ್ರಣಗೊಂಡಿದೆ.

ಮಾನವೀಯ ಅಂತಃಕರಣದಿಂದಾಗಿ ಓದುಗರಲ್ಲಿ ಅನುಕಂಪವನ್ನು ಉಂಟುಮಾಡುವ ಕಥೆ 'ಶ್ರೀಮನ್ಮೂಕವಾಗಿತ್ತು'. ಜಾನುವಾರುಗಳೊಡನೆ ರೈತನ ಆತ್ಮೀಯ ಒಡನಾಟವನ್ನು ಈ ಕತೆಯಲ್ಲಿ ಕಾಣಬಹುದು. ರಂಗನು ಪ್ರೀತಿಯಿಂದ ಸಾಕಿ ಸಲಹಿದ್ದ ಎಮ್ಮೆ ಕಾಣದಾದಾಗ ಸಂಕಟಪಡುವಂತದ್ದು ಕರುಣರಸವನ್ನೇ ತಂದೊಡ್ಡುತ್ತದೆ. ರಂಗನ ದುಃಖವನ್ನು ಅರ್ಥಮಾಡಿಕೊಳ್ಳದ ಪುರೋಹಿತ ತನಗೆ ಬರಬೇಕಾಗಿರುವ ದಕ್ಷಿಣದ ಚಿಂತೆಯಲ್ಲೇ ಮೈಮರೆಯುವಂತದ್ದನ್ನು ಅವನ ಮಾತುಗಳಲ್ಲೇ ಕುವೆಂಪುರವರು ಬಹಿರಂಗಪಡಿಸುತ್ತಾರೆ. "ನಿಮಗೇನು ಈಗಿನ ಕಾಲದವರಿಗೆ ಭಯ ಭಕ್ತಿ ನಯ ನಡತೆ ಒಂದೂ ಇಲ್ಲ. ಸರದಾರರಂತೆ ಕೈಬೀಸಿಕೊಂಡು ಬಂದುಬಿಡುತ್ತೀರಿ. ಹಿಂದೆ ನಮ್ಮ ಮನೆಯ ಮೆಟ್ಟಿಲು ಹತ್ತಬೇಕಾದರೆ ಕೈ ಕಾಣಿಕೆ ತಂದೇ ತರುತ್ತಿದ್ದರು."[೨]

ಕುವೆಂಪು ಅವರ ಈ ಎರಡೂ ಕಥಾಸಂಕಲನಗಳಲ್ಲಿ ಪ್ರಾದೇಶಿಕತೆ ಮೈದುಂಬಿ ಅರಳಿದೆ. ತಾವು ಕಂಡುಂಡ ಅನುಭವಗಳನ್ನು, ಅದರ ಸತ್ಯಾಸತ್ಯತೆಗಳನ್ನು ಓರೆಗೆ ಹಚ್ಚಿದ್ದಾರೆ. ಇಲ್ಲಿ ಪ್ರಕೃತಿ ವರ್ಣನೆ ಸಂದರ್ಭೋಚಿತವಾಗಿ ಬಂದರೂ ಕಥೆಗಳ ಹಿನ್ನೆಲೆಯಾಗಿ ನಿಂತು ಅದರ ಸತ್ವವನ್ನು ಹೆಚ್ಚಿಸಿದೆ. ಮಲೆನಾಡಿನ ಪರಿಸರದ ನಡುವೆ ಅರಳಿರುವ ಇವರ ಕತೆಗಳು ಕಲಾತ್ಮಕತೆಗೆ ಸಾಕ್ಷಿಯಾಗಿವೆ. ಮಲೆನಾಡಿನ ಗ್ರಾಮೀಣ ಬದುಕು ಸ್ಥಿತ್ಯಂತರಗೊಳ್ಳುತ್ತಿರುವ ಅಸಂಖ್ಯ ಸಮೃದ್ಧ ವಿವರಗಳನ್ನು ಇವರ ಕತೆಗಳು ಕಟ್ಟಿಕೊಡುತ್ತವೆ. ವಸಾಹತುಶಾಹಿ ಸಂದರ್ಭದಲ್ಲಿ ಎದುರಾದ ಮತಾಂತರ ಪ್ರಕ್ರಿಯೆಯ ಪರಿಣಾಮವಾಗಿ ವ್ಯಕ್ತಿ ವ್ಯಕ್ತಿ ನಡುವೆ ಉಂಟಾದ ವಿಘಟನೆಯನ್ನು 'ಕ್ರಿಸ್ತನಲ್ಲ ಪಾದ್ರಿಯ ಮಗಳು' ಕತೆಯಲ್ಲಿ ಹೇಳುತ್ತಾರೆ. 'ನನ್ನ ದೇವರು' ಕಥೆಯಲ್ಲಿ ಪ್ರಕೃತಿ ಪ್ರೇಮ, ಸೌಂದರ್ಯ, ಧರ್ಮಾಸಕ್ತಿ ಮಾರ್ಮಿಕವಾಗಿ ಚಿತ್ರಿತವಾಗಿದೆ. 'ಔದಾರ್ಯ' ಕತೆಯಲ್ಲಿ ತೀರ್ಥಹಳ್ಳಿಯ ಪ್ರಕೃತಿ ಸೌಂದರ್ಯದ ಚಿತ್ರಣ ಕೊಡುತ್ತಾರೆ. "ನನಗೆ ಚಿಕ್ಕಂದಿನಿಂದಲೂ ಪ್ರಕೃತಿ ಸೌಂದರ್ಯವೆಂದರೆ ಬಹಳ ಇಷ್ಟ. ಅದಕ್ಕಾಗಿಯೆ ನಾನು ಯಾವ ಊರಿನಲ್ಲಿದ್ದರೂ ವ್ಯಾಯಾಮದ ನೆವದಿಂದ ಬಹುದೂರ ಸಂಚಾರ ಹೋಗುವುದು ವಾಡಿಕೆ. ಎತ್ತ ಕಡೆ ನೋಡಿದರೂ, ಹೋದರೂ ಮೈಗೆ ವ್ಯಾಯಾಮ. ಎಲ್ಲಿ ನೋಡಿದರೂ ಕಣ್ಣಿಗೆ ಹಬ್ಬ"[೩] ಎಂದು ಹೇಳುತ್ತಾರೆ. 'ಸನ್ಯಾಸಿ' ಕತೆಯಲ್ಲಿ ರಮೇಶ ಪ್ರೇಮಾನಂದರ ಶಿಷ್ಯನಾಗಿ ಸಂಸಾರ

ಬಂಧನದಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಾನೆ. ತನ್ನ ಪತಿಯನ್ನು ಪಡೆಯಲೇಬೇಕೆಂಬ ಹಠದಿಂದ ರಮೇಶನ ಹೆಂಡತಿ ಇಂದಿರೆ, 'ಮುಕುಂದ' ಎಂಬ ಹೆಸರಿನಿಂದ ಪ್ರೇಮಾನಂದರ ಶಿಷ್ಯತ್ವವನ್ನು ಪಡೆಯುತ್ತಾಳೆ. ಮುಕುಂದ-ಇಂದಿರೆಯಾಗಿ ಚೈತನ್ಯನ ಎದುರಿನಲ್ಲಿ ನಿಂತಾಗ ಆತನು ಎವೆಯಿಕ್ಕದೆ ನೋಡುತ್ತಾನೆ. ಇಲ್ಲಿ ಪ್ರಕೃತಿ ಅವರಿಬ್ಬರ ನೋಟಕ್ಕೆ ಸಾಕ್ಷಿಯಾಗಿದೆ. "ಕಾಲವು ಅವರನ್ನೇ ನೋಡುತ್ತ ತನ್ನ ಗಮನವನ್ನು ಮರೆತುಬಿಟ್ಟಿತು. ಹರಿವ ನದಿಗಳೆರಡೂ ನಿಂತು ನೋಡಿದವು. ಚಂದ್ರನೂ ನಿಂತನು. ಸಮಸ್ತ ವಿಶ್ವವೂ ಮುಂದೇನಾಗುವುದೋ ಎಂದು ಕಾತರಗೊಂಡು ನಿಂತುಬಿಟ್ಟಿತು"[೪]ಎಂಬ ಹೋಲಿಕೆಯನ್ನು ಕುವೆಂಪುರವರು ಇಲ್ಲಿ ಕೊಡುತ್ತಾರೆ.

ಹೀಗೆ ಕುವೆಂಪು ಅವರು ಮಲೆನಾಡಿನ ಪ್ರಕೃತಿ ಸೌಂದರ್ಯಕ್ಕೆ ಮನಸೋಲುವುದರ ಜೊತೆಗೆ ಸಾಮಾಜಿಕ ವಿಕೃತಿಗಳನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಕಾಡಿನಷ್ಟೆ ದಟ್ಟವಾಗಿ, ದೈತ್ಯಮರಗಳಂತೆ ಬೆಳೆದುನಿಂತಿರುವ ಕಂದಾಚಾರದ ಬೇರುಗಳನ್ನು ಕಿತ್ತೊಗೆಯಲು ಶ್ರಮಿಸಿದ್ದಾರೆ. ಕಾಡಕವಿಯಾಗಿದ್ದ ಕುವೆಂಪುರವರು ಯುಗದ ಕವಿ, ಜಗದ ಕವಿ ಎಂದು ಕರೆಸಿಕೊಂಡಿದ್ದಾರೆ.

ಅಡಿಟಿಪ್ಪಣಿಗಳು

೧. ನನ್ನ ದೇವರು ಮತ್ತು ಇತರ ಕತೆಗಳು, ಕುವೆಂಪು, ಪುಟ. ೫
೨. ಸನ್ಯಾಸಿ ಮತ್ತು ಇತರ ಕತೆಗಳು, ಕುವೆಂಪು, ಪುಟ ಸಂಖ್ಯೆ. ೭೫
೩. ನನ್ನ ದೇವರು ಮತ್ತು ಇತರ ಕತೆಗಳು, ಕುವೆಂಪು, ಪುಟ. ೩೦
೪. ಸನ್ಯಾಸಿ ಮತ್ತು ಇತರ ಕತೆಗಳು , ಕುವೆಂಪು. ಪುಟ. ೮

ಪರಾಮರ್ಶನ ಗ್ರಂಥಗಳು

೧. ನನ್ನ ದೇವರು ಮತ್ತು ಇತರ ಕತೆಗಳು – ಕುವೆಂಪು
ಸನ್ಯಾಸಿ ಮತ್ತು ಇತರೆ ಕತೆಗಳು
೨. ಪ್ರಬುದ್ಧ ಚೇತನ – ಪ್ರಧಾನ ಸಂಪಾದಕರು : ಪ್ರೊ. ಲಕ್ಷ್ಮೀನಾರಾಯಣ ಅರೋರಾ
೩. ರಸಋಷಿ ಕುವೆಂಪು – ಎಸ್.ವಿ. ಪರಮೇಶ್ವರಭಟ್ಟ
೪. ಕುವೆಂಪು ಸಾಹಿತ್ಯ ಚಿಂತನ – ಎಚ್.ಬಿ. ಯಶೋಧರಾ

□□□

೮. ನಾಟಕಕಾರ ಅ.ನ.ಕೃ

- ಯೋಗೇಶ ಎನ್

ಚಳವಳಿಗಳ ಮೂಲಕ ತಮ್ಮ ಸೃಜನಶೀಲತೆಯ ಮೂಲಕ ಕನ್ನಡವನ್ನು ಕಟ್ಟುವ ಕೆಲಸ ಮಾಡಿದ ಸಾಹಿತಿ ಅ.ನ. ಕೃಷ್ಣರಾಯರು. ಕಾದಂಬರಿ ಸಾರ್ವಭೌಮ, ಕನ್ನಡದ ಕಟ್ಟಾಳು, ಪ್ರಗತಿಶೀಲ ಚಳವಳಿಯ ನೇತಾರ, ಹೀಗೆ ಕನ್ನಡದ ಮನಸ್ಸುಗಳಿಂದ ಗುರುತಿಸಲ್ಪಡುತ್ತಿದ್ದ, ಗೌರವಿಸಲ್ಪಡುತ್ತಿದ್ದ ಅ.ನ.ಕೃ ಅವರು ತಮ್ಮ ವೈವಿಧ್ಯಮಯವಾದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದ ತಮ್ಮ ಅನುಭವ ಸಂಪತ್ತನ್ನು, ಸಂವೇದನೆಯನ್ನು ಶ್ರೀಮಂತಗೊಳಿಸಿಕೊಂಡವರು. ಕನ್ನಡದ ಓದುಗವಲಯವನ್ನು ವಿಸ್ತರಿಸುವುದರ ಜೊತೆಗೆ ಕನ್ನಡ ಗದ್ಯವನ್ನು ಪರಿಷ್ಕರಿಸಿದ ಕೀರ್ತಿ ಅ.ನ.ಕೃ ಅವರಿಗೆ ಸಲ್ಲುತ್ತದೆ. ತಮಿಳು, ತೆಲುಗು ಹಾಡುಗಳೇ ರಾರಾಜಿಸುತ್ತಿದ್ದ, ಉದ್ಯೋಗಗಳಲ್ಲಿ ಅನ್ಯಭಾಷಿಕರೇ ಹೆಚ್ಚಾಗಿ ಕನ್ನಡಿಗರು ಹೀನಾಯ ಸ್ಥಿತಿಯಲ್ಲಿದ್ದಾಗ ಹಳೇ ಮೈಸೂರಿನಲ್ಲಿ ಹೋರಾಟಗಳ ಮೂಲಕ ಕನ್ನಡದ ಕಂಪು ಹರಡುವಂತೆ ಮಾಡಿದರು. ವಚನಗಳು ಸಂಗೀತದ ಮೂಲಕ ನಾಡಿನ ಮೂಲೆ ಮೂಲೆಗೂ ತಲುಪುವಂತೆ ಪ್ರೇರಣೆ ನೀಡಿದರು. ಕನ್ನಡದ ಏಕೀಕರಣಕ್ಕೆ ಬೇರೆ ಬೇರೆ ರೀತಿಯಲ್ಲಿ ದುಡಿದರು. ಹಾಗೆಯೇ ಕನ್ನಡದ ಅನೇಕ ಸಾಹಿತಿಗಳನ್ನು ಬೆಳೆಸಿದರು. ಇಂತಹ ವಿಶಿಷ್ಟ ವ್ಯಕ್ತಿತ್ವದ ಅ.ನ.ಕೃ ಅವರನ್ನು ಕನ್ನಡ ವಿಮರ್ಶಾವಲಯ ಒಂದು ರೀತಿಯಲ್ಲಿ ನಿರ್ಲಕ್ಷಿಸುತ್ತಲೇ ಬಂದಿದೆ. ಅವರ ಸಾಹಿತ್ಯ, ಸಾಧನೆಗಳಿಗಿಂತ ಮುಖ್ಯವಾಗಿ ಅವರನ್ನು ವೈಯಕ್ತಿಕ ನೆಲೆಯಲ್ಲಿಯೇ ವಿಮರ್ಶಿಸುತ್ತಾ ಬಂದಿದೆ. ಅವರನ್ನು ನಿರ್ಲಕ್ಷಿಸುವುದು ಸಾಂಸ್ಕೃತಿಕ ಇತಿಹಾಸಕ್ಕೆ ಎಸಗಿದ ಅಪಚಾರವಾಗುತ್ತದೆ. ಅವರನ್ನು ಸ್ಮರಣೆ ಮಾಡಿಕೊಳ್ಳಬೇಕಾದ್ದು ನಾಡು ನುಡಿಯ ಬಗ್ಗೆ ಆಸಕ್ತಿಯಿರುವ ಕನ್ನಡಿಗರೆಲ್ಲರ ಕರ್ತವ್ಯ ಕೂಡ.

ಸುಮಾರು ನಾಲ್ಕು ದಶಕಗಳ ಕಾಲ; ಕನ್ನಡ ಭಾಷೆ, ಸಂಸ್ಕೃತಿಯನ್ನು ಗಂಭೀರವಾಗಿ ತೆಗೆದುಕೊಂಡು ಸಾಹಿತ್ಯದಲ್ಲಿ, ಕನ್ನಡ ಕಟ್ಟುವ ಕೈಂಕರ್ಯದಲ್ಲಿ, ಕನ್ನಡಿಗರ ಅಭಿರುಚಿ ನಿರ್ಮಿಸುವಲ್ಲಿ, ಓದುಗರನ್ನು ಕನ್ನಡ ಸಾಹಿತ್ಯದ ಕಡೆ

ಹೊರಳುವಂತೆ ಮಾಡುವಲ್ಲಿ ಅ.ನ.ಕೃ ಅವರು ಮಾಡಿದ ಕೆಲಸ ಅಸಾಮಾನ್ಯವಾದುದ್ದು; ಅದು ಐತಿಹಾಸಿಕವಾದುದು. ಕನ್ನಡದ ಬಗೆಗಿನ ಹೋರಾಟ, ಸಂಘಟನೆಗಳ ಕೆಲಸಗಳ ಮಧ್ಯದಲ್ಲಿಯೂ ಅವರು ಅಪಾರವಾದ, ಅಮೂಲ್ಯವಾದ ಸಾಹಿತ್ಯಸೃಷ್ಟಿ ಮಾಡಿದವರು. ಹಾಗೆಯೇ ಬರೆದು ಬದುಕಬಹುದೆಂದು ತೋರಿಸಿಕೊಟ್ಟವರು. ಅ.ನ.ಕೃ ಅವರು ತಮ್ಮ ಸಮಕಾಲೀನ ಇತರ ಬರಹಗಾರರಂತೆಯೇ ಕೇವಲ ಬರವಣಿಗೆಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಲ್ಲಿ ಸರ್ವಶ್ರೇಷ್ಠವೆನಿಸುವಂತಹ ಕೃತಿಗಳು ಅವರಿಂದ ಮೂಡಿಬರುತ್ತಿದ್ದವು. ಸಾಹಿತ್ಯ ನಿರ್ಮಾಣದ ಕಡೆಗೆ ಅವರು ತಮ್ಮನ್ನು ಕೇಂದ್ರೀಕರಿಸಿಕೊಂಡಿದ್ದರೆ ಮಹತ್ವದ ಸಾಹಿತ್ಯ ಸೃಷ್ಟಿಯನ್ನು ಮಾಡಬಲ್ಲವರಾಗಿದ್ದರು ಎಂಬುದನ್ನು ಅವರ ಅನೇಕ ಕಾದಂಬರಿಗಳು, ಕಥೆಗಳು, ನಾಟಕಗಳು, ಕೆಲವು ಲೇಖನಗಳು ಶ್ರುತಪಡಿಸುತ್ತವೆ. ಆದರೆ ಅವರ ಕನ್ನಡ ಸಂವೇದನೆ ಕೇವಲ ಸಾಹಿತ್ಯ ಕೇಂದ್ರಿತವಾಗಿರಲಿಲ್ಲ; ಅವರ ಸಂವೇದನೆ ಕನ್ನಡ ಕಟ್ಟುವ, ಕನ್ನಡಿಗರನ್ನು ಜಾಗೃತಗೊಳಿಸುವ, ಕನ್ನಡ ಭಾಷೆಗೆ, ಕನ್ನಡಿಗರಿಗೆ ಸೂಕ್ತ ಸ್ಥಾನಮಾನವನ್ನು ಕಲ್ಪಿಸುವ ಈ ಮೊದಲಾದ ಪ್ರಯತ್ನಗಳಲ್ಲಿದ್ದುದರಿಂದಾಗಿ, ಸಾಹಿತ್ಯಕೃಷಿ ಅನಕೃ ಅವರಿಗೆ ಇವುಗಳೆಲ್ಲದರ ಒಂದು ಭಾಗವಾಗಿ ಬಂದಿತೆಂದೇ ಹೇಳಬೇಕು. ಇಂತಹ ಹೋರಾಟಗಳು, ಭಾಷಣ, ಸಂಘಟನೆಗಳ ನಡುವೆಯೂ ತಮ್ಮ ಬರವಣಿಗೆಯನ್ನು ಮಾಡುತ್ತಾ, ಹೋರಾಟಕ್ಕೆ ಬೇಕಾದ ಅಗತ್ಯಗಳನ್ನು ಬರವಣಿಗೆಯ ಮುಖಾಂತರ ಪೂರೈಸಿಕೊಳ್ಳುತ್ತಾ, ಕನ್ನಡ ಓದುಗವಲಯವನ್ನು ವಿಸ್ತರಿಸುತ್ತಾ, ಒಟ್ಟೊಟ್ಟಿಗೆ ಎಲ್ಲಾ ಕಾರ್ಯಗಳನ್ನು ಮಾಡುತ್ತಾ ಬಂದರು.

ಜನತೆಯ ವಾಚನಾಭಿರುಚಿಯನ್ನು ಶ್ರೀಮಂತವಾಗಿಸುವಲ್ಲಿ ಅವರ ಪಾತ್ರ ಹಿರಿದು. ಅವರಿಂದಾಗಿ ಸಾಹಿತ್ಯ ಕೃತಿಗಳು, ಪ್ರಮುಖವಾಗಿ ಕಾದಂಬರಿಗಳ ಅತಿ ಬೇಡಿಕೆಗೆ ಅವರ ಕಾದಂಬರಿಗಳು ಪ್ರಧಾನ ಪಾತ್ರ ವಹಿಸಿವೆಯೆಂಬುದನ್ನು ಮರೆಯಬಾರದು. ಅವರ ಸಾಹಿತ್ಯ ವಿಪುಲವಾದ ಚರ್ಚೆಗೆ, ಗಂಭೀರ ವಿಮರ್ಶೆಗೆ ಒಳಗಾಗಲಿಲ್ಲ.

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅ.ನ. ಕೃಷ್ಣರಾಯರು ಮುಖ್ಯವಾಗಿ ಕಾಣಿಸಿಕೊಳ್ಳುವುದು ಕಾದಂಬರಿಕಾರರಾಗಿ. ಆದರೆ ಇದು ಅವರ ಶ್ರೀಮುಖವಾದರೂ ಇದೊಂದೇ ಅವರ ಮುಖವಲ್ಲ. ಕಥಾಸಂಗ್ರಹಗಳು, ಪ್ರಬಂಧಸಂಗ್ರಹಗಳು, ಜೀವನಚರಿತ್ರೆಗಳು, ಸಂಪಾದನ ಸಂಕಲನ ಗ್ರಂಥಗಳು, ಅನುವಾದ ಗ್ರಂಥಗಳು, ಹರಟೆ ಸಂಗ್ರಹ ಇವುಗಳ ಜೊತೆಗೆ ೨೨ ನಾಟಕಗಳು ಅ.ನ.ಕೃ ಅವರ ಸಾಹಿತ್ಯ ಸಾಗರಕ್ಕೆ ಸೇರಿವೆ.

ಕನ್ನಡ ರಂಗಭೂಮಿಯ ಅಸ್ತಿತ್ವ ಮತ್ತು ಜೀವಂತಿಕೆಗೆ ಕಾರಣರಾದ ಕೆಲವೇ ಕೆಲವು ಸಾಹಿತಿಗಳಲ್ಲಿ ಅ.ನ.ಕೃ ಅವರು ಕೂಡ ಪ್ರಮುಖರು. ಕನ್ನಡ ನಾಟಕ ಮತ್ತು ರಂಗಭೂಮಿಗೆ ಅ.ನ.ಕೃ ಅವರ ಕೊಡುಗೆ ಅಪಾರವಾದುದು. ಆಧುನಿಕ ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಸಾಹಿತ್ಯ ಪ್ರಕಾರಗಳಲ್ಲಿ ಹೊಸ ಅಲೆ, ಹೊಸಗಾಳಿ, ಹೊಸ ಚಿಂತನೆಗಳು ಪ್ರಬಲವಾಗಿ ಕಾಣಿಸಿಕೊಳ್ಳತೊಡಗಿದವು. ಇದೇ ಕಾಲದಲ್ಲಿ ಅಭಿಜಾತ ವೃತ್ತಿರಂಗ ಯುಗದ ಜೊತೆ ಜೊತೆಯಲ್ಲಿಯೇ ಹವ್ಯಾಸಿ ರಂಗವು ರೂಪುಗೊಳ್ಳತೊಡಗಿತು. ವೃತ್ತಿರಂಗಭೂಮಿ ನಾಟಕ ಮಾಧ್ಯಮದ ಮೂಲಕ ನಮ್ಮ ಪರಂಪರಾಗತ ಆಲೋಚನೆಗಳನ್ನು ವೈಭವೀಕರಿಸಿ ಹೇಳುತ್ತಿತ್ತು. ಅದ್ಧೂರಿ ದೃಶ್ಯವೈಭವ, ಕಲಾವಿದರ ಪ್ರೌಢ ಅಭಿನಯ, ಕಂದ-ವೃತ್ತಗಳ ಶಾಸ್ತ್ರೀಯ ಗಾಯನ, ಅತಿಯಾದ ಸಂಗೀತ ಒಂದು ವರ್ಗದ ಪ್ರೇಕ್ಷಕರ ಚಿತ್ತಭಿತ್ತಿಯಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತಿದ್ದಿತು. ಇಲ್ಲಿ ಪ್ರೇಕ್ಷಕ ಮತ್ತು ಕಥಾಚಿತ್ರಣದ ನಡುವೆ ಸಂಬಂಧವಿಲ್ಲದೆ ಭಾರೀ ಅಂತರವೊಂದು ನಿರ್ಮಾಣವಾಗಿತ್ತು. ಪ್ರೇಕ್ಷಕನ ಆಲೋಚನೆ ಚಿಂತನೆಗಳಿಗೆ ಗ್ರಾಸ ಒದಗಿಸದೆ ಒಂದು ಸಿದ್ಧ ಚೌಕಟ್ಟಿಗೆ ಅವನ ಮನಸ್ಸನ್ನು ಹೊಂದಿಸಿಕೊಂಡು ತನ್ನನ್ನು ತಾನು ಮುಗ್ಧವಾಗಿ ಒಪ್ಪಿಸಿಕೊಂಡು ಆ ನಾಟಕಗಳನ್ನು ನೋಡಬೇಕಾಗಿತ್ತು. ಪಾಶ್ಚಾತ್ಯ ಓದಿನ ಪ್ರಭಾವದಿಂದಾಗಿ ಸಾಹಿತ್ಯವನ್ನು ನೋಡುವ, ಓದುವ ಮತ್ತು ವ್ಯಾಖ್ಯಾನಿಸುವ ವಿಧಾನದಲ್ಲಿ ಬದಲಾವಣೆ ಉಂಟಾಯಿತು. ರಾಮಾಯಣ ಮತ್ತು ಮಹಾಭಾರತವನ್ನು ಕೂಡ ಹೊಸ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಸಾಧ್ಯ ಎಂಬುದರ ಅರಿವಾಯಿತು.

ಆರಂಭದಲ್ಲಿ ಸ್ವತಂತ್ರ ನಾಟಕಗಳು ಅರಳಿಕೊಳ್ಳಲು ಆಗಿನ್ನೂ ಕಾಲ ಪಕ್ವವಾಗಿರದ ಕಾರಣ, ಸಿದ್ಧರೂಪದಲ್ಲಿದ್ದ ಸಂಸ್ಕೃತ ನಾಟಕಗಳಿಗೆ ಮೊರೆಹೋಗಬೇಕಾಯಿತು. ಉತ್ತಮೋತ್ತಮ ಸಂಗೀತ ನಾಟಕಗಳು ಕನ್ನಡೀಕರಣಗೊಂಡು ರಂಗ ಶ್ರೀಮಂತಿಕೆಯಿಂದ ಅಲಂಕರಣಗೊಂಡು ಕಂಗೊಳಿಸಿದವು. ಅನಂತರ ಇಂಗ್ಲಿಷ್ ಸಾಹಿತ್ಯ ಕೃತಿಗಳು ಕನ್ನಡ ರೂಪಾಂತರ ಹಾಗೂ ಅನುವಾದಗೊಂಡು ಆಧುನಿಕ ರಂಗಭೂಮಿಯ ಆವಿಷ್ಕಾರಕ್ಕೆ ಕಾರಣವಾಗಿ ಪರಿಣಮಿಸಿದವು. ಈ ಬೆಳವಣಿಗೆಯ ಹಂತದಲ್ಲಿ ಬಸವಪ್ಪಶಾಸ್ತ್ರಿಗಳು, ಕೆರೂರು ವಾಸುದೇವಾಚಾರ್ಯರು, ಎಂ.ಎಲ್. ಶ್ರೀಕಂಠೇಶಗೌಡರು ಹಾಗೂ ಮುಂದುವರಿದಂತೆ ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಟಿ.ಪಿ. ಕೈಲಾಸಂ, ಸಂಸ, ಶ್ರೀರಂಗ, ಪರ್ವತವಾಣಿ, ಶಿವರಾಮಕಾರಂತ ಮೊದಲಾದವರು ಸಮಗ್ರ ರಂಗಕಲ್ಪನೆ ಮತ್ತು ಸಾಧ್ಯತೆಗಳಿಂದ ಉತ್ತಮ ಸಾಹಿತ್ಯಾತ್ಮಕ ಮತ್ತು ಪ್ರಯೋಗಾತ್ಮಕ ಕೃತಿಗಳನ್ನು ನೀಡಿದರು. ಈ ಸಾಲಿನಲ್ಲಿಯೇ ನಿಲ್ಲುವವರು ಅ.ನ. ಕೃಷ್ಣರಾಯರು.

ಅ.ನ.ಕೃ ಸಾಹಿತ್ಯಕ್ಕೆ ಪ್ರವೇಶ ಪಡೆದಿದ್ದು ನಾಟಕದ ಮೂಲಕ. ಅವರು ತಮ್ಮ ಮೊಟ್ಟಮೊದಲಿನ ನಾಟಕವನ್ನು ೧೯೨೪ರಲ್ಲಿ, ಅಂದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೊದಲನೆಯ ಮಹತ್ವದ ನಾಟಕವಾದ ಕೈಲಾಸಂ ಅವರ 'ಟೊಳ್ಳುಗಟ್ಟಿ' (೧೯೨೦) ಬಂದ ನಾಲ್ಕು ವರ್ಷಗಳ ನಂತರ ಬರೆದರು. ಆಗಿನ್ನೂ ಸಾಮಾಜಿಕ ನಾಟಕಗಳಿಗೂ ಕಾಲ ಇನ್ನೂ ಪಕ್ವವಾಗಿರಲಿಲ್ಲ. ಅಲ್ಲದೇ ಅದು ಕಂಪನಿ ನಾಟಕಗಳು ತಲೆಎತ್ತಿ ಮೆರೆಯುತ್ತಿದ್ದಂತಹ ಕಾಲ. ಅ.ನ.ಕೃ ತಮ್ಮ ಮೊದಲ ನಾಟಕ ಬರೆದುದಕ್ಕೆ ಹಿನ್ನೆಲೆಯೊಂದಿದೆ. ಅವರು ಬೆಳೆದದ್ದು ರಂಗಭೂಮಿಯ ಚಟುವಟಿಕೆಗಳಿಂದ ತುಂಬಿದ ಪರಿಸರದಲ್ಲಿ. ಅವರ ತಂದೆ ನರಸಿಂಗರಾಯರು ೧೯೦೦ರಲ್ಲಿ ಸ್ಥಾಪಿಸಲ್ಪಟ್ಟ ಅಮೆಚ್ಯೂರ್ ಸಂಘ ಬೆಂಗಳೂರು ಯೂನಿಯನ್ನಿನ ಸಂಸ್ಥಾಪಕ ಸದಸ್ಯರಾಗಿದ್ದರಷ್ಟೇ ಅಲ್ಲದೆ, ಆ ಕಾಲದ ಪ್ರಸಿದ್ಧ ನಟರಾದ ಮತ್ತು ರತ್ನಾವಳೀ ನಾಟಕ ಸಭೆಯ ಪ್ರವರ್ತಕರಾದ ನಾಟಕ ಶಿರೋಮಣಿ ಎ.ವ್ಹಿ. ವರದಾಚಾರ್ಯರ ಆಪ್ತಮಿತ್ರರೂ ಆಗಿದ್ದರು. ಬಾಲ್ಯದಿಂದಲೂ ಅ.ನ.ಕೃ ಅವರಿಗೆ ರಂಗಭೂಮಿಯಲ್ಲಿ ವಿಶೇಷ ಆಸಕ್ತಿಯಿತ್ತು. ಯಾವುದೇ ಭಾಷೆಯ ನಾಟಕ ಬೆಂಗಳೂರಿನಲ್ಲಿ ನಡೆದರೂ ಅದನ್ನು ಅ.ನ.ಕೃ ನೋಡದೇ ಇರುತ್ತಿರಲಿಲ್ಲ. ವರದಾಚಾರ್ಯರ ಶಾಕುಂತಲ, ರತ್ನಾವಳೀ ಮತ್ತು ರಾಮಾವರ್ಮ ಲೀಲಾವತಿ ನಾಟಕಗಳನ್ನು ಪದೇ ಪದೇ ನೋಡಿದ್ದರು. ಒಮ್ಮೆ ಮನೆಯಲ್ಲಿ ವರದಾಚಾರ್ಯರೊಡನೆ ಸಮಾಲೋಚನೆ ನಡೆಸುತ್ತಾ 'ಇದೇನು ಈ ಕಂದಾಚಾರದ ನಾಟಕಗಳನ್ನೇ ಆಡಬೇಕೆ? ರಂಗದಂಥ ಪ್ರಭಾವಶಾಲಿಯಾದ ಸಮಾಜ ಸುಧಾರಣಾ ಸಾಧನಶಕ್ತಿ, ಈ ಓಬಿರಾಯನ ಕಾಲದ ನಾಟಕಗಳ ಅನುವಾದಗಳ ಅಭಿನಯದಲ್ಲೇ ವ್ಯರ್ಥವಾಗಬೇಕೆ? ನಮ್ಮ ಸಮಾಜ, ನಮ್ಮ ಜನರನ್ನು ಬಿಂಬಿಸುವಂತ ನಾಟಕವನ್ನು ಬರೆಯಿಸಿ, ವರದಾಚಾರ್ಯರಂಥಾ ನಟರು ಅಭಿನಯಿಸಿದರೆ ಏನಾಗಲಾರದು?" ಎಂದು ಕೇಳಿದಾಗ ವರದಾಚಾರ್ಯರು ಇದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ಆದರೆ ಇಂದು ಕನ್ನಡದಲ್ಲಿ ಅಂತಹ ನಾಟಕಗಳಿಲ್ಲ, ನಾವು ಕೇಳಿದರೂ ಯಾರೂ ಬರೆದುಕೊಡುತ್ತಿಲ್ಲ ಎಂದರು. ಅದಕ್ಕೆ ಅ.ನ.ಕೃ ನಾನೇ ಬರೆದುಕೊಡುತ್ತೇನೆ ಎಂದು ಹೇಳಿ, ಒಂದೇ ರಾತ್ರಿಯಲ್ಲಿಯೇ ಕುಳಿತು ಸಾಮಾಜಿಕ ನಾಟಕವೊಂದನ್ನು ಬರೆದು ಸಿದ್ಧಪಡಿಸಿ, ಮರುದಿನ ತಾವು ಹೇಳಿದಂತೆ ಅದನ್ನು ಕೊಂಡುಹೋಗಿ ವರದಾಚಾರ್ಯರಿಗೆ ಕೊಟ್ಟಾಗ, ಅವರು ತೆಗೆದುಕೊಂಡು ಓದಿ ಮುಗಿಸಿ, ಆನಂದಬಾಷ್ಪದಿಂದ ಅ.ನ.ಕೃ ಅವರನ್ನು ಬೆನ್ನುತಟ್ಟಿ ಹರಸಿದರು. ನಾಟಕ ಬರೆಯುವಲ್ಲಿ ವರದಾಚಾರ್ಯರಿಂದ ತಮಗೆ ದೊರೆತ ಪ್ರೋತ್ಸಾಹದ ಕೃತಜ್ಞಾಪೂರ್ವಕ ಉಲ್ಲೇಖ ಅವರ ಹಲವಾರು ಬರಹಗಳಲ್ಲಿ ಬಂದಿದೆ.

ಈ ರೀತಿಯಲ್ಲಿ ಬಂದ ಅವರ ಮೊದಲ ನಾಟಕವೇ 'ಮದುವೆಯೋ ಮನೆಹಾಳೋ'. ಈ ನಾಟಕದ ಮುಖಾಂತರವಾಗಿ ನಾಟಕಕಾರ ಅ.ನ.ಕೃ.ವಾಗಿ ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯವಾದರು. ಈ ನಾಟಕವನ್ನು ಬರೆದಾಗ ಅವರಿಗೆ ಕೇವಲ ಹದಿನಾರು ವಯಸ್ಸು. ಈ ಎಳೆಯ ವಯಸ್ಸಿನಲ್ಲಿಯೇ ಬಹಳಷ್ಟು ನಾಟಕಗಳನ್ನು ನೋಡಿ ಮನಸ್ಸು ತೃಪ್ತಿಹೊಂದದೆ ಇಂತಹ ಕಂದಾಚಾರದ ನಾಟಕಗಳಿಂದ ಸಮಾಜ ಕಲಿಯುವುದೇನಿದೆ? ಸಮಾಜಕ್ಕೆ ಒಳಿತಾಗಬೇಕಾದರೆ ಸಾಮಾಜಿಕ ನಾಟಕಗಳೇ ಆಗಬೇಕು ಎಂದು ತಮ್ಮ ಚಿಕ್ಕವಯಸ್ಸಿನಲ್ಲಿಯೇ ನಾಟಕ ಸಾಹಿತ್ಯಕ್ಕೆ ಕೈಹಾಕಿದರು.

'ಮದುವೆಯೋ ಮನೆಹಾಳೋ' ರಚಿತಗೊಂಡದ್ದು ೧೯೨೪ರಲ್ಲಿ. ಅದನ್ನು ವರದಾಚಾರ್ಯರು ಮೆಚ್ಚಿಕೊಂಡರೂ ಅದನ್ನು ಪ್ರದರ್ಶಿಸುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಈ ನಾಟಕವನ್ನು ಒಂದು ಘಂಟೆಯ ಅವಧಿಯಲ್ಲಿ ಪ್ರದರ್ಶಿಸಬಹುದಿತ್ತು. ಆದರೆ ನಾಟ್ಯೋಪಜೀವಿಗಳಿಗೆ ಮೂರು ಅಥವಾ ನಾಲ್ಕು ಗಂಟೆಕಾಲ ಹಿಡಿಯುವ ದೀರ್ಘನಾಟಕಗಳು ಬೇಕಾಗಿತ್ತು. ಹಾಗಾಗಿ ಅಂದು ಪ್ರದರ್ಶಿತವಾಗದೆ ಹಾಗೇ ಉಳಿಯಿತು. ಅನಂತರ ಇದು ಅಮೆಚೂರ್ ನಾಟಕ ಮಂಡಲಿಯವರಿಂದ ಮೊತ್ತಮೊದಲ ಬಾರಿಗೆ ಅಭಿನಯಿಸಿಲ್ಪಟ್ಟಿತ್ತು. ಆಮೇಲೆ ಅನೇಕ ನಾಟಕ ಸಂಘಗಳು ಮೇಲಿಂದ ಮೇಲೆ ಇದನ್ನು ಅಭಿನಯಿಸಿದರು.

ಇದೊಂದು ಸಾಮಾಜಿಕ ನಾಟಕ. ಹನ್ನೆರಡು ದೃಶ್ಯಗಳುಳ್ಳ ಈ ನಾಟಕದಲ್ಲಿ ಅಂದಿನ ಸಮಾಜದಲ್ಲಿದ್ದ ವೃದ್ಧರ ವಿವಾಹ ಚಪಲವನ್ನು ಕುರಿತ ವಸ್ತುವನ್ನೊಳಗೊಂಡಿದೆ. ಮನುಷ್ಯನ ಲಜ್ಜೆಗೇಡಿತನಕ್ಕೆ, ಲಂಪಟತನಕ್ಕೆ ವಯಸ್ಸಿನ ಪರಿಮಿತಿ ಇತಿಮಿತಿಯೆಂಬುದಿಲ್ಲ. ಹಣಬಲದಿಂದ ಕನ್ಯೆಯನ್ನು ಕೊಂಡು ಮದುವೆಯಾಗುತ್ತೇನೆಂಬ ಹೆಬ್ಬಯಕೆಯಿಂದ ಮುದುಕನೊಬ್ಬನು ನೈತಿಕತೆಯ ಪರಿಧಿಯನ್ನು ದಾಟಿ ಮುಂದುವರೆದಾಗ ಉಂಟಾಗುವ ಪರಿಣಾಮಗಳನ್ನು ನಾಟಕ ವಿಡಂಬನಾತ್ಮಕ ಶೈಲಿಯಲ್ಲಿ ವಿಶ್ಲೇಷಿಸುತ್ತದೆ. ಪ್ರಸ್ತುತ ಇಂದಿನ ರಂಗಭೂಮಿಗೆ ಕೃತಕವೆನಿಸುವ ಮಾತುಗಳು ಸಂದರ್ಭಗಳು ಕೃತಕವಾಗಿ ಕಂಡರೂ ಅಂದಿನ ಸಂದರ್ಭಕ್ಕೆ ಅದು ಸೂಕ್ತವೆಂದು ಕಾಣುತ್ತದೆ. ತಮ್ಮ ಮೊದಲ ನಾಟಕದಲ್ಲಿಯೇ ಒಂದು ಸಾಮಾಜಿಕ ಸಮಸ್ಯೆಯನ್ನೆತ್ತಿಕೊಂಡು ಸಮಾಜಕ್ಕೊಂದು ಸಂದೇಶವನ್ನು ನೀಡಿರುವುದು ಅವರ ಸಾಮಾಜಿಕ ಕಳಕಳಿ ಮತ್ತು ಕಾಳಜಿಗೆ ನಿದರ್ಶನವಾಗಿದೆ.

ಮೊದಲನೆ ನಾಟಕದಲ್ಲಿ ವಿಡಂಬನೆ ಕಂಡುಬಂದರೂ, ಸಮಾಜದಲ್ಲಿನ ದುಷ್ಟತನ, ಸಂಪ್ರದಾಯಗಳು ನಮ್ಮ ಸಂಸ್ಕೃತಿಯನ್ನು ಅವನತಿಗಿಳಿಸಿದ ಜೀವಂತ ಚಿತ್ರಣ 'ಆಹುತಿ' (೧೯೩೦) ಎಂಬ ನಾಟಕದಲ್ಲಿ ಮೂಡಿನಿಂತಿದೆ. ಈ ನಾಟಕದಲ್ಲಿ

'ವೈಧವ್ಯ'ದ ಕುರಿತು ಅ.ನ.ಕೃ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ವೈಧವ್ಯದಿಂದಾಗಿ ಹೆಣ್ಣು ಅನುಭವಿಸುವ ನರಕಯಾತನೆ, ಪುರುಷಪ್ರಧಾನ ಸಮಾಜದ ಶೋಷಣೆ. ದೌರ್ಜನ್ಯಗಳನ್ನು ಇಲ್ಲಿ ಖಂಡಿಸಿದ್ದಾರೆ. ಸಂಪ್ರದಾಯ ಹಾಗೂ ಆಧುನಿಕತೆಯ ಮುಖಾಮುಖಿ ಇಲ್ಲಿ ಕಾಣಿಸಿಕೊಳ್ಳುತ್ತದೆ. ಬಾಲವಿಧವೆ ರಾಧ ನಾಟಕದ ಕೇಂದ್ರಪಾತ್ರ. ಮೊದಮೊದಲು ಸಂಪ್ರದಾಯದ ಹೆಸರಿನಲ್ಲಿ ಆಕೆಯ ವ್ಯಕ್ತಿತ್ವದ ಸಹಜ ವಿಕಾಸಕ್ಕೂ ಅವಕಾಶವಿಲ್ಲದೆ ಅದು ಮುದುಡಿದರೆ, ನಂತರದಲ್ಲಿ ಆಧುನಿಕತೆಯ ಹೆಸರಿನಲ್ಲಿ ಡಾ॥ ಮಾಧವರಾಯ ಆಕೆಯನ್ನು ಒಲಿಸಿಕೊಂಡು ಆಕ್ರಮಣ ಮಾಡಿ ಅವಳನ್ನು ದುರಂತಕ್ಕೆ ನೂಕುತ್ತಾನೆ. ಸಂಪ್ರದಾಯದ ಶ್ರೀಪತಿರಾಯ ತನ್ನ ಹೆಂಡತಿ ಮಕ್ಕಳ ಮೇಲೆ ನಡೆಸುವ ಕ್ರೌರ್ಯ, ಗುಂಡೂಬಾಯಿ ಸಂಪ್ರದಾಯದ ಹೆಸರಿನಲ್ಲಿ ರಾಧಾಳ ವ್ಯಕ್ತಿತ್ವದ ಮೇಲೆ ಮಾಡುವ ಆಕ್ರಮಣ, ಹಾಗೆಯೇ ಆಧುನಿಕ ವಿದ್ಯೆ ಪಡೆದ ಮಾಧವರಾಯನ ನಯವಂಚಕತನ – ಈ ಎಲ್ಲವನ್ನೂ ಅ.ನ.ಕೃ ಈ ನಾಟಕದಲ್ಲಿ ವಿಶ್ಲೇಷಣೆಗೆ ಗುರಿಪಡಿಸುತ್ತಾರೆ. ಆ ಸಂದರ್ಭದಲ್ಲಿ ಈ ನಾಟಕ ಸಂಪ್ರದಾಯಸ್ಥರ ತೀವ್ರ ವಿರೋಧಕ್ಕೆ ಕಾರಣವಾಗಿತ್ತು. ಅ.ನ.ಕೃ ಅವರ ಸಾಮಾಜಿಕ ನಾಟಕಗಳು ಸಮಾಜದ ಒಂದೊಂದು ಸಮಸ್ಯೆಯನ್ನು ಎತ್ತಿಕೊಂಡು ಸಾಮಾಜಿಕ ರೋಗಕ್ಕೆ ಶಸ್ತ್ರಕ್ರಿಯೆ ನಡೆಸುತ್ತದೆ. ಆಧುನಿಕ ಶಿಕ್ಷಣಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ಸಂಘರ್ಷ, ಅವಿಭಕ್ತ ಕುಟುಂಬಗಳ ವಿಘಟನೆ, ವೇಶ್ಯಾಸಮಸ್ಯೆ ಹಾಗೂ ಸ್ತ್ರೀಸ್ವಾತಂತ್ರ್ಯ, ದಾಂಪತ್ಯ ಸಮಸ್ಯೆಗಳು, ರಾಜಕೀಯ ಹಾಗೂ ಧಾರ್ಮಿಕ ಪ್ರಶ್ನೆಗಳು, ಕಾಮ ಮತ್ತು ಪ್ರೇಮದ ಸಮಸ್ಯೆ, ಬಡತನ ಮತ್ತು ಶ್ರೀಮಂತಿಕೆಯ ನಡುವಿನ ಅಂತರಗಳು ಇವೇ ಮೊದಲಾದ ಸಮಸ್ಯೆಗಳು ಅವರ ನಾಟಕಗಳಲ್ಲಿ ವಿಭಿನ್ನ ಮಟ್ಟಗಳಲ್ಲಿ ಚಿತ್ರಿತಗೊಂಡಿವೆ.

ಆದದ್ದೇನು (೧೯೩೧), ಗುಬ್ಬಚ್ಚಿಗೂಡು (೧೯೩೮), ಧರ್ಮಸಂಕಟ (೧೯೩೮), ವಿಶ್ವಧರ್ಮ (೧೯೩೮), ಬಣ್ಣದ ಬೀಸಣಿಗೆ (೧೯೩೮), ಪಾಲು (೧೯೭೨), ಜ್ವಾಲಾಮುಖಿ (೧೯೭೨), ಅವರ ಸಾಮಾಜಿಕ ವಸ್ತುವನ್ನೊಳಗೊಂಡ ನಾಟಕಗಳು (ಇವುಗಳಲ್ಲೇ ಏಕಾಂಕಗಳು ಸೇರಿವೆ).

'ಆದದ್ದೇನು' ಹೆಣ್ಣುಪಾತ್ರವೇ ಇಲ್ಲದ ಪ್ರಥಮ ಕನ್ನಡ ನಾಟಕ. ಅನ್ಯೋನ್ಯವಾಗಿರುವ ನಾಲ್ಕು ಜನ ಅಣ್ಣ–ತಮ್ಮಂದಿರಲ್ಲಿ ಒಡಕನ್ನುಂಟುಮಾಡಲು, ಆ ಮನೆತನಕ್ಕೆ ಅಪವಾದ ತರಲು ಪ್ರಯತ್ನಿಸುವ ದಾಯಾದಿ ಶ್ರೀಕಂಠಯ್ಯ ಹಾಗೂ ಊರು ದೊಡ್ಡಮನುಷ್ಯ ರಾಮಚಂದ್ರಯ್ಯ ಇವರ ಕುಟಿಲ ಇಲ್ಲಿಯ ವಸ್ತು. ನಾಟಕದಲ್ಲಿ ಸಮಸ್ಯೆ ತೀರಾ ಸಾಮಾನ್ಯ ಎನಿಸಿದರೂ ಪಾತ್ರಸೃಷ್ಟಿಯ ದೃಷ್ಟಿಯಿಂದ ಸುಂದರವಾಗಿದೆ.

'ಗುಬ್ಬಚ್ಚಿಗೂಡು' ನಾಟಕದಲ್ಲಿ ವಿಷಮ ವಿವಾಹದ ಸಮಸ್ಯೆ ಕಂಡುಬರುತ್ತದೆ. 'ಧರ್ಮಸಂಕಟ' ವೇಶ್ಯಾಸಮಸ್ಯೆಯನ್ನು ಕುರಿತು ಚರ್ಚಿಸುತ್ತದೆ. ಪುರುಷಪ್ರಧಾನವಾದ ಸಮಾಜವು ಸ್ತ್ರೀಯನ್ನು ಕಾಣುವ ಕೀಳುದೃಷ್ಟಿಯನ್ನು ವಿವರವಾಗಿ ಇಲ್ಲಿ ಕೊಡಲಾಗಿದೆ. 'ಬಣ್ಣದ ಬೀಸಣಿಗೆ' ನಾಲ್ಕೆ ಪಾತ್ರಗಳಲ್ಲಿ ಮೂಡಿಬಂದ ಕಲಾತ್ಮಕ ನಾಟಕ. ವಸ್ತು, ನಿರ್ವಹಣೆ, ತಂತ್ರದ ದೃಷ್ಟಿಯಿಂದ ನಾಟಕ ಉತ್ತಮವಾಗಿ ರಚಿತಗೊಂಡಿವೆ.

ಅ.ನ.ಕೃ ಬಹಳಷ್ಟು ಸಂದರ್ಭಗಳಲ್ಲಿ ತಮ್ಮ ವಿಚಾರಗಳಿಗೆ ಮೂರ್ತಸ್ವರೂಪ ಕೊಡಲು ಕಾದಂಬರಿಗಳನ್ನು ಉಪಯೋಗಿಸಿಕೊಂಡಂತೆ ನಾಟಕಗಳನ್ನು ಬಳಸಿಕೊಂಡಿದ್ದಾರೆ. ಕುವೆಂಪು ಕಾರಂತರಾದಿಯಾಗಿ ಆ ಕಾಲದ ಕೆಲವು ಬರಹಗಾರರು ನಾಟಕ ರಚನೆಯನ್ನು ಸಮಾಜ ಸುಧಾರಣೆಯ ಸಾಧನವನ್ನಾಗಿ, ಪ್ರಗತಿಪರ ವೈಚಾರಿಕ ಸಂಗತಿಗಳನ್ನು ಪ್ರಕಟಿಸಲು ಬಳಸಿಕೊಂಡರು. ಅ.ನ.ಕೃ ಅವರಿಗೂ ಇದೇ ಉದ್ದೇಶವಿದ್ದಂತಿದೆ. ನಾಟಕ ವಿಲಾಸಸಾಧನವಲ್ಲ. ವಿಚಾರದ ಹಾದಿಯಲ್ಲಿ ಮಾನವನ ವಿಕಾಸ ಸಾಧಿಸುವುದು ಎಂಬ ಅವರ ನಂಬಿಕೆಯೇ ಅವರ ನಾಟಕದ ಸ್ವರೂಪವನ್ನು ರೂಪಿಸಿದೆ.

ಒಬ್ಬ ಸಾಹಿತಿಗಿಂತ ಹೆಚ್ಚಾಗಿ ಕನ್ನಡ ಚಳವಳಿಗಾರರಾಗಿ ಗುರುತಿಸಿಕೊಂಡವರು ಅ.ನ.ಕೃ. ಅವರ ಕನ್ನಡಾಭಿಮಾನ ಪ್ರಶ್ನಾತೀತವಾದುದು. ಕನ್ನಡ ಚಳವಳಿಯನ್ನು ಶ್ರೀಸಾಮಾನ್ಯನ ಬಳಿಗೆ ತೆಗೆದುಕೊಂಡು ಹೋದ ಅ.ನ.ಕೃ. ಕನ್ನಡ ಚಳವಳಿ ಎಂಬುದು ಕೇವಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವಕ್ತಾರರ ಸೊತ್ತಲ್ಲ ಎಂದು ನಂಬಿದ್ದವರು. ಅದರ ಕಾವೂ ಅವರ ನಾಟಕಗಳಲ್ಲೂ ಕಾಣಿಸಿಕೊಳ್ಳುತ್ತದೆ. ಅವರ 'ಜ್ವಾಲಾಮುಖಿ' ನಾಟಕದಲ್ಲಿ ಕನ್ನಡಿಗರ ಅಭಿಮಾನ ಶೂನ್ಯತೆಯ ವಿಶ್ಲೇಷಣೆ ಕಂಡುಬರುತ್ತದೆ. ಇಲ್ಲಿ ಕನ್ನಡಿಗರು ಕನ್ನಡ ಮಾತನಾಡುವುದರ ಬಗೆಗೆ ತಳೆದಿರುವ ನಿಲುವನ್ನು ಇತರ ಪ್ರಾಂತೀಯ ಭಾಷಿಗರು ತಳೆದಿರುವ ನಿಲುವಿನೊಂದಿಗೆ ಮುಖಾಮುಖಿಯಾಗಿಸುತ್ತಾರೆ. ನಾಟಕದ ವಸ್ತು ಸಂಪೂರ್ಣ ಬೇರೆಯೇ ಇದ್ದರೂ, ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ, ಒಂದು ಪ್ರಸಂಗವನ್ನು ಸೃಷ್ಟಿಸಿ ತಮ್ಮ ವಿಚಾರಗಳನ್ನು ಇಲ್ಲಿ ಹರಿಯಬಿಡುತ್ತಾರೆ. 'ಗುಬ್ಬಚ್ಚಿ ಗೂಡು' ನಾಟಕದ ನೋಟ ಮೂರರಲ್ಲಿ ಸರೋಜ ಮತ್ತು ಗೋಡಬೋಳೆಯವರ ಮಾತುಗಳು ಇದನ್ನು ಎತ್ತಿ ತೋರಿಸುತ್ತದೆ. "ಕನ್ನಡ ದೇಶದಲ್ಲಿ ಹುಟ್ಟಿ, ಬೆಳೆದು, ಮರಾಠೀ ಮಾತನಾಡ್ತೀರಲ್ಲಾ ನಿಮಗೆ ನಾಚಿಕೆಯಾಗೋದಿಲ್ವೇ ಮಿ. ಗೋಡಬೋಳೆ" ಎಂದು ನೇರವಾಗಿ ನುಡಿಯುವ ಸರೋಜ, ಹಾಗೆಯೇ "ಕನ್ನಡದ ಗಂಡಸರು ಮರಾಠಿ ಗಂಡಸರನ್ನು ಮದುವೆ ಮಾಡಿಕೊಂಡರೆ ಮನೆಯ ಭಾಷೆ – ಆಗಲೂ ಮರಾಠಿ' ಎಂದು ಆಕ್ಷೇಪಿಸುತ್ತಾಳೆ.

ಇಲ್ಲಿ ಕನ್ನಡಿಗರಿಗೆ ಮಾತೃಭಾಷೆಯ ಮೇಲಿರುವ ನಿರಭಿಮಾನ, ಅನ್ಯಭಾಷೆಯ ಮೇಲಿರುವ ಅಕ್ಕರೆಯನ್ನು ಲೇವಡಿ ಮಾಡುತ್ತಾಳೆ.

ಕನ್ನಡ ನಾಡು, ನುಡಿಯ ಬಗ್ಗೆ ಅ.ನ.ಕೃ ಅವರಿಗಿದ್ದ ಕಳಕಳಿಯು ಅವರ ನಡೆ, ನುಡಿಯ ಹಾಗೆಯೇ ನಾಟಕಗಳಲ್ಲಿಯೂ ಅಭಿವ್ಯಕ್ತವಾಗಿದೆ. ೧೯೭೨ರಲ್ಲಿ ಪ್ರಕಟಗೊಂಡಿರುವ 'ಜ್ವಾಲಮುಖಿ' ನಾಟಕ ಅದಕ್ಕೆ ಉತ್ತಮ ನಿದರ್ಶನವಾಗಿದೆ. ಎಚ್.ಎಸ್. ಉಮೇಶ ಅವರು ಈ ನಾಟಕವನ್ನು ಕುರಿತು "ಕನ್ನಡದ ಅಳಿವು–ಉಳಿವಿನ ಪ್ರಶ್ನೆಯನ್ನೇ ಕೇಂದ್ರವಸ್ತುವಾಗುಳ್ಳ ನಾಟಕವನ್ನು ಹುಡುಕಹೊರಟರೆ, ಬಹುಶಃ ಆ ಧಾರೆಯ ಮೊದಲ ನಾಟಕವಾಗಿ ಇದು ನಿಲ್ಲುತ್ತದೆ, ಅಷ್ಟೇ ಏಕೆ, ಏಕೈಕ ನಾಟಕವಾಗಿರುವ ಸಾಧ್ಯತೆಯೂ ಇದೆ" ಎಂದು ಅಭಿಪ್ರಾಯಪಡುತ್ತಾರೆ. ಜ್ವಾಲಾಪ್ರಸಾದ ಎಂಬಾತ ಉತ್ತರದಿಂದ ಹಿಂದೀ ಪ್ರಚಾರಕ್ಕೋಸ್ಕರ ಬಂದು, ರಘೋತ್ತಮರಾಯನ ಬಳಿ ಸಹಾಯವನ್ನು ಅಪೇಕ್ಷಿಸಿ, ಆತನ ಹೆಂಡತಿ ಸೀತೆಯನ್ನು ಓಡಿಸಿಕೊಂಡು ಹೋಗುವ ಮೂಲಕ ರಘೋತ್ತಮರಾಯನ ಸಂಸಾರವನ್ನು ಒಡೆದಂತೆ, ಹಿಂದಿನ ಬಾಗಿಲಿನಿಂದ ಬಂದಿರುವ ಹಿಂದಿ, ಕನ್ನಡದ ಕೋಟೆಗೆ ಕನ್ನಹಾಕಿರುವುದನ್ನು ಪಾತ್ರಗಳ ಮೂಲಕ ಅ.ನ.ಕೃ ಅಭಿವ್ಯಕ್ತಿಸಿದ್ದಾರೆ. ಒಂದು ಭಾಷೆಯ ಏಳ್ಗೆಯ ದೃಷ್ಟಿಯಿಂದ ಮತ್ತೊಂದು ಭಾಷೆಯನ್ನು ಬಗ್ಗುಬಡಿಯಲು ಹೊರಟ ಸಮಸ್ಯೆಯನ್ನು ಇಟ್ಟುಕೊಂಡು ನಾಟಕ ರಚಿತವಾಗಿದೆ. ನಾಟಕದ ಸಂಭಾಷಣೆಯಲ್ಲಿ ನಾಟಕೀಯ ಅಂಶಗಳು ಕಂಡುಬರುವುದಿಲ್ಲ. ಭಾವುಕತೆ ಪ್ರಧಾನವಾಗಿರುವ ಈ ನಾಟಕದಲ್ಲಿ ನಾಟಕಕಾರರ ಕನ್ನಡ ಪರ ನಿಲುವಿನಲ್ಲಿ ಸ್ಪಷ್ಟನುಡಿ ಇದೆ. "ಬರಲಿ, ಆದರೆ ಸ್ನೇಹಿತನ ಹಾಗೆ ಬರಲಿ. ಸಂಸ್ಕೃತಿಯ ಪ್ರಸಾರಕ್ಕೆ ಬರಲಿ. ಕನ್ನಡ ಸಂಸ್ಕೃತಿ ಹೆಚ್ಚುಗಾರಿಕೆಯನ್ನರಿತು ತನ್ನ ಸಂಸ್ಕೃತಿಯ ಪರಿಚಯ ಮಾಡಿಕೊಡುವುದಕ್ಕೆ ಬರಲಿ... ನಮಗೆ ಹಿಂದಿ ಸಂಸ್ಕೃತಿ ಬೇಕು. ಆದರೆ ಅವುಗಳ ಹೆಸರಿನಲ್ಲಿ ನಡೆಯುವ ಅಪಪ್ರಚಾರ, ಕನ್ನಡದ ಅವಹೇಳನ ಬೇಡ" ಎನ್ನುವ ಮೂರ್ತಿಯ ಮಾತುಗಳು ಅ.ನ.ಕೃ ನೇರಮಾತುಗಳೇ ಆಗಿವೆ. ಇಡೀ ನಾಟಕ ಹತ್ತು ಹಲವು ಸಂಬಂಧೀ ವಿಚಾರಗಳನ್ನು ಚರ್ಚಿಸುತ್ತದೆ.

ಅ.ನ.ಕೃ ಅವರ ಸಾಮಾಜಿಕ ನಾಟಕಗಳು ಮುಖ್ಯವಾಗಿ ವಿಚಾರಪ್ರಧಾನ, ಸಮಸ್ಯಾಪ್ರಧಾನ ಮತ್ತು ಸಮಾಜ ಸುಧಾರಣೆಯ ಉದ್ದೇಶಗಳನ್ನಿಟ್ಟುಕೊಂಡು ರಚಿತಗೊಂಡಿವೆ. ಅವರು ಪೌರಾಣಿಕ ನಾಟಕಗಳನ್ನು ಬರೆದರೂ ಆ ನಾಟಕಗಳು ಸಮಕಾಲೀನ ಪ್ರಜ್ಞೆಯನ್ನೇ ಬಿಂಬಿಸುತ್ತವೆ. ವಸ್ತು ಪೌರಾಣಿಕವಾದರೂ ಅದನ್ನು ಮಾನವೀಯುಗೊಳಿಸುವುದರ ಮೂಲಕ ಅನಕೃ ಈ ನಾಟಕಗಳನ್ನು

ಸಮಕಾಲೀನಗೊಳಿಸುತ್ತಾರೆ. ಅವರ ಸ್ವರ್ಣಮೂರ್ತಿ ಮತ್ತು ಹಿರಣ್ಯಕಶಿಪು ಎಂಬ ಎರಡು ನಾಟಕಗಳು ಅವರ ಸಮಕಾಲೀನ ಪ್ರಜ್ಞೆಯನ್ನು ಬಿಂಬಿಸುತ್ತದೆ. ಇವು ಆಧುನಿಕ ಸಂವೇದನೆಗಳನ್ನು, ವಿಚಾರಗಳನ್ನು ಪುರಾಣ ವಸ್ತು ವಿನ್ಯಾಸದಲ್ಲಿಯೇ ಧ್ವನಿಸುವ ಪ್ರಯತ್ನಗಳಾಗಿವೆ. ಅವರೇ ಹೇಳುವಂತೆ "ಪುರಾಣಕ್ಕೂ ಪುರಾಣದ ವಸ್ತುಗಳಿಗೂ ಯಾವ ಅರ್ಥ ಮಹತ್ವವುಂಟೋ ಅದನ್ನು ಈ ನಾಟಕ ಗಮನಕ್ಕೆ ತೆಗೆದುಕೊಂಡಿಲ್ಲ. ಯಾಕೆಂದರೆ ಇದನ್ನು ಬರೆದ ನಾನು ಪುರಾಣಪ್ರಿಯನಾದರೂ ಪುರಾಣದ ದೃಷ್ಟಿಪ್ರಿಯನಲ್ಲ. ಪುರಾಣಕಥೆ ಬೇರೆಯಾಗುವುದಕ್ಕೆ ಇಂದಿನ ಸಂಸ್ಕೃತಿ ದೃಷ್ಟಿಗಳೇ ಕಾರಣ. ಅಂದಿನ ವಿಚಾರ ಇಂದಿನ ಅನಾಚಾರ. ಇಂದಿನ ವಿಚಾರ ಅಂದಿನ ದೃಷ್ಟಿಯಲ್ಲಿ ಪ್ರಾಯಶಃ ಅವಿಚಾರವೇ ಆಗಬಹುದು"– ಇದು ಅ.ನ.ಕೃ ಅವರ ದೃಷ್ಟಿ.

ಸ್ವರ್ಣಮೂರ್ತಿ ನಾಟಕ ಸೀತಾಪರಿತ್ಯಾಗದ ಕಥೆಯ ವಸ್ತುವನ್ನೊಳಗೊಂಡಿದೆ. ಇಲ್ಲಿ ರಾಮನ ನಿರ್ಧಾರಕ್ಕೆ ಅಗಸ ಕಾರಣವಾಗುವುದಿಲ್ಲ. ಆತ ಬಹುಜನಾಭಿಪ್ರಾಯಕ್ಕೆ ಮನ್ನಣೆ ನೀಡಬೇಕಾಗುತ್ತದೆ. ರಾಮನ ಸೀತಾ ಪರಿತ್ಯಾಗ ನಿರ್ಧಾರವನ್ನು ಬದಲಿಸಲು ವಸಿಷ್ಠರು, ಲಕ್ಷ್ಮಣ, ಊರ್ಮಿಳೆ, ಕಂಚುಕಿ ಇವರು ಮೌನದ ಅಸಹಕಾರ ಹೂಡುವುದು. ಆ ಸಂದರ್ಭದ ಬ್ರಿಟಿಷ್ ದಬ್ಬಾಳಿಕೆಯ ಹಿನ್ನಲೆಯಲ್ಲಿನ ಪ್ರಜಾಪ್ರಭುತ್ವದ ಹೋರಾಟವನ್ನೂ, ಗಾಂಧೀಜಿಯವರ ಅಸಹಕಾರ ಚಳವಳಿಯ ಪ್ರಭಾವವನ್ನು ಸೂಚಿಸುತ್ತದೆ. ಸಾಂಕೇತಿಕತೆಯನ್ನು ನಾಟಕದುದ್ದಕ್ಕೂ ಉಳಿಸಿಕೊಂಡು ಮಾನವೀಯ ಗುಣ, ಭಾವ, ಸಂಬಂಧಗಳ ಸುಂದರ ಚಿತ್ರ ಇಲ್ಲಿ ಮೂಡಿನಿಂತಿದೆ. ಕೊನೆಯಲ್ಲಿ ರಾಮ ಒಂದು ಕರಾರು ಹಾಕುತ್ತಾನೆ. ಸೀತೆ ಮತ್ತೊಮ್ಮೆ ಸತೀತ್ವವನ್ನು ಪರೀಕ್ಷೆಗೊಡ್ಡಬೇಕು ಎಂದು. ಇದನ್ನು ತಿಳಿದ ಸೀತೆ ಸಾಯುತ್ತಾಳೆ. ನಾಟಕ ಪುರಾಣದ ರಮ್ಯತೆಯಿಂದ ವಾಸ್ತವತೆಯತ್ತ ಹೊರಳುತ್ತದೆ.

ಇದೇ ಬಗೆಯ ಆಧುನೀಕರಣ ಅವರ 'ಹಿರಣ್ಯಕಶಿಪು' ನಾಟಕದಲ್ಲೂ ಕಂಡುಬರುತ್ತದೆ. ಇಲ್ಲಿ ಪ್ರಜಾಭಿಪ್ರಾಯಕ್ಕೆ ವಿರುದ್ಧ ನೆಲೆಯಾದ ಸರ್ವಾಧಿಕಾರದ ಸ್ವರೂಪ ಚಿತ್ರಿತವಾಗಿದೆ. ಹಿರಣ್ಯಕಶಿಪು ತನ್ನ ಇಷ್ಟವನ್ನು ಪ್ರಜೆಗಳ ಮೇಲೆ ಹೇರುತ್ತಾನೆ. ಇಲ್ಲಿ ಎಲ್ಲರೂ ಸಾಮಾನ್ಯ ಮಾನವರೆ. ಪ್ರಹ್ಲಾದ ಜನರ ಸಾತ್ವಿಕ ಹೋರಾಟದ ಪ್ರತೀಕವಾಗುತ್ತಾನೆ. ಪ್ರಹ್ಲಾದ ನಾನಾ ರೀತಿಯಲ್ಲಿ ಸಾವಿನಿಂದ ಪಾರಾಗುವುದು ದೈವೀ ಪವಾಡವಾಗದೆ ಮಂತ್ರಿಯ ಉಪಾಯವಾಗಿರುತ್ತದೆ. ನರಸಿಂಹ ಕಂಬವೊಡೆದು ಬರುವ ಅವತಾರ ಪುರುಷನಲ್ಲ. ಆತ ಒಬ್ಬ ಮಂತ್ರಿ, ಪ್ರಜಾಪ್ರತಿನಿಧಿ, ಪ್ರಹ್ಲಾದನ ಹಿರಿಯ ತಪ್ಪ. ವಸ್ತು ರಚನೆಯಲ್ಲಿನ ಇಂತಹ ಬದಲಾವಣೆಗಳು ಅ.ನ.ಕೃ ಅವರ ದೃಷ್ಟಿಯನ್ನು ಬಿಂಬಿಸುತ್ತವೆ.

ಅನುಗ್ರಹ, ರಾಜನರ್ತಕಿ ಎಂಬ ಎರಡು ಚಿಕ್ಕ ನಾಟಕಗಳನ್ನು ರಾಷ್ಟ್ರವೀರ ಬೆಂಗಳೂರು ಕೆಂಪೇಗೌಡ, ಜಗಜ್ಯೋತಿ ಬಸವೇಶ್ವರ, ರಜಪೂತಲಕ್ಷ್ಮೀ ಎಂಬ ದೊಡ್ಡ ಐತಿಹಾಸಿಕ ನಾಟಕಗಳನ್ನೂ ಬರೆದಿದ್ದಾರೆ. 'ಅನುಗ್ರಹ' ಐತಿಹಾಸಿಕ ಏಕಾಂಕ ನಾಟಕ. ಬುಕ್ಕರಾಯನ ಕಾಲದ ರಾಜಕೀಯ ಘಟನೆಗಳನ್ನಾಧರಿಸಿದ್ದು. ಇಲ್ಲಿ ಬೇಡರ ನಾಯಕನಾದ ಚೆನ್ನನಾಯಕನ ಶೌರ್ಯ, ಸಾಹಸ, ಮಾನವೀಯತೆ, ರಾಜಭಕ್ತಿಗಳ ಚಿತ್ರಣ ಕಂಡುಬರುತ್ತದೆ. 'ರಾಜನರ್ತಕಿ' ನಾಟಕದಲ್ಲಿ ಉತ್ತರಭಾರತ, ದಕ್ಷಿಣಭಾರತಗಳ ನಡುವಣ ಸಂಸ್ಕೃತಿಯ ಕೊಡುಕೊಳ್ಳುವಿಕೆಯ ಚಿತ್ರಣವಿದೆ. ಇಲ್ಲಿ ಬರುವ ಐತಿಹಾಸಿಕ ಪಾತ್ರಗಳಾದ ಶ್ರೀಹರ್ಷ, ಪುಲಿಕೇಶಿಯರ ಘಟನೆ, ಮಾಧುರಿ (ನರ್ತಕಿ), ವಸುಕೀರ್ತಿ (ಮಹಾಶಿಲ್ಪಿ)ಗಳ ಕೋಮಲ ಭಾವಗಳ ವಿಕಾಸ, ಪ್ರೀತಿ, ಅವರು ನಂಬಿದ ರಾಜಸೇವೆ, ತ್ಯಾಗ –ಅದಕ್ಕೆ ರಾಜಗೌರವ ಎಲ್ಲವೂ ಹೃದ್ಯವಾಗಿ ಮೂಡಿವೆ.

ಬಸವಣ್ಣನವರ ವಚನಗಳ ಅಭ್ಯಾಸ, ವಿವಿಧ ಕಾವ್ಯಗಳಲ್ಲಿ ಮೂಡಿರುವ ಬಸವಣ್ಣನ ಘನವಾದ ವ್ಯಕ್ತಿತ್ವಗಳಿಂದ ಪ್ರಭಾವಿತರಾಗಿ ವಿಶಿಷ್ಟವೆನಿಸುವ, ಬಹುದೀರ್ಘವಾದ 'ಜಗಜ್ಯೋತಿ ಬಸವೇಶ್ವರ' ನಾಟಕವು ರಚಿತಗೊಂಡಿದೆ. ಕೆ. ಹಿರಣ್ಣಯ್ಯನವರು ರಂಗದಲ್ಲಿ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದರು. "ಸಿಂಗರಾಜಾದಿ ಕವಿಗಳಿಂದ ದೊರೆಯುವ ಕೆಲ ವಿಷಯಗಳ ಜೊತೆಗೆ, ಬಸವಣ್ಣನವರ ವಚನಗಳಿಂದ ಊಹಿಸಬಹುದಾದ ವಿಷಯಗಳನ್ನು ಸೇರಿಸಿ ಒಂದು ಚಿತ್ರವನ್ನು ರಚಿಸಲು ನಾನು ಯತ್ನಿಸಿದ್ದೇನೆ. ಬಸವಣ್ಣನವರು ವೀರಶೈವ ಸಮಾಜಕ್ಕೆ ಮಾತ್ರವೇ ಅಲ್ಲ. ಇಡಿಯ ಲೋಕಕ್ಕೆ ಮಾಡಿದ ಉಪಕಾರವೇನು, ನೀಡಿದ ಕಾಣಿಕೆಯೇನು, ಕೊಟ್ಟ ಸಂದೇಶ ಯಾವುದು ಎಂಬ ವಿಚಾರ ಮಾಡಿದ್ದೇನೆ. ನಾನು ನೋಡುವ ಬಸವೇಶ್ವರ, ಪುರಾಣಕಾರರು ಕಾಣಿಸಿರುವ ಪರಮತಭರ್ತ್ಸನಾಪ್ರಿಯನೂ, ಕಟುಧರ್ಮಿಯೂ, ಜಾತ್ಯಾಂಧನೂ ಆದ ಬಸವೇಶ್ವರನಲ್ಲ. ದಯೆಯ, ಸಹನೆಯ, ಸಂಯಮದ, ತ್ಯಾಗದ ತಿರುಳನ್ನು ಎತ್ತಿ ತೋರಿ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಬಸವೇಶ್ವರ" ಇದು ಅ.ನ.ಕೃ ಅವರ ನಿಲುವು. ಹಲವು ವಿಚಾರಗಳಲ್ಲಿ ವೈಶಿಷ್ಟ್ಯತೆಯನ್ನು ಮೆರೆಯುವ ಈ ನಾಟಕದ ದೋಷವೆಂದರೆ ಐವತ್ತಕ್ಕೂ ಹೆಚ್ಚಿರುವ ಪಾತ್ರಗಳು, ದೃಶ್ಯಗಳ ವಿಪುಲತೆ ರಂಗದ ಮೇಲೆ ತರಲು ಅಡ್ಡಿಯಾಗುತ್ತದೆ.

'ರಜಪೂತಲಕ್ಷ್ಮೀ' ಅವರ ಉತ್ತಮ ನಾಟಕಗಳಲ್ಲೊಂದು. ಅ.ನ.ಕೃ ಅವರನ್ನು ಕಾಡಿರುವ ಸಮಾಜದ ಅನೇಕ ಸಮಸ್ಯೆಗಳಲ್ಲಿ ಹಿಂದೂ–ಮುಸ್ಲಿಂ ಸಮಸ್ಯೆಯೂ ಒಂದು. ಅವರ ಸಾಹಿತ್ಯ–ಚಿಂತನೆಗಳಲ್ಲಿ ಪ್ರಧಾನವಾಗಿ ಇದು ಕಂಡುಬರುತ್ತದೆ. ಈ ನಾಟಕದಲ್ಲಿಯೂ ಅದು ಚಿಂತಿತಗೊಂಡಿದೆ. ಹಿಂದೂ ಮುಸಲ್ಮಾನರು ಒಂದಾಗಿ

ಬಾಳಬೇಕು; ಅವರಿಬ್ಬರಲ್ಲಿ ಐಕ್ಯಮತ್ಯ ಅಗತ್ಯವೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಹಿಂದೂ ಹೇಡಿಯಾಗಿರಬಾರದು. ಆತ ತನ್ನ ಶಕ್ತಿಯನ್ನು ಗುರುತಿಸಿಕೊಂಡು, ಕ್ಲೈಬ್ಯವನ್ನು ಕಳೆದುಕೊಂಡು ಕ್ಷತ್ರಿಯನಾಗಿ, ವಿರೋಚಿತವಾಗಿ ಸಖ್ಯ ಸಂಪಾದಿಸಬೇಕು – ಇದು ನಾಟಕದ ಉದ್ದೇಶ. ಮೊಗಲರ ಇತಿಹಾಸದಿಂದ ಗಮನಾರ್ಹ ಘಟನೆಯೊಂದನ್ನು ಆಯ್ದುಕೊಂಡು ನಾಟಕಕಾರರು ಈ ನಾಟಕವನ್ನು ಹೆಣೆದಿದ್ದಾರೆ. ಈ ನಾಟಕದ ಮುಖ್ಯ ಪಾತ್ರಗಳು ಎರಡು: ಯೋಷಿ ಮತ್ತು ಅತ್ತರ್. ಯೋಷಿ ಐತಿಹಾಸಿಕ ವಸ್ತುವಾದರೆ ಅತ್ತರ್ ನಾಟಕಕಾರರ ಕಲ್ಪನೆಯ ಕೂಸು. ಈ ಇಬ್ಬರು ಹಿಂದು ಮತ್ತು ಮುಸ್ಲಿಂ ಧರ್ಮಗಳಲ್ಲಿಯ ಶ್ರೇಷ್ಠ ಅಂಶಗಳೇ ಮೂರ್ತಿಭವಿಸಿದಂತಿದ್ದಾರೆ. ಆದರೆ ಅ.ನ.ಕೃ ಅವರು ಅಕ್ಬರ್‌ನನ್ನು ಚಿತ್ರಿಸಿರುವ ರೀತಿ ಅಚ್ಚರಿ ತರುವಂತಿದೆ. ಏಕೆಂದರೆ ಭಾರತದ ಇತಿಹಾಸದಲ್ಲಿ ಅಕ್ಬರ್‌ಗೆ ವಿಶಿಷ್ಟ ಸ್ಥಾನವಿದೆ. ಎಲ್ಲಾ ಧರ್ಮೀಯರನ್ನೂ ಸಮಾನವಾಗಿ ನಡೆಸಿಕೊಂಡ ಕೆಲವೇ ಕೆಲವು ದೊರೆಗಳಲ್ಲಿ ಆತನೂ ಒಬ್ಬ ಎಂಬುದನ್ನು ಇತಿಹಾಸಕಾರರು ಹೇಳಿದ್ದಾರೆ. ಆದರೆ ಅ.ನ.ಕೃ ಅಕ್ಬರ್‌ನನ್ನು ಕಾಮಾಂಧನಾಗಿ, ಒಳಗೊಳಗೆ ಹಿಂದೂದ್ವೇಷಿ ಎನ್ನುವಂತೆ ಚಿತ್ರಿಸಿಬಿಟ್ಟಿದ್ದಾರೆ. ರಜಪೂತರ ಕ್ಷಾತ್ರ, ದೇಶಪ್ರೇಮ, ಧರ್ಮನಿಷ್ಠೆಯನ್ನು ಎತ್ತಿಹಿಡಿಯುವ ಆತುರದಲ್ಲಿ ಅಕ್ಬರ್‌ನನ್ನು ತಳಕ್ಕೆ ತಳ್ಳಿದ್ದಾರೆ ಎಂದೆನಿಸುತ್ತದೆ.

ಉಳಿದಂತೆ ಕೆಂಪೇಗೌಡರನ್ನು ಕುರಿತು ಎರಗು ನಾಟಕಗಳಲ್ಲಿ ಕೆಂಪೇಗೌಡರನ್ನು ರಾಷ್ಟ್ರಧುರೀಣನನ್ನಾಗಿಯೂ, ಕಿತ್ತೂರು ಚೆನ್ನಮ್ಮ ನಾಟಕದಲ್ಲಿ ಆಕೆಯ ವೀರಕ್ಷಾತ್ರವನ್ನು ಬಿಂಬಿಸಿದ್ದಾರೆ. ಅ.ನ.ಕೃ ಅವರ ಪ್ರತಿಯೊಂದು ನಾಟಕಗಳಲ್ಲಿ ಒಂದೊಂದು ಅಂಶವು ಸೆರೆಹಿಡಿಯುತ್ತವೆ. ಕೆಲವೊಂದು ನಾಟಕಗಳಲ್ಲಿ ಸನ್ನಿವೇಶ ಕಳೆಯನ್ನು ತಂದರೆ, ಕೆಲವೊಮ್ಮೆ ಪಾತ್ರಗಳು, ಸಂಭಾಷಣೆಗಳು, ತಂತ್ರ ನಾಟಕದ ವಸ್ತು ನಮ್ಮನ್ನು ಆಕರ್ಷಿಸುತ್ತವೆ. ಅವರ ಸಾಮಾಜಿಕ ನಾಟಕಗಳಲ್ಲಿ ಕುಟುಂಬ ಚಿತ್ರಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ಹಾಗೆಯೇ ಅವರ ನಾಟಕಗಳಲ್ಲಿ ಹೊಸ ಮಧ್ಯಮವರ್ಗದ ಸಮಸ್ಯೆಗಳಿವೆ. ಅದನ್ನು ಚಿತ್ರಿಸುವಲ್ಲಿ ಅವರು ಸಫಲರಾಗಿದ್ದಾರೆ. ಅವರ ನಾಟಕಗಳಲ್ಲಿ ರಚನೆಯ ದೃಷ್ಟಿಯಿಂದ ಸಫಲ ನಾಟಕಗಳೆಂದರೆ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳು. ವಸ್ತುವಿನ ನಿರ್ವಹಣೆ ದೃಷ್ಟಿಯಿಂದ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ.

ನಾಟಕ ರಚನೆಯನ್ನು ಕುರಿತು ಅನಕೃ ಅವರಿಗೆ ಒಂದು ಸ್ಪಷ್ಟವಾದ ಕಲ್ಪನೆಯಿತ್ತು : "ನಾಟಕವೆಂದರೆ ಎಂದೋ ಒಮ್ಮೆ ನೋಡಿ ಮರೆತುಬಿಡುವ ವಿಲಾಸ ಸಾಧನವಲ್ಲ. ನಾಟಕದ ಆದರ್ಶ ಭವ್ಯವಾದುದು, ಗುರುತರವಾದುದು. ದೇಶದ ಸಂಸ್ಕೃತಿಯ ಹೆಗ್ಗುರುತೆಂದರೆ ನಾಟಕ; ದೇಶದ ಸಂಸ್ಕೃತಿಯ ವಿಕಾಸಕ್ಕೆ ನಾಟಕವು ಕೊಡುವಷ್ಟು

ಇಂಬು ಬೇರೆ ಯಾವ ಸಾಧನವೂ ಕೊಡಲು ಶಕ್ಯವಿಲ್ಲ. ಮನಸ್ಸನ್ನು ಮುದಗೊಳಿಸುತ್ತಾ, ವಿಚಾರದ ಹಾದಿಯಲ್ಲಿ ಮಾನವನ ವಿಕಾಸವನ್ನು ಸಾಧಿಸುವುದೇ ನಾಟಕ" (ಸಾಹಿತ್ಯ ಮತ್ತು ಜೀವನ. ಪುಟ ೧೯೯, ಶಾರದಾ ಪ್ರಕಟಣಾಲಯ, ಬೆಂಗಳೂರು, ೧೯೪೪).

ಅವರಿಗೆ ನಾಟಕರಚನೆ, ನಾಟಕ ಶಿಲ್ಪ, ವಸ್ತು, ಪಾತ್ರಗಳ ಬಗ್ಗೆ ಎಂತಹ ತೀವ್ರವಾದ ಆಸಕ್ತಿ ಇತ್ತು ಎನ್ನುವುದಕ್ಕೆ ಅವರು ಬರೆದ 'ನಾಟಕ ಕಲೆ' ಕೃತಿ ನಿದರ್ಶನವಾಗಿದೆ. ಈ ಕೃತಿಯಲ್ಲಿ ನಾಟಕದ ಸ್ವರೂಪ, ರಂಗಭೂಮಿಯ ಜೀವಂತಿಕೆ, ಕನ್ನಡ ರಂಗಭೂಮಿಯ ಅವನತಿ, ನಾಟಕದಲ್ಲಿ ಸಂಗೀತದ ಪಾತ್ರ, ವಿನೋದದ ಲಕ್ಷಣಗಳು, ರಂಗಭವನಗಳ ನಿರ್ಮಾಣ ಇಂತಹ ಅತ್ಯಂತ ಮೂಲಭೂತ ವಿಷಯಗಳ ಬಗ್ಗೆ ಚರ್ಚೆ ಇದೆ. ಇದರ ಜೊತೆಗೆ ಬಂಗಾಳಿ ರಂಗಭೂಮಿ, ರಾಷ್ಟ್ರೀಯ ರಂಗಭೂಮಿ, ಯುರೋಪಿನ ಒಂದು ಸಣ್ಣ ಹಳ್ಳಿಯ ರಂಗಭೂಮಿ ಮುಂತಾದ ವಿಷಯಗಳ ಬಗ್ಗೆ ಕೂಡಾ ವಿಚಾರವಿದೆ. ನಾಟಕ ಕಲೆಯ ವಿವಿಧ ಮಗ್ಗುಲುಗಳನ್ನು ಕುರಿತು ಅವರು ನಡೆಸಿರುವ ಚಿಂತನಾಕ್ರಮ, ಅನುಭವಗಳನ್ನು ಹಂಚಿಕೊಂಡಿರುವ ಬಗ್ಗೆ ಇವುಗಳಿಂದಾಗಿ ನಾಟಕವನ್ನು ಕುರಿತು ಅಭ್ಯಾಸ ಮಾಡುವವರಿಗೆ ಇದೊಂದು ಆಕರಯೋಗ್ಯ ಕೃತಿಯಾಗಿದೆ.

ಇದಲ್ಲದೇ ಅವರ ಇನ್ನುಳಿದ ವಿಮರ್ಶಾ ಕೃತಿಗಳು ಹಾಗೂ ಇತರೆ ಕೃತಿಗಳಲ್ಲಿ ನಾಟಕ ಮತ್ತು ರಂಗಭೂಮಿಗೆ ಸಂಬಂಧಿಸಿದ ಅನೇಕ ಲೇಖನಗಳು ಕಂಡುಬರುತ್ತವೆ. ಈ ಎಲ್ಲ ಲೇಖನಗಳು ಆ ಕಾಲದ ಕನ್ನಡ ನೆಲದ ಸಾಂಸ್ಕೃತಿಕ ಬದುಕೊಂದನ್ನು ದಾಖಲಿಸುತ್ತವೆ. ಅವರ ಈ ಕುರಿತ ಬರವಣಿಗೆಗಳಲ್ಲಿ ಕರ್ನಾಟಕದಲ್ಲಿ ಕನ್ನಡ ರಂಗಭೂಮಿಯ ಅವನತಿಗೆ ಕಾರಣಗಳನ್ನು ಹುಡುಕುವ ಪ್ರಯತ್ನವಿದೆ. ಹಾಗೆಯೇ ನಾಟಕ ಕಲೆಯ ಅಭಿವೃದ್ಧಿಗಾಗಿ ಶ್ರಮಿಸಬೇಕಾಗಿರುವುದನ್ನು, ಅದರ ಅಭಿವೃದ್ಧಿಯಾಗಲು ವಹಿಸಬೇಕಾದ ಎಚ್ಚರಿಕೆಗಳನ್ನು ನೀಡುತ್ತಾರೆ. ಸಮಾಜದಲ್ಲಿ ನಾಟಕ ವಹಿಸಬೇಕಾದ ಹೊಣೆ ದೊಡ್ಡದು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಅವರ ನಾಟಕ ಮತ್ತು ರಂಗಭೂಮಿ ಕುರಿತು ಬರಹಗಳು ಅನೇಕರಿಗೆ ಪ್ರೇರಣೆಯನ್ನು, ಆ ಕುರಿತ ಅಧ್ಯಯನ ಮಾಡಲು ಆಸಕ್ತಿಯನ್ನು ಉಂಟುಮಾಡಿದ್ದವು. ಕನ್ನಡ ರಂಗಭೂಮಿ ಕುರಿತು ಬಹಳ ಉಪಯುಕ್ತ ಕಾರ್ಯಗಳನ್ನು ಮಾಡಿರುವ ಡಾ. ಬಿ.ವಿ. ವೈಕುಂಠರಾಜು ಅವರು "ರಂಗಭೂಮಿಯ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಲು ಪ್ರೇರಣೆ ನೀಡಿದ್ದು ಅ.ನ.ಕೃ ಅವರ ಬರಹಗಳು" (ಡಾ. ಬಿ.ವಿ. ವೈಕುಂಠರಾಜು, ಅಮರಚೇತನ, ಪುಟ ೩೮೬. ಸಾಗರ್ ಪ್ರಕಾಶನ, ಬೆಂಗಳೂರು) ಎಂದು ಹೇಳಿದ್ದಾರೆ. ಇಂತಹ ಸಂದರ್ಭಗಳನ್ನು ಗಮನಿಸಿದಾಗ ಅವರ ಬರಹಗಳ ಮಹತ್ವ ಅರಿವಾಗುತ್ತದೆ.

ಅ.ನ.ಕೃ ಅವರು ಸ್ವತಃ ನಟರಾಗಿಯೂ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದರು. ಸ್ವತಃ ಅವರದ್ದೇ ಆದ 'ಮದುವೆಯೋ ಮನೆಹಾಳೋ' ನಾಟಕದಲ್ಲಿ ರಾಮವಧಾನಿ, ಕಿಟ್ಟು, ಸುಬ್ಬು ಪಾತ್ರಗಳನ್ನು ಮಾಡಿದ್ದರು. ಅ.ನ.ಕೃ ವೃತ್ತಿ ನಾಟಕ ಮಂಡಳಿಗಳು ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ ಜನಿಸಿ, ಬಾಲ್ಯದಿಂದಲೇ ಆ ವಾತಾವರಣದಲ್ಲಿ ಬೆಳೆದವರು. ರಂಗಭೂಮಿಯವರೊಂದಿಗೆ ಸಾಕಷ್ಟು ಒಡನಾಟವಿದ್ದುದರಿಂದ ಅನೇಕರ ವೈಯಕ್ತಿಕ ಜೀವನವೂ ಅವರಿಗೆ ಪರಿಚಯವಾಗಿತ್ತು. ರಂಗಭೂಮಿಯಲ್ಲಿ ಕಾಲಕಾಲಕ್ಕೆ ಗುಬ್ಬಿವೀರಣ್ಣ, ವರದಾಚಾರ್ಯ, ಗರುಡ ಸದಾಶಿವರಾಯರು, ಮಹಮ್ಮದ್‌ಪೀರ್, ಬಸವರಾಜ್ ಮನ್ಸೂರ್, ಕೆ. ಹಿರಣ್ಣಯ್ಯ, ಹಂದಿಗನೂರು ಸಿದ್ದರಾಮಪ್ಪ, ಬಳ್ಳಾರಿ ರಾಘವ ಮೊದಲಾದವರೊಂದಿಗೆ ಆತ್ಮೀಯವಾದ ಸಂಬಂಧವಿತ್ತು. ತಮ್ಮ ಆತ್ಮಕಥೆ 'ಬರಹಗಾರನ ಬದುಕು' ಕೃತಿಯಲ್ಲಿ ಇವರೆಲ್ಲರೊಂದಿಗಿನ ಆಪ್ತ ಒಡನಾಟದ ಚಿತ್ರಣ ಮೂಡಿಬಂದಿದೆ. ಇಲ್ಲಿ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಕಾರಣರಾದವರನ್ನು ಸ್ಮರಿಸಿದ್ದಾರೆ. ನಾಟಕ ಕಂಪೆನಿಗಳ ಏಳುಬೀಳುಗಳು ಮತ್ತು ನಟನಾದವನ ವೈಯಕ್ತಿಕ ಸ್ಥಿತಿಗತಿಗಳನ್ನು ಹತ್ತಿರದಿಂದ ಕಂಡಿದ್ದ ಪರಿಣಾಮವಾಗಿ ಅವರು 'ನಟಸಾರ್ವಭೌಮ'ದಂತಹ ಬೃಹತ್ ಕಾದಂಬರಿಯನ್ನು ಬರೆಯಲು ಸಾಧ್ಯವಾಯಿತು. ಈ ಕಾದಂಬರಿಯು ವೃತ್ತಿರಂಗಭೂಮಿ ಕುರಿತು ಅವರಿಗಿದ್ದ ಕಾಳಜಿ–ಕಳಕಳಿಗೆ ನಿದರ್ಶನವಾಗಿದೆ.

ಇಷ್ಟೆಲ್ಲ ನಾಟಕ ಮತ್ತು ರಂಗಭೂಮಿ ಕುರಿತ ಚಟುವಟಿಕೆಯನ್ನುಳ್ಳ ಅ.ನ.ಕೃಷ್ಣರಾಯರು ಮನಸ್ಸು ಮಾಡಿದ್ದರೆ ಬಹುದೊಡ್ಡ ನಾಟಕಕಾರರಾಗಬಹುದಿತ್ತು. ಆದರೆ ಅವರು ಖ್ಯಾತರಾಗಿದ್ದು ಕಾದಂಬರಿಗಳ ಮುಖಾಂತರ. ಅವರು ಕಾದಂಬರಿಗಳ ರಚನೆಗೆ ಮುಖ ಮಾಡಲು ಕಾರಣಗಳನ್ನು ಅನೇಕ ಕೃತಿಗಳ ಮುನ್ನುಡಿಯಲ್ಲಿಯು ಹೇಳಿಕೊಂಡಿದ್ದಾರೆ. ತಮ್ಮ ಜಗಜ್ಯೋತಿ ಬಸವೇಶ್ವರ ನಾಟಕದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: "ನಾನು ಕನ್ನಡ ಸಾಹಿತ್ಯ ಸೇವೆಯನ್ನಾರಂಭಿಸಿದುದು ನಾಟಕ ರಚನೆಯಿಂದ. 'ನಾಟಕಾಂತ ಸಾಹಿತ್ಯ'ವಾದರೂ ನನ್ನ ಪಾಲಿಗೆ ಅದು ಸಾಹಿತ್ಯದ ಆದಿಯಾಯಿತು. ಹದಿನೈದು ನಾಟಕಗಳನ್ನು ಬರೆದು, ಆಡಿಸಿ, ಆಡಿ ದಣಿದು ಸುಮ್ಮನಾದೆ. ಪ್ರಾಗತಿಕವಾದ ನಾಟಕಗಳನ್ನಾಡುವ ರಂಗಮಂದಿರಗಳಿಲ್ಲ, ನಟವರ್ಗವಿಲ್ಲ, ನಿರ್ಮಾತೃಗಳಿಲ್ಲ. ಯಾವ ನಾಟಕ ಬರೆದರೂ ಕಾಲೇಜು, ಹೈಸ್ಕೂಲುಗಳ ವಾರ್ಷಿಕೋತ್ಸವಗಳಲ್ಲಿ ಒಮ್ಮೆ ಪ್ರಯೋಗವಾದುದನ್ನು ನೋಡಿ ತೃಪ್ತಿಪಟ್ಟುಕೊಳ್ಳಬೇಕು. ಆಡುವ ಮಾತು ಹಾಗಿರಲಿ. ಪ್ರಕಟಿಸಿ ತೃಪ್ತಿಪಡುವುದೆಂದರೆ, ಪ್ರಕಾಶಕರು ಕೇವಲ ಕಥೆ ಕಾದಂಬರಿಗಳನ್ನು ಬೇಡುತ್ತಾರೆ. ನಾಟಕಗಳನ್ನು ಪ್ರಕಟಿಸಬಲ್ಲ

ಸಂಸ್ಥೆ ನಮ್ಮಲಿಲ್ಲ. ಹೀಗಾಗಿ ನಾನು ನಾಟಕ ಬರೆಯುವುದನ್ನು ಕೆಲವು ಕಾಲ ವಿಧಿಯಿಲ್ಲದೆ ನಿಲ್ಲಿಸಬೇಕಾಗಿ ಬಂತು". ಇಂತಹ ಸಂದರ್ಭಗಳು ಒಬ್ಬ ಸೃಜನಶೀಲ ನಾಟಕಕಾರನ ಪ್ರತಿಭೆಗೆ ಅಡ್ಡಿ ಮಾಡುವುದಲ್ಲದೆ, ಅನಿವಾರ್ಯವಾಗಿ ಬೇರೆ ಪ್ರಕಾರಗಳತ್ತ ಕೃಷಿ ಮಾಡಲು ಪ್ರೇರೇಪಿಸುತ್ತದೆ. ಹಾಗಾಗಿ ಅ.ನ.ಕೃ ಅವರಿಗೂ ಇಂತಹ ಸಂದರ್ಭ ಕಾದಂಬರಿಯತ್ತ ಮುಖ ಮಾಡಲು ಕಾರಣವಾಗಿದೆ ಎನ್ನಬಹುದು.

ಒಟ್ಟಾರೆ ನಾಟಕ ಪ್ರಕಾರದಲ್ಲಿ ಅ.ನ.ಕೃ ಅವರ ಸಾಧನೆ ದೊಡ್ಡದೆಂದು ಹೇಳಲಿಕ್ಕಾಗುವುದಿಲ್ಲವಾದರೂ ಅದಕ್ಕೆ ಮಹತ್ವವಿದ್ದೇ ಇದೆ. ಕನ್ನಡ ರಂಗಭೂಮಿ ಆಗಿನ್ನೂ ಶೈಶಾವಸ್ಥೆಯಲ್ಲಿದ್ದಾಗ, ಆಗಾಗಲೇ ಬೇರುಬಿಟ್ಟಿದ್ದ ವೃತ್ತಿರಂಗದೊಡನೆ ಬೆಳೆದು ಬಂದ ಹವ್ಯಾಸಿ ರಂಗದ ಉತ್ತಮ ಮತ್ತು ಆಳವಾದ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಇದಕ್ಕೆ ಪೋಷಕ ಹಾಗೂ ಪೂರಕವೆಂಬಂತೆ ಅನಕೃ ಅವರು ನಾಟಕಗಳನ್ನು ರಚಿಸಿ ಪ್ರಯೋಗಶೀಲತೆಯ ಫಲಪ್ರದ ಫಲಿತಾಂಶವನ್ನಿತ್ತರು. ಈ ಮೊದಲೇ ತಿಳಿಸಿದಂತೆ ಅ.ನ.ಕೃ ಒಬ್ಬ ಶ್ರೇಷ್ಠದರ್ಜೆಯ ನಾಟಕಕಾರರೆಂದು ಹೇಳಲಿಕ್ಕಾಗುವುದಿಲ್ಲವಾದರೂ, ಕನ್ನಡ ರಂಗಭೂಮಿಗಾಗಿ ಸಲ್ಲಿಸಿದ ಸೇವೆಯನ್ನು ಕಡೆಗಣಿಸುವುದು ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆ ಸಂದರ್ಭದಲ್ಲಿ ಉತ್ತಮವಾದ ನಾಟಕಗಳು ಹುಟ್ಟಿಬರುವುದಕ್ಕೂ ಅನುಕೂಲಕರವಾದ ವಾತಾವರಣವನ್ನು ಮೂಡಿಸುವಲ್ಲಿ ಅವರು ಪಟ್ಟ ಶ್ರಮ ಸ್ಮರಣೀಯವಾದದ್ದು.

ಗ್ರಂಥಋಣ

೧. ಕೃಷ್ಣರಾಯ, ಶಾ.ಮಂ. – ಅ.ನ.ಕೃಷ್ಣರಾಯರ ಸಾಹಿತ್ಯಶ್ರೇಣಿ ಸಂಪುಟ ೧, ನಾಟಕ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೮.

೨. ಅ.ನ.ಕೃ – ನಾಟಕ ಕಲೆ, ಸಾಗರ್ ಪ್ರಕಾಶನ, ಬೆಂಗಳೂರು – ೨೦೦೬.


೩. ಕೃಷ್ಣರಾಯ, ಶಾ.ಮಂ – ರಸಚೇತನ, ಗೋವಾ ಕನ್ನಡ ಸಂಘ (ರಿ) ಮಡಗಾಂವ್, ಗೋವಾ – ೧೯೭೦.

೪. ನರಹಳ್ಳಿ ಬಾಲಸುಬ್ರಹ್ಮಣ್ಯ – ಅ.ನ.ಕೃ ಮತ್ತು ಕನ್ನಡ ಸಂಸ್ಕೃತಿ ಅಂಕಿತ ಪುಸ್ತಕ, ಬೆಂಗಳೂರು – ೨೦೦೯.

೫. ಅ.ನ.ಕೃ – ಸಾಹಿತ್ಯ ಮತ್ತು ಜೀವನ, ಶಾರದಾ ಪ್ರಕಟಣಾಲಯ, ಬೆಂಗಳೂರು – ೧೯೪೪.

❑❑❑

కై. నెం. ౨౧౯౯-౨౦౦ ప్ర ౩౯౮ -మొ. వా. ను.



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು